# ಕರ್ನಾಟಕ - ನೇಪಾಳ: ಸಾಂಸ್ಕೃತಿಕ ಸಂಬಂಧ

## ಲೇಖಕನ ನುಡಿಗಳು

ಕರ್ನಾಟಕ - ನೇಪಾಳಗಳ ಸಾಂಸ್ಕೃತಿಕ ಸಂಬಂಧ ಕುರಿತಾದ, ಒಂದು ರೀತಿಯಲ್ಲಿ ಸ್ವಲ್ಪ ಮಹತ್ವಾಕಾಂಕ್ಷೆಯ ಯೋಜನೆ ಎಂದು ಕರೆಯಬಹುದಾದ ನನ್ನ ಅಧ್ಯಯನದ ಫಲವಾದ ಈ ಮಾನೋಗ್ರಾಫನ್ನು (monograph) ಓದುಗರ ಕೈಗೆ ನೀಡುತ್ತಿದ್ದೇನೆ. ಆ ವಿಷಯದ ಬಗ್ಗೆ ನಾನು ಓದಿದ್ದನ್ನೆಲ್ಲವನ್ನು, ಓದಿ ಟಿಪ್ಪಣಿ ಮಾಡಿಕೊಂಡದ್ದೆಲ್ಲವನ್ನು ಬರಹಕ್ಕಿಳಿಸಿದ್ದರೆ ಹಲವು ನೂರು ಪುಟಗಳ ಬೃಹತ್‌ಕೃತಿಯಾಗುತ್ತಿತ್ತು. ಆದರೆ ನನ್ನ ಮುಂದೆ ಒಂದು ಖಚಿತ ಸಮಸ್ಯೆಯಿದ್ದುದರಿಂದ ಇಡೀ ನನ್ನ ಬರಹ ಆ ವಿಷಯ ಅಥವಾ ಸಮಸ್ಯೆಯನ್ನು ಕೇಂದ್ರೀಕರಿಸಿಕೊಂಡು ಸಾಗಿರುವುದನ್ನು ಓದುಗರು ಊಹಿಸಿಕೊಳ್ಳಬಹುದು. ಮುಖ್ಯ ವಿಷಯಕ್ಕೆ ಪೋಷಕವಾದ ಹಲವು ಅಂಶಗಳನ್ನು ನಾನು ಅನುಬಂಧಗಳಲ್ಲಿ ನೀಡಿದ್ದೇನೆ. ನಾನು ಟಿಪ್ಪಣಿ ಮಾಡಿಕೊಳ್ಳುವಾಗ ಒಂದೆರಡು ಕೃತಿಗಳ ಪುಟಗಳನ್ನು ಗುರುತು ಮಾಡಿಕೊಳ್ಳದೇ ಇದ್ದುದರಿಂದ ಆ ಕೃತಿಗಳನ್ನು ಹಾಗೇ ಹೆಸರಿಸಿದ್ದೇನೆ: ಪುಟಗಳನ್ನು ಅಲ್ಲಿ ನಮೂದಿಸಿರದಿದ್ದರೆ ಅದೊಂದು ಕೊರತೆಯೆಂದು ಭಾವಿಸಿ ಓದುಗರು ಮನ್ನಿಸಬೇಕಾಗಿ ಕೋರುತ್ತದೆ.

ಈ ಮಾನೋಗ್ರಾಫಿಗಾಗಿ ಸಾಕಷ್ಟು ಶ್ರಮವಹಿಸಿದ್ದೇನೆ. ಎರಡು ವಾರಗಳ ನೇಪಾಳದ ಪ್ರವಾಸವಂತೂ ಸರಿಯೇ. ಬೆಂಗಳೂರಿನ (ಮಿಥಿಕ್‌ಸೊಸೈಟಿ, ಗೆಜೆಟಿಯರ್‌ಕಚೇರಿ, ಇಂಡಿಯನ್‌ಕೌನ್ಸಿಲ್‌ಫಾರ್‌ಹಿಸ್ಟಾರಿಕಲ್‌ರಿಸರ್ಚ್, ಬೆಂಗಳೂರು ವಿಶ್ವವಿದ್ಯಾಲಯ, ಕನ್ನಡ ಸಾಹಿತ್ಯ ಪರಿಷತ್ತು, ಇಂಡಿಯನ್‌ಇನ್‌ಸ್ಟಿಟ್ಯೂಟ್‌ಆಫ್‌ವರ್ಲ್ಡ್ ಕಲ್ಚರ್), ಮೈಸೂರಿನ (ಮೈಸೂರು ವಿಶ್ವವಿದ್ಯಾಲಯ, ಕೇಂದ್ರ ಶಾಸನ ಶಾಸ್ತ್ರ ಇಲಾಖೆ), ಕಾಠಮಾಂಡೊದ (ತ್ರಿಭುವನ ವಿಶ್ವವಿದ್ಯಾಲಯ, ನ್ಯಾಷನಲ್‌ಆರ್ಕೈವ್ಸ್) ಗ್ರಂಥಾಲಯಗಳನ್ನು ಬಳಸಿಕೊಂಡಿದ್ದೇನೆ. ಆ ಎಲ್ಲ ಗ್ರಂಥಾಲಯಗಳ ಪದಾಧಿಕಾರಿಗಳ ಸಹಕಾರವನ್ನು ನಾನು ಕೃತಜ್ಞತೆಯಿಂದ ನೆನೆಯುತ್ತೇನೆ. ಶ್ರೀ ಎಸ್. ಶಿವಣ್ಣ ತಮ್ಮಲ್ಲಿರುವ ಹಲವು ಕೃತಿಗಳನ್ನು ಓದಲು ನೀಡುದುದಲ್ಲದೆ ಈ ಕೃತಿಯ ಗ್ರಂಥಸೂಚಿ, ಶಬ್ದಸೂಚಿ ರಾಮಾಚಾರ್ಯ, ಆಗುಂಬೆ ಎಸ್. ನಟರಾಜ್, ಡಾ. ಸೂರ್ಯನಾಥ ಕಾಮತ್, ಡಾ. ಎಸ್. ನಾಗರಾಜ್‌ಇವರು ತಮ್ಮ ಬಳಿಯಿದ್ದ ಗ್ರಂಥಗಳನ್ನು ಎರವಲು ನೀಡಿ ಸಹಾಯ ಮಾಡಿದ್ದಾರೆ.

ಇಲ್ಲಿ ವಿಶೇಷವಾಗಿ ಸ್ಮರಿಸಬೇಕಾದ ಒಂದು ಹೆಸರು: ಕಾಠಮಾಂಡೊದ ತ್ರಿಭುವನ ವಿಶ್ವವಿದ್ಯಾಲಯದ ಕೇಂದ್ರ ಸಂಸ್ಕೃತಿ ವಿಭಾಗದ ಪ್ರಾಧ್ಯಾಪಕ ಡಾ. ಜಗದೀಶಚಂದ್ರ ಶರ್ಮ ರೆಗ್ಮಿಯವರದ್ದು. ಅವರೊಬ್ಬ ಹಿರಿಯ ವಿದ್ವಾಂಸರೆಂದು ಅಲ್ಲಿನ ವಿದ್ವಾಂಸರ ಬಾಯಿಂದ ಕೇಳಿದ ನಾನು ಅವರಿಗೆ ದೂರವಾಣಿ ಮಾಡಿ ನೇಪಾಳಕ್ಕೆ ನಾನು ಬಂದಿರುವ ಉದ್ದೇಶವನ್ನು ತಿಳಿಸಿದಾಗ, ನಾನು ಕಾಠಮಾಂಡೊ ಬಿಡುವ ಹಿಂದಿನ ದಿನ ಸಂಜೆ ಅವರು ನನ್ನ ಕೊಠಡಿಗೆ ಬಂದು, ತಮ್ಮ Nepal – India Cultural Relations (A Historical Cultural Retrospect through Historical Times) ಎಂಬ ಅಪ್ರಕಟಿತ ಕೃತಿಯ ಹಸ್ತಪ್ರತಿಯನ್ನು (ಪುಟಗಳು ೧೯೮) ನೀಡಿದರು. ಅದನ್ನು ತೆಗೆದು ಕಣ್ಣು ಹಾಯಿಸುತ್ತಿದ್ದಂತೆ, ವಿಶೇಷವಾಗಿ ಪಶುಪತಿ ದೇವಾಲಯ ಮತ್ತು ಕರ್ನಾಟಕಗಳಿಗೆ ಸಂಬಂಧಿಸಿದ ಅಮೂಲ್ಯ ಮಾಹಿತಿ ಕಾಣಿಸಿತು. ಅದರ ಕೆಲವು ಪುಟಗಳನ್ನು ನೆರಳಚ್ಚು ಮಾಡಿಸಿಕೊಳ್ಳಬೇಕೆಂಬ ನನ್ನ ಆಶಯವನ್ನು ವ್ಯಕ್ತಪಡಿಸುತ್ತಿದ್ದಂತೆ ಅವರು ಇಡೀ ಹಸ್ತಪ್ರತಿಯನ್ನೇ ನನಗಿತ್ತು ಅದರ ಮಾಹಿತಿಯನ್ನು ಸೂಕ್ತವಾಗಿ ಬಳಸಿಕೊಳ್ಳಲು ಸೂಚಿಸಿದ್ದು ನನಗೆ ಆಶ್ಚರ್ಯವಾಯಿತು. ಅದನ್ನು ಭಾರತದಲ್ಲಿ ಯಾರಾದರೂ ಪ್ರಕಟಿಸಲು ಮುಂದೆ ಬಂದರೆ ಸಂತೋಷ ಎಂದರು. ಆ ಕೃತಿಗೆ ನೇಪಾಳದ ಭಾರತೀಯ ರಾಯಭಾರಿ ಕಚೇರಿಯ "ಬಿ.ಪಿ. ಕೊಯಿರಾಲ ಇಂಡಿಯ - ನೇಪಾಲ ಫೌಂಡೇಷನ್" ಧನಸಹಾಯ ನೀಡಿದೆ. ಆ ಕೃತಿ ಇಂಗ್ಲಿಷ್‌ನಲ್ಲಿರುವುದರಿಂದ ಅದರ ಪ್ರಕಟಣೆಗೆ ನಾನು ಪ್ರಯತ್ನಿಸುವುದು ಸ್ವಲ್ಪ ಕಷ್ಟಸಾಧ್ಯವೇ. ಆ ಕೃತಿಯನ್ನು ಈ ನನ್ನ ಮಾನೋಗ್ರಾಫಿನಲ್ಲಿ ಅಲ್ಲಲ್ಲಿ ಬಳಸಿಕೊಂಡು ಸ್ಮರಿಸಿದ್ದೇನೆ. ಆ ವಿದ್ವಾಂಸರ ಸೌಜನ್ಯ, ಸಹಕಾರ ಇವು ನಾನು ಮರೆಯಲಾಗದ ಅನುಭವ.

ಅಂತೆಯೇ ಕಾಠಮಾಂಡೊದ ಸಾಹಿತಿ, ಸಮಾಜ ಕಾರ್ಯಕರ್ತ ಶ್ರೀ ಭರತ್(ಮಣಿ) ಜಂಗಂ, ಡಾ. ಮಾಲಾ ಮಲ್ಲ ಇಬ್ಬರೂ ನನ್ನ ನೇಪಾಳ ಪ್ರವಾಸ ಸಂದರ್ಭದಲ್ಲಿ ಬಹು ಸ್ನೇಹದಿಂದ ಸಹಕರಿಸಿದರು. ಶ್ರೀ ಜಂಗಂ ಮತ್ತು ಭಕ್ತಪುರದ ಇತಿಹಾಸಜ್ಞ ಡಾ. ಪುರುಷೋತ್ತಮಲೋಚನ ಶ್ರೇಷ್ಠ ಅವರು ತಮ್ಮ ಬರಹಗಳ ಮೇಲಚ್ಚುಗಳನ್ನು ನೀಡಿದರು. ಕಾಠಮಾಂಡೊದ ತ್ರಿಭುವನ ವಿಶ್ವವಿದ್ಯಾಲಯದ ನೇಪಾಲಿ - ಏಷಿಯನ್‌ಅಧ್ಯಯನ ಸಂಸ್ಥೆಯು ತ್ರಿಭುವನ ವಿಶ್ವವಿದ್ಯಾಲಯದಲ್ಲಿ ನನ್ನ ವಿಶೇಷ ಉಪನ್ಯಾಸವೊಂದಕ್ಕೆ (Social Dimensions of Bhakti Movements in South Asia) ವ್ಯವಸ್ಥೆ ಮಾಡಿದುದನ್ನು (೧೩.೯.೨೦೦೧) ನಾನು ಸ್ಮರಿಸುವುದಲ್ಲದೆ, ಆ ಉಪನ್ಯಾಸ ವ್ಯವಸ್ಥೆಗೆ ಕಾರಣಕರ್ತರಾದ ಅಂದಿನ (೨೦೦೦ - ೦೧) ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಕೆ. ಸಿದ್ಧಪ್ಪನವರ ಸಹಕಾರವನ್ನೂ ಸ್ಮರಿಸುತ್ತೇನೆ.

ನನ್ನ ನೇಪಾಳದ ಪ್ರವಾಸಕ್ಕೆ ಧನಸಹಾಯ ನೀಡಿದ ಕರ್ನಾಟಕ ಸರ್ಕಾರಕ್ಕೆ, ಅದರಲ್ಲೂ ಮಾನ್ಯ ಸಂಸ್ಕೃತಿ ಸಚಿವೆ ಶ್ರೀಮತಿ ರಾಣಿ ಸತೀಶರಿಗೆ ಹಾಗೂ ಅವರ ಆಪ್ತಕಾರ್ಯದರ್ಶಿ ಡಾ. ಎ. ಆರ್. ಮಂಜುನಾಥ್ ಅವರಿಗೆ, ಬೆಂಗಳೂರಿನ ನಿರ್ಮಾಣ್‌ಷೆಲ್ಟರ್ಸ್‌ನ ಶ್ರೀ ವಿ. ಲಕ್ಷ್ಮೀನಾರಾಯಣ ಅವರಿಗೆ, ಮೈಸೂರಿನ ಸುತ್ತೂರು ಮಹಾಸಂಸ್ಥಾನದ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರಿಗೆ ನಾನು ವಿಶೇಷವಾಗಿ ಋಣಿಯಾಗಿದ್ದೇನೆ.

ನೇಪಾಳದಲ್ಲಿ ನನ್ನ ವಾಸ್ತವ್ಯದ ಎಲ್ಲ ಏರ್ಪಾಟು ಮಾಡಿದ ಬೆಂಗಳೂರಿನ ನನ್ನ ಪಕ್ಕದ ಮನೆಯ ನೇಪಾಳ ಮೂಲದ ಶ್ರೀಮತಿ ಅನಿತ ಸಂಜಯ್, ಕಾಠಮಾಂಡೊದ ಅವರ ಬಂಧು ಶ್ರೀಮತಿ ಅರ್ಚನಾ ಸುರೇಂದ್ರ ಅವರಿಗೆ ನಾನು ನನ್ನ ಕೃತಜ್ಞತೆ ಹೇಳಲೇಬೇಕು. ನೇಪಾಳಕ್ಕೆ ಹೋಗುವ ಮುನ್ನ ಬೆಂಗಳೂರಿನಲ್ಲಿ ಭೇಟಿ ಮಾಡಿದ್ದ ಪಶುಪತಿ ದೇವಾಲಯದ ನಿವೃತ್ತ ಪ್ರಧಾನ ಅರ್ಚಕರಾದ ಶ್ರೀ ರಾವಲ್‌ಅನಂತಕೃಷ್ಣ ಸೋಮಯಾಜಿಯವರ, ಕಾಠಮಾಂಡೊದಲ್ಲಿ ತಮ್ಮ ಮನೆಗೆ ನನ್ನನ್ನು ಬರಮಾಡಿಕೊಂಡು ಅದರಿಂದ ಕಂಡ ಈಗಿನ ಪ್ರಧಾನ ಅರ್ಚಕರಾದ ಶ್ರೀ ಮಹಾಬಲೇಶ್ವರ ಭಟ್‌ಅವರ ಉಪಕಾರ ಮಾತನ್ನು ಮೀರಿದ್ದು. ಅವರಿಬ್ಬರಿಂದಲೂ ನನಗೆ ಹಲವು ವಿಷಯಗಳು ತಿಳಿದವು. ಅಂತೆಯೇ ಕಾಠಮಾಂಡೊದಲ್ಲಿ ಶ್ರೀ ಮೈಥಿಲಿ ಕುಮಾರ ಝ, ಬೆಂಗಳೂರಿನಲ್ಲಿ ಭೇಟಿಯಾಗಲು ಸಾಧ್ಯವಾದ ಕಾಠಮಾಂಡೊದ ಶ್ರೀಶ್ರೀದೇವ ಬೈದ್ಯ, ಶ್ರೀಮತಿ ಪದ್ಮಿನಿ ಬೈದ್ಯ ಇವರೆಲ್ಲ ನನಗೆ ಹಲವು ಉಪಯುಕ್ತ ವಿಷಯ ತಿಳಿಸಿದರು. ಕಾಠಮಾಂಡೊ, ಭಕ್ತಪುರಗಳಿಗೆ ತಾವೇ ಸ್ವತಃ ಹೋಗಿ ನನಗೆ ಅಲ್ಲಿನ ಪ್ರಮುಖ ಜಾಗಗಳ, ಶಿಲ್ಪಗಳ, ಗುಡಿಗಳ ಚಿತ್ರಗಳನ್ನು ತೆಗೆದು ಕಳುಹಿಸಿಕೊಟ್ಟ ಶ್ರೀ ಶ್ರೀದೇವ ಬೈದ್ಯರ ಸೋದರ ಶ್ರೀ ಸುಂದರ ದೇವ್‌ಬೈದ್ಯರಿಗೆ ನಾನು ಋಣಿಯಾಗಿದ್ದೇನೆ. (ನನ್ನ ಜೊತೆ ಭಕ್ತಪುರಕ್ಕೆ ಬಂದು ಅಲ್ಲಿ ಶ್ರೀ ಭರತ್‌ಜಂಗಂ ಹಲವು ಚಿತ್ರಗಳನ್ನು ತೆಗೆದರೂ ಅವು ಕ್ಯಾಮರಾ ದೋಷದಿಂದಾಗಿ ದುರದೃಷ್ಟವಶಾತ್‌ಮೂಡಿಬರಲಿಲ್ಲ.) ಕಾಠಮಾಂಡೊದ ಜೈನ ಭವನದ ಇಡೀ ಸಿಬ್ಬಂದಿ ನನ್ನನ್ನು ಬಹು ಆದರದಿಂದ ಕಂಡಿತು. ಅವರಲ್ಲಿ ಮ್ಯಾನೇಜರ್‌ಮಾತ್ರವಲ್ಲ, ಕಚೇರಿ ಸಿಬ್ಬಂದಿ, ಅಡುಗೆ ಮನೆಯ ಸಿಬ್ಬಂದಿ, ಕೊಠಡಿಯ ಕಸ ಗುಡಿಸುವ, ಕಕ್ಕಸ್ಸು ತೊಳೆಯುವ ಎಲ್ಲರೂ ನನಗೆ ಆತ್ಮೀಯರಾಗಿ ಬಿಟ್ಟಿದ್ದರು. ಅವರೆಲ್ಲರ ಹೆಸರುಗಳನ್ನು ಬರೆದುಕೊಳ್ಳೆ ಆ ಮೇಲೆ ಪೇಚಾಡಿದೆ: ಅವು ಮರೆತುಹೋಗಿವೆ. (ಕೊಯಿರಾಲ -ಮಾಜಿ ಪ್ರಧಾನಿ ಹೆಸರಿನ 'ಕಾಫಿ ಹುಡುಗ': ಇದು ಮಾತ್ರ ನೆನಪಿದೆ). ಜೈನಭವನದಲ್ಲಿ ಪ್ರತಿ ದಿನ ಬೆಳಿಗ್ಗೆ ಆರರ ಹೊತ್ತಿಗೆ ಅಲ್ಲಿಂದ ಪಂನಮಸ್ಕಾರ ಮಂತ್ರಗಳ, ಸ್ತೋತ್ರಗಳ ಧ್ವನಿ ಮುದ್ರಿತ ವಾಣಿ ಕೇಳುತ್ತ ಎಚ್ಚರಗೊಳ್ಳುತ್ತಿದ್ದೆ. ಬೆಳಿಗ್ಗೆ ಎಂಟೂವರೆ, ಒಂಬತ್ತರ ಹೊತ್ತಿಗೆ ಸ್ನಾನ ಮಾಡಿ ಬಟ್ಟೆ ಹಾಕಿಕೊಂಡು ತೀರ್ಥಂಕರರಿಗೆ ನಮಸ್ಕರಿಸಲು ಪೂಜಾಭವನಕ್ಕೆ ಹೋದರೆ ಅಲ್ಲಿ ಭಕ್ತರು ಹಾಡುತ್ತ, ಮೆತ್ತಗೆ ಕುಣಿಯುತ್ತ ಇದ್ದ ದೃಶ್ಯವನ್ನು ನಾನು ಮರೆಯಲಾರೆ. ಸಂಜೆಯ ಹೊತ್ತೂ ಇದೇ ಅನುಭವವಾಗುತ್ತಿತ್ತು. ನನಗೆ ಸಹಜವಾಗಿಯೇ ಶ್ರವಣ ಬೆಳ್ಗೊಳದಲ್ಲಿ ಕಳೆದ ದಿನಗಳು ಜ್ಞಾಪಕಕ್ಕೆ ಬರುತ್ತಿದ್ದವು. ಜೈನಭವನದ ಪಕ್ಕದ ಟೆಲಿಫೋನ್‌ಬೂತಿನ ವ್ಯಕ್ತಿಯೂ ಅಷ್ಟೇ : ಅವರೆಲ್ಲರ ಸ್ನೇಹವನ್ನು ನಾನು ನೆನಪಿಸಿಕೊಳ್ಳದಿದ್ದರೆ ತಪ್ಪಾಗುತ್ತದೆ. ನೇಪಾಳದ ಡಾ. ಮಾಲಾ ಮಲ್ಲರನ್ನು ಪರಿಚಯಿಸಿದ ಬೆಂಗಳೂರಿನ ಡಾ. ಕೆ. ಎಸ್. ಅರುಣಿಯವರನ್ನೂ ಅಷ್ಟೇ.

ನೇಪಾಳದಿಂದ ವಾಪಸಾದ ಮೇಲೆ ಪತ್ರಿಕಾಗೋಷ್ಠಿ ಮೂಲಕ, ದೂರದರ್ಶನದ ಬೇರೆ ಬೇರೆ ವಾಹಿನಿಗಳ ಮೂಲಕ, ಲೇಖನಗಳ ಮೂಲಕ, ಕನಿಷ್ಠ ಏಳು ಉಪನ್ಯಾಸಗಳ ಮೂಲಕ (ಬೆಂಗಳೂರು, ತುಮಕೂರು, ಧಾರವಾಡ, ಗುಲ್ಬರ್ಗಾ) ಅಲ್ಲಿನ ನನ್ನ ಶೋಧಗಳನ್ನು ಅನುಭವಗಳನ್ನು ಸಾರ್ವಜನಿಕರಿಗೆ ವಿದ್ಯಾರ್ಥಿಗಳಿಗೆ ವಿದ್ವಾಂಸರಿಗೆ ತಿಳಿಸಿದೆ. ಸಾಕಷ್ಟು ಪ್ರಚಾರವೂ ದೊರೆಯಿತು. ಬೆಂಗಳೂರಿಗೆ

ಬಂದಿದ್ದ ಶ್ರೀ ಶ್ರೀದೇವ ಬೈದ್ಯ ದಂಪತಿಗಳನ್ನು ಶ್ರೀಮತಿ ರಾಣಿ ಸತೀಶರಿಗೆ ಪರಿಚಯ ಮಾಡಿಕೊಟ್ಟು ನೇಪಾಳಕ್ಕೆ ಕರ್ನಾಟಕದಿಂದ ಒಂದು ಸಾಂಸ್ಕೃತಿಕ ತಂಡವನ್ನು ಕಳುಹಿಸಲು ಮನವಿ ಮಾಡಿದಾಗ ಮಂತ್ರಿಗಳು ಒಪ್ಪಿದರು: ಅದು ಬೇಗ ಕಾರ್ಯಗತವಾಗಲಿ ಎಂದು ಹಾರೈಸೋಣ. ಬೆಂಗಳೂರಲ್ಲಿ ಈ ಮಾನೊಗ್ರಾಫನ್ನು ಬರೆಯಲಾರಂಭಿಸುವ ಪ್ರಯತ್ನವು ದಿನದಿಂದ ದಿನಕ್ಕೆ ಮುಂದುವರಿದು ಒಳಗೇ ಚಡಪಡಿಕೆ ಆರಂಭವಾಯ್ತು. ಕೊನೆಗೊಮ್ಮೆ ನಿರ್ಧಾರ ಮಾಡಿ ಮೈಸೂರಿಗೆ ಟಿಪ್ಪಣಿಗಳ ಸಮೇತ ಹೋಗಿ ಅಲ್ಲಿ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಹಾಸಂಸ್ಥಾನದ ಅತಿಥಿ ಗೃಹದಲ್ಲಿ ತಂಗಿ ಏಳು ದಿನ ಬೆಳಗಿನಿಂದ ರಾತ್ರಿಯವರೆಗೆ ಟಿಪ್ಪಣಿಗಳನ್ನು ಒಂದು ಕ್ರಮಕ್ಕೆ ತಂದು ಈ ಮಾನೊಗ್ರಾಫಿನ ಅರ್ಧದಷ್ಟನ್ನು ಬರೆದು ಮುಗಿಸಿದೆ. ಅತ್ಯಂತ ಪ್ರಶಾಂತ ಸ್ಥಳ; ಬೆಟ್ಟದ ಬುಡದ ಮೆಟ್ಟಲಿಂದ ಶ್ರೀಮಠಕ್ಕೆ ಕೇವಲ ನಾಲ್ಕು ನಿಮಿಷ ನಡಗೆ; ನಾನಿದ್ದ ಕೊಠಡಿಯ ಹಿಂಭಾಗಕ್ಕೆ ಹತ್ತಡಿ ದೂರಕ್ಕೆ 'ಹಿಂದೂಗಳ ಹೂಳುವ ಸ್ಮಶಾನ'ದ ಪೌಳಿ; ಮುಂಭಾಗದಲ್ಲಿ ಅತ್ಯಂತ ಸುಂದರ ಕಲ್ಲ ಕೊಳ; ವಿಶಾಲವಾದ ಬಯಲು; ಹೂ ಹಣ್ಣುಗಳಿಂದ ತುಂಬಿದ ಗಿಡಮರಗಳು; ಅಲ್ಲೇ ಒಂದೆಡೆ ಎರಡು ಆನೆಗಳು, ತಂತಿ ಬೇಲಿಯ ಒಳಗೆ ಜಿಂಕೆ, ಮೊಲ, ಬಾತುಕೋಳಿ ಹಕ್ಕಿಗಳು. ಪೂಜ್ಯರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಮಠದ ಮ್ಯಾನೇಜರ್ಎಂ. ಶಿವಸ್ವಾಮಿ, ಅಸಿಸ್ಟೆಂಟ್ಮ್ಯಾನೇಜರುಗಳಾದ ಬಿ. ಶಿವರಾಮ್, ಕೆ. ಎಸ್. ಮಹಾದೇವನ್ಆಗಿ ಅವರಾದಿಯಾಗಿ ಅಲ್ಲಿನ ಅಡುಗೆ ಮನೆಯ ಸಿಬ್ಬಂದಿ ಎಲ್ಲರೂ ಬಹು ಪ್ರೀತಿ ಆದರದಿಂದ ಕಂಡರು. ಆ ವಾತಾವರಣ ನನ್ನನ್ನು ಗೆದ್ದುಬಿಟ್ಟಿತ್ತು : ಒಂದು ವಾರದ ಬಳಿಕ ನಾನು ಬೆಂಗಳೂರಿಗೆ ವಾಪಸಾದಾಗ ಬೆಂಗಳೂರನ್ನು ನನ್ನ ಮನಸ್ಸು ತಿರಸ್ಕರಿಸಿತೋ ಅಥವಾ ನನ್ನನ್ನು ಬೆಂಗಳೂರು ತಿರಸ್ಕರಿಸಿತೋ ಅಂತೂ ಬೆಂಗಳೂರಿಗೆ ಬರಲೇಬೇಕಾಗಿತ್ತು, ಬಂದೆ (ನೇಪಾಳದಿಂದ ಭಾರತಕ್ಕೆ ಬಂದಾಗ ಆದ ಅನುಭವ ಮರುಕಳಿಸಿತು). ಪೂಜ್ಯಶ್ರೀ ಸ್ವಾಮೀಜಿಯವರಿಗೆ ಶ್ರೀಮಠದ ಸಿಬ್ಬಂದಿಗೆ ನಾನು ಬಹುವಾಗಿ ಋಣಿ. ನನ್ನ ನೇಪಾಳದ ಪ್ರವಾಸದ ಬಗ್ಗೆ ಬಹು ಆಸಕ್ತಿ ತೋರಿದವರು ಧಾರವಾಡದ ಹಿರಿಯರು ಡಾ. ಜಿ. ಎಸ್. ದೀಕ್ಷಿತ್ಅವರ ಪ್ರೀತಿಯನ್ನು, ಈ ಮಾನೊಗ್ರಾಫ್ಬಗ್ಗೆ ಆಗಾಗ್ಗೆ ವಿಚಾರಿಸುತ್ತಿದ್ದ ಡಾ. ಎಚ್. ಎಂ. ಮರುಳಸಿದ್ಧಯ್ಯನವರ ಸ್ನೇಹವನ್ನು ನಾನು ಸ್ಮರಿಸಲೇಬೇಕು.

"ಪಂಪ ಪ್ರಶಸ್ತಿ" ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಏರ್ಪಡಿಸಿದ ಅಭಿನಂದನ ಸಮಾರಂಭಕ್ಕೆ ಹಲವು ವರ್ಷಗಳ ಬಳಿಕ ಇದೇ ಫೆಬ್ರವರಿಯಲ್ಲಿ ನಾನು ಹಂಪಿಗೆ ಹೋಗಿ, ವಿರೂಪಾಕ್ಷನ ದರ್ಶನ ಮಾಡಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಆಶಯವನ್ನು ನಾನು ನನ್ನ ಮಿತಿಯಲ್ಲೇ ಮುಂದುವರಿಸುವ ಸಂಕಲ್ಪವನ್ನು ಮಾಡಿದೆ. ಹಂಪಿಯಲ್ಲಿ ಹಿಪ್ಪಿಗಳಿಂದ ಆಗುತ್ತಿರುವ ಹೊರ, ಒಳ ವಾತಾವರಣ ದೂಷಣೆಯನ್ನು ಕಂಡು ಮನಸ್ಸು ನೊಂದಿತು. (ಮುಂದೆ ೧೩.೩.೨೦೦೩ ರಂದು ಬೆಂಗಳೂರಿನಿಂದ ನಾವು ಕೆಲವರು ಹಂಪಿಯ ಸ್ಥಳೀಯರ ಬೆಂಬಲ ಪಡೆದು ಆ ಬಗ್ಗೆ ಹಂಪಿಯಲ್ಲೇ ಪ್ರತಿಭಟನೆ ಮಾಡಿದಾಗ ಒಳ್ಳೆಯ ಪ್ರತಿಕ್ರಿಯೆ ದೊರಕಿತು. ಆ ಬಗ್ಗೆ ಆಗಬೇಕಾದ್ದು ಸಾಕಷ್ಟಿದೆ.) ಮಿತ್ರರಾದ ಕುಲಪತಿ ಡಾ. ಎಚ್. ಜೆ. ಲಕ್ಕಪ್ಪಗೌಡರ ಮನೆಯಲ್ಲಿ ನಾವೆಲ್ಲ ಸೇರಿದಾಗ, ನೇಪಾಳದ ನನ್ನ ಕಿರುಕೃತಿಯನ್ನು ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಲು ಸಿದ್ಧವೆಂದು ಸೂಚನೆ ಬಂದೊಡನೆ ನಾನು ಸಂತೋಷದಿಂದ ಒಪ್ಪಿದುದರ ಫಲ ಈ ಪ್ರಕಟಣೆ. ಕನ್ನಡ ವಿಶ್ವವಿದ್ಯಾಲಯವು ಈ ಕಿರುಕೃತಿಯನ್ನು ಪ್ರಕಟಿಸುತ್ತಿರುವುದು ನನಗೆ ಸಂತೋಷದ ವಿಷಯ ಮಾತ್ರವಲ್ಲ, ಹೆಮ್ಮೆಯ ವಿಷಯವೂ ಹೌದು. ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಎಚ್. ಜೆ. ಲಕ್ಕಪ್ಪಗೌಡರಿಗೆ ಕುಲಸಚಿವ ಡಾ. ಕೆ. ವಿ. ನಾರಾಯಣರಿಗೆ ಪ್ರಸಾರಾಂಗದ ನಿರ್ದೇಶಕ ಡಾ. ಹಿ. ಚಿ. ಬೋರಲಿಂಗಯ್ಯನವರಿಗೆ ನಾನು ಆಭಾರಿಯಾಗಿದ್ದೇನೆ. ಈ ಕೃತಿಯನ್ನು ಸುಂದರವಾಗಿ ಅಚ್ಚು ಮಾಡಿರುವ ಸ್ನೇಹಾ ಪ್ರಿಂಟರ್ಸ್ಮುದ್ರಣಾಲಯದ ಡಾ. ಎಸ್. ವಿದ್ಯಾಶಂಕರ ಅವರಿಗೆ, ಅವರ ಮಕ್ಕಳಾದ ಶ್ರೀಮತಿ ವಿ. ಪ್ರಿಯದರ್ಶಿನಿ, ವಿ. ಮಹೇಶ್, ವಿ. ಕಾರ್ತಿಕ್ಅವರಿಗೆ, ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿರುವ ಚಿ|| ಎಂ. ಮಹೇಶ್‌ಗೆ ನನ್ನ ಹಾರ್ದಿಕ ಕೃತಜ್ಞತೆಗಳು.

ಈ ಮಾನಗ್ರಾಫ್ಹಿಂದೆ ನನ್ನ ಶ್ರಮವಿರುವುದು ನಿಜ; ಅದರ ಬಹುಮುಖಿ ಅನುಭವದ ಸಮಗ್ರ ನಿರೂಪಣೆಯನ್ನು ನಾನು ದಾಖಲಿಸಿದರೆ ಅದು ಯುವ ಸಂಶೋಧಕರಿಗೆ ಸಹಾಯಕವಾದರೂ ಆಗಬಹುದು. ಅದಕ್ಕಿಂತ ಮುಖ್ಯವಾಗಿ ಹೇಳಬೇಕಾದುದೆಂದರೆ, ನನ್ನ ಕೆಲವು ಮಾನಸಿಕ ಯಾತನೆಗಳನ್ನು ಮರೆಯಲಿಕ್ಕೂ ಈ ಕೃತಿರಚನೆ ಸಹಾಯ ಮಾಡಿತು. ನನ್ನ ಕೃತಿಯ ಮಿತಿಯೆಂದರೆ ನಾನು ನೇಪಾಲಿ ಹಿಂದಿ ಸಂಸ್ಕೃತ ಭಾಷೆಗಳಲ್ಲಿರುವ ಕೃತಿಗಳನ್ನೇ ಮೂಲದಲ್ಲಿ ಓದಲು ಸಾಧ್ಯವಿರಲಿಲ್ಲ. ಕೆಲವು ನೇಪಾಲಿ ಭಾಷೆಯ ಲೇಖನ ಹಾಗೂ ಕೃತಿಗಳನ್ನು ಓದಿ ಅವುಗಳ ಸಾರಾಂಶವನ್ನು ತಿಳಿಸಿ ಸಹಾಯ ಮಾಡಿದ್ದಾರೆ. ಡಾ. ಪ್ರಭಾಶಂಕರ್'ಪ್ರೇಮಿ' ಡಾ. ವಿಮಲಾ ನಾಯ್ಡು ಹಾಗೂ ಡಾ. ವಿಜಯಾ ಸುಬ್ಬರಾಜ್. ಆದರೆ ವಿದ್ವಾಂಸರ ಬರಹಗಳನ್ನು ಶಾಸನಗಳನ್ನು ಮೂಲ ಕೃತಿಗಳನ್ನು (ಸಂಸ್ಕೃತ, ನೇಪಾಲಿ,

ಹಿಂದಿ) ಅವುಗಳ ಮೂಲ ಭಾಷೆಯಲ್ಲೇ ಓದಿ ವಿಷಯ ಸಂಗ್ರಹ ಮಾಡಿದ್ದರೆ ಆಗ ಈ ಕೃತಿ ಇನ್ನಷ್ಟು ಅಧಿಕೃತವಾಗುತ್ತಿತ್ತು. ಎಂದರೆ ನಾನು ಮಾಡಿರುವ ಕೆಲಸವು ಮುಂದುವರಿಯುವ ಅಗತ್ಯವಿದೆ. ನನ್ನ ತೃಪ್ತಿ ಎಂದರೆ ಇದು: ನನ್ನ ಸಂಶೋಧನಾಶಕ್ತಿ, ನಾಡು ರಾಷ್ಟ್ರಗಳ ಬಗ್ಗೆ ಇರುವ ಪ್ರೇಮಗಳಿಂದಾಗಿ ಕರ್ನಾಟಕದ ಉದ್ದಗಲಕ್ಕೂ ಹೋಗಿಬಂದಿದ್ದೇನೆ; ಕರ್ನಾಟಕದ ಆಚೆಯ ಆಂಧ್ರಕ್ಕೆ ಹೋಗಿ ಅಲ್ಲಿರುವ ಪಂಪನ ತಮ್ಮ ಜಿನವಲ್ಲಭನ ಶಾಸನದ ಬಗ್ಗೆ ಸಮೀಕ್ಷೆ ನಡೆಸಿದ್ದೇನೆ; ಭಾರತದ ಆಚೆಯ ನೇಪಾಳಕ್ಕೂ ಹೋಗಿ ಅಲ್ಲಿಯೂ ಸಮೀಕ್ಷೆ ನಡೆಸಿದ್ದೇನೆ. ನನ್ನ ತೃಪ್ತಿಯ ಹಿಂದಿರುವ ತೀವ್ರ ಅತೃಪ್ತಿ ಸ್ಪಷ್ಟವಿದೆ. ಒಂದು ಕಾಲಕ್ಕೆ ಕನ್ನಡ ನಾಡೇ ಆಗಿದ್ದು, ಈಗ ಕೈತಪ್ಪಿ ಹೋಗಿರುವ ಮಹಾರಾಷ್ಟ್ರ, ಗೋವಾ, ಆಂಧ್ರ, ತಮಿಳುನಾಡು, ಕೇರಳಗಳ ಗಡಿಗಳಿಗೆ ಹೋಗಿ ಅಲ್ಲಿನ ಕನ್ನಡ ಸಂಸ್ಕೃತಿಯ ಪಳೆಯುಳಿಕೆಗಳನ್ನು ಮಾತ್ರವಲ್ಲ, ಭಾರತದ ಬೇರೆ ಬೇರೆಡೆ ಕನ್ನಡ ದೊರೆಗಳು ಆಳಿದ ಜಾಗಗಳಿಗೇ ಹೋಗಿ ಅಲ್ಲಿ ಸಮೀಕ್ಷೆಗಳನ್ನು ನಡೆಸುವ ಅಗತ್ಯವಿದೆ. ಇದು ಸಂಪೂರ್ಣ ತನ್ಮಯತೆ, ನಿಷ್ಠೆ, ಶ್ರಮಗಳನ್ನು ನಿರೀಕ್ಷಿಸುವ ಕೆಲಸ. ಹೊಸ ಹೊಸ ಕ್ಷೇತ್ರಗಳಿಗೆ ಪ್ರವೇಶಿಸಿ ಹೊಸ ಹೊಸ ಸಂಗತಿಗಳನ್ನು ಗುರುತಿಸುವ, ಹೊಸ ವ್ಯಾಖ್ಯಾನಗಳಿಗೆ ಅವಕಾಶ ಮಾಡಿಕೊಡುವ ಕೆಲಸವಾಗಬೇಕಾಗಿದೆ. ನನ್ನ ಈ ಕಿರುಕೃತಿ ಕರ್ನಾಟಕದ ಬಗೆಗಿನ ನಮ್ಮ ಅರಿವನ್ನು ಮಾತ್ರವಲ್ಲ, ನಮ್ಮ ದೃಷ್ಟಿ ವ್ಯಾಪ್ತಿಯನ್ನು ಹೆಚ್ಚಿಸಿದೆ. 'ಕಾವೇರಿಯಿಂದ ಗೋದಾವರಿ'ವರೆಗಿನ ಕರ್ನಾಟಕ ಪ್ರಸಿದ್ಧ ಜೊತೆಗೆ ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಇನ್ನೂ ದೂರಕ್ಕೆ ಕರ್ನಾಟಕ ಸಂಸ್ಕೃತಿ ಪಸರಿಸಿತ್ತು, ತನ್ನ ಪ್ರಭಾವವನ್ನು ವಿಸ್ತರಿಸುತ್ತ ಭಾರತೀಯ ಸಂಸ್ಕೃತಿಗೆ ಅನನ್ಯ ಕೊಡುಗೆಗಳನ್ನು ನೀಡಿತ್ತು ಎಂಬ ಅರಿವನ್ನಾದರೂ ಈ ಮಾನೊಗ್ರಾಫ್‌ತಂದುಕೊಡುವುದಾದರೆ, ಹೆಚ್ಚಿನ ಸಂಶೋಧನೆಗೆ ಪ್ರಚೋದನೆ ನೀಡುವುದಾದರೆ ನನ್ನ (ಅಥವಾ ಯಾವುದೇ ಲೇಖಕನ) ಪ್ರಯತ್ನ ಸಾರ್ಥಕವಾದಂತೆ ಅಲ್ಲವೇ!

ಕೊನೆಯದಾಗಿ ನೇಪಾಳದಂತಹ ಚಿಕ್ಕ ರಾಷ್ಟ್ರದಿಂದ ಇಂದಿನ ಭಾರತ ಅಥವಾ ಕರ್ನಾಟಕ ಕಲಿಯಬೇಕಾದ ಒಂದು ಸಂಗತಿ. ಕಾಠಮಾಂಡೊ; ಅದಕ್ಕೆ ಆರು, ಹತ್ತು ಕಿಲೋಮೀಟರು ದೂರದ ಪಾಟಣ್, ಭಕ್ತಪುರ ಈ ನಗರಗಳ ಸ್ಮಾರಕಗಳನ್ನು ಯುನೆಸ್ಕೊ ತನ್ನ ವಿಶ್ವಪರಂಪರೆ ಪಟ್ಟಿಯಲ್ಲಿ ಸೇರಿಸಿದೆ. ಕಾಠಮಾಂಡೊದ ಪಶುಪತಿನಾಥ ದೇವಾಲಯಕ್ಕೆ ದಿನವೂ ಸಾವಿರಾರು ಭಕ್ತರ ಭೇಟಿ, ಪಕ್ಕದೇ ನದಿ ದಡದಲ್ಲಿ ಸದಾ ಚಿತೆಗಳ ಬೆಂಕಿ, ಹೊಗೆ. ಇಷ್ಟಿದ್ದರೂ ಆ ಮೂರು ನಗರಗಳ ಸ್ಮಾರಕಗಳನ್ನು ನೇಪಾಳ ಸರ್ಕಾರವು ಯುನೆಸ್ಕೋ ವಿಧಿಸಿರುವ ನಿಯಮಗಳಿಗನುಗುಣವಾಗಿ ಶುಭ್ರತೆಯನ್ನು, ಐತಿಹಾಸಿಕ ವಾತಾವರಣವನ್ನು ಕಾಪಾಡಿದೆ. ನೇಪಾಳದ ಮೂರರಷ್ಟಿರುವ ಕರ್ನಾಟಕದ ಎರಡು ಜಾಗಗಳನ್ನು ಮಾತ್ರ (ಹಂಪಿ, ಪಟ್ಟದಕಲ್) ಯುನೆಸ್ಕೋ ತನ್ನ ವಿಶ್ವಪರಂಪರೆಯ ಪಟ್ಟಿಯಲ್ಲಿ ಸೇರಿಸಿದೆ. ಹಂಪಿಯ ವಾತಾವರಣವನ್ನು ಹಾಳು ಮಾಡಲು ಕರ್ನಾಟಕ ಸರ್ಕಾರ ಅವಕಾಶ ಮಾಡಿಕೊಟ್ಟಿದರ ಫಲವಾಗಿ, ಹಂಪಿಯನ್ನು ಯುನೆಸ್ಕೋ ತನ್ನ 'ಅಪಾಯದ ಪಟ್ಟಿ'ಯಲ್ಲಿ ಸೇರಿಸಿದೆ: ಅದರ ನಿಯಮಗಳನ್ನು ಪಾಲಿಸದಿದ್ದರೆ ಮುಂದೊಮ್ಮೆ ಯುನೆಸ್ಕೊ ತನ್ನ ಪ್ರತಿಷ್ಠಿತ ವಿಶ್ವಪರಂಪರೆ ಪಟ್ಟಿಯಿಂದ ಹಂಪಿಯನ್ನು ತೆಗೆದು ಹಾಕಬಹುದು.

ಈ ಮಾತುಗಳೊಡನೆ ಈ ಕಿರುಕೃತಿಯನ್ನು ವಿದ್ವಾಂಸರ, ಕನ್ನಡಾಭಿಮಾನಿಗಳ, ಸಂಸ್ಕೃತಿ ಪ್ರೇಮಿಗಳ ಕೈಗೆ ವಿನಯದಿಂದ ಒಪ್ಪಿಸುತ್ತಿದ್ದೇನೆ.

**ಎಂ. ಚಿದಾನಂದ ಮೂರ್ತಿ**

ಬೆಂಗಳೂರು

೧೮.೮.೨೦೦೩

# ೧. ಹಿನ್ನೆಲೆ

ಮೂರು ವರ್ಷಗಳ ಹಿಂದೆ ಒಂದು ಸಂಜೆ ಅಚ್ಚರಿಯೊಂದು ನನಗೆ ಕಾದಿತ್ತು. ನೇಪಾಳದ ಭಕ್ತಪುರದಿಂದ ಬಂದಿದ್ದ ಯೋಗೇಶ್‌ರಾಜ್ ಎಂಬ ಯುವಕ ಅಲ್ಲಿಂದ ತಂದಿದ್ದ ಎರಡು ಶಾಸನಗಳ ಚಿತ್ರಗಳನ್ನು ತೋರಿಸಿ "ಅವುಗಳಲ್ಲಿ ಕನ್ನಡ ಇರುವಂತಿದೆ: ದಯಮಾಡಿ ಓದಿ ಹೇಳಿ" ಎಂದರು. ನೋಡಿ ಆಶ್ಚರ್ಯವೂ ಆಯಿತು, ಸಂತೋಷವೂ ಆಯಿತು. ನೇಪಾಲಿ ಭಾಷೆಯ ತಾಮ್ರಪಟದ ಕೊನೆಯಲ್ಲಿ ಮತ್ತು ಒರಳುಕಲ್ಲಿನ ಮೇಲೆ ಕನ್ನಡ ಅಕ್ಷರಗಳಲ್ಲಿ ಕನ್ನಡ ಭಾಷೆಯ ಬರಹಗಳಿದ್ದುವು. ಅವು ಭಕ್ತಪುರದ ಜಂಗಂ ಮಠದ ಶಾಸನಗಳು. ಆ ಹೊತ್ತಿಗಾಗಲೇ ನನಗೆ ರಾಜಶೇಖರ ವಿರೂಪಾಕ್ಷ ಸ್ವಾಮಿ ಗೋರಟಾ ಅವರ ಲೇಖನವೊಂದರಿಂದ ಭಕ್ತಪುರದ ಜಂಗಂ ಮಠದ ಸ್ಥೂಲ ಪರಿಚಯವಾಗಿತ್ತು.[1] ಯೋಗೇಶ್‌ರಾಜ್‌ಹೇಳಿದರು: ನೇಪಾಳವನ್ನು ಆಳಿದ್ದು ಕನ್ನಡ ದೊರೆಗಳು. ಅದೂ ನನಗೆ ಆಗಲೇ ಸ್ವಲ್ಪ ಪರಿಚಯವಾಗಿದ್ದ ಸಂಗತಿಯೇ. ಆಗುಂಬೆ ಎಸ್. ನಟರಾಜ್‌ತಮ್ಮ "ಹೊರನಾಡಿನ ಮೂರು ಕರ್ನಾಟಕ ರಾಜ್ಯಗಳು" ಎಂಬ ಕಿರುಕೃತಿಯಲ್ಲಿ ನೇಪಾಳ, ಬಂಗಾಳ, ತಮಿಳುನಾಡುಗಳಲ್ಲಿ ಆಳಿದ ಕರ್ನಾಟಕದ ರಾಜವಂಶಗಳ ಪರಿಚಯವನ್ನು, ಆ ಪ್ರದೇಶಗಳಿಗೆ ಹೋಗಿ ಅಲ್ಲಿನ ಪ್ರಾಚೀನ ಸ್ಥಳಗಳನ್ನು ಪರಿಶೀಲಿಸಿ ಕೆಲ ವಿವರಗಳನ್ನು ನೀಡಿದ್ದರು. ಕಾಶಿಯ ಜಂಗಮವಾಡಿ ಮಠದ ಇಕ್ಕೇರಿ, ಕೊಡಗು, ಮೈಸೂರು ಅರಸರ ಶಾಸನಗಳೇ ಕರ್ನಾಟಕದ ಹೊರಗೆ ಅತಿ ದೂರದಲ್ಲಿ ದೊರಕಿರುವ ಕನ್ನಡ ಬರಹಗಳು ಎಂಬ ಸಾಮಾನ್ಯ ಗ್ರಹಿಕೆಯನ್ನು ಹಿಂದಕ್ಕೆ ಹಾಕಿ, ಇನ್ನೂ ಉತ್ತರಕ್ಕೆ ನೇಪಾಳದಲ್ಲಿ ಕನ್ನಡ ಶಾಸನಗಳು ದೊರಕುತ್ತಿರುವುದು ನನಗೆ ಮಹತ್ವದ ಹೊಸ ಸಂಗತಿಯಾಗಿತ್ತು. ನೇಪಾಳಕ್ಕೆ ಹೋಗಿ ಎಲ್ಲವನ್ನೂ ಪ್ರತ್ಯಕ್ಷ ಪರಿಶೀಲಿಸಬೇಕೆಂಬ ಕನಸು ಮೂಡಿದ್ದು ಹಾಗೆ. ಪಶುಪತಿ ದೇವಾಲಯದ ಅರ್ಚಕರು ಕರ್ನಾಟಕದವರು ಎಂಬ ಸಂಗತಿಯಂತೂ ಎಲ್ಲರಿಗೂ ತಿಳಿದ ವಿಷಯ. ವಿಶ್ವದ ಅತ್ಯಂತ ಸುಂದರ ದೇಶಗಳಲ್ಲಿ ಒಂದಾದ ನೇಪಾಳವನ್ನು ನೋಡುವ ಬಯಕೆಯೂ ಅದರ ಜೊತೆ ಸೇರಿಕೊಂಡಿತ್ತು.

ನನ್ನ ಮನೆಯ ಪಕ್ಕದ ಶ್ರೀಮತಿ ಅನಿತ ಸಂಜಯ್‌ನೇಪಾಳದವರಾಗಿದ್ದು, ಕಾಠಮಾಂಡೊದಲ್ಲಿರುವ ತಮ್ಮ ಬಂಧುಗಳಿಂದ ಎಲ್ಲ ಬಗೆಯ ಸಹಕಾರವನ್ನು ಕೊಡಿಸುವುದಾಗಿ ಹೇಳಿದರು. ಅವರೂ ಯೋಗೇಶ್‌ರಾಜ್‌ಅವರೂ ತಮ್ಮ ಮಾತೃಭಾಷೆ ನೇಪಾಳಿಯಲ್ಲಿ ಪರಸ್ಪರ ಮಾತನಾಡಿಕೊಂಡರು: ನೇಪಾಳದಿಂದ ದೂರದ ದಕ್ಷಿಣ ಭಾರತಕ್ಕೆ ಬಂದಿದ್ದ ಯೋಗೇಶ್‌ರಾಜ್‌ಮತ್ತು ಬೆಂಗಳೂರಿನಲ್ಲಿ ನೆಲಸಿ ಅಚ್ಚ ನೇಪಾಳಿ ಭಾಷೆಯಲ್ಲಿ ಮಾತನಾಡಲು ಹೆಚ್ಚಿನ ಅವಕಾಶವಿಲ್ಲದ ಶ್ರೀಮತಿ ಸಂಜಯ್‌ಅವರಿಗೆ ಇಬ್ಬರಿಗೂ ಸಂತೋಷದ ಸಂಗತಿ ಅದಾಗಿತ್ತು.

ಕರ್ನಾಟಕ ಸರ್ಕಾರ, ಬೆಂಗಳೂರಿನ ನಿರ್ಮಾಣ್‌ಷೆಲ್ಟರ್ಸ್, ಮೈಸೂರಿನ ಶ್ರೀ ಶಿವರಾತ್ರೀಶ್ವರ ಮಹಾಸಂಸ್ಥಾನ ಇವುಗಳಿಂದ ನನಗೆ ಧನಸಹಾಯ ದೊರೆಯುವ ಭರವಸೆಯೂ ಸಿಕ್ಕಿತು. ನೇಪಾಳದ ಸಂಶೋಧನ ಪ್ರವಾಸದ ಮುನ್ನ ಸುಮಾರು ಒಂದು ವರ್ಷ ನೇಪಾಳದ ಚರಿತ್ರ, ಬುಡಕಟ್ಟುಗಳು, ಹಬ್ಬಗಳು ಇತ್ಯಾದಿ ಕುರಿತಂತೆ ಸಾಕಷ್ಟು ಅಧ್ಯಯನ ಮಾಡಿ ಟಿಪ್ಪಣಿ ಮಾಡಿಕೊಂಡೆ. ಆ ಅಧ್ಯಯನದ ಸಮಯದಲ್ಲಿ ನನಗೆ ಹಲವು ಹೊಸ ಸಂಗತಿಗಳೂ ಲಭ್ಯವಾದುವು, ನೇಪಾಳದಲ್ಲಿ ಲಕ್ಷ್ಯವಿಟ್ಟು ನೋಡಬೇಕಾದ ಸಂಗತಿಗಳೂ ಕೆಲವು ಹೊಳೆದುವು. ಈ ಮಧ್ಯೆ ಕೆಲವು ಸಾಂಸಾರಿಕ ಸಮಸ್ಯೆಗಳಿಂದಾಗಿ ನೇಪಾಳ ಪ್ರವಾಸವನ್ನು ಮುಂದೆ ಹಾಕಬೇಕಾಯ್ತು. ಸಕ್ಕರೆ ತೊಂದರೆಯಿಂದ ಪ್ರಜ್ಞಾಹೀನನಾಗಿ, ಆಮಧಲಡ ಚಿಕಿತ್ಸೆಯಿಂದ ಚೇತರಿಸಿಕೊಂಡರೂ ನೇಪಾಳ ಪ್ರವಾಸವನ್ನು ಆ ಸ್ಥಿತಿಯಲ್ಲಿ ಕೈಬಿಡಬೇಕೋ ಏನೋ ಎಂಬ ಅಳುಕೂ ನನ್ನನ್ನು ಬಾಧಿಸಿತು. ಅಂತೂ, ೨೦೦೨ರ ಸೆಪ್ಟೆಂಬರ್ ೧೫ ರಿಂದ ೩೦ ರವರೆಗೆ ಹದಿನೈದು ದಿನ ನೇಪಾಳ ಸಂಶೋಧನ ಪ್ರವಾಸವನ್ನು ಮುಗಿಸಿ ನನ್ನ ಬದುಕಿನ ಒಂದು ಸಾರ್ಥಕ ಭಾಗವನ್ನು ಕಳೆದೆನೆಂದು ಕೃತಕೃತ್ಯತೆಯ ಭಾವ ನನ್ನು ತುಂಬಿಕೊಂಡಿತು.

**ಕರ್ನಾಟಕದ ಹೊರಗೆ ಕನ್ನಡ ದೊರೆಗಳು**

ಕರ್ನಾಟಕದ ಹೊರಗೆ, ಭಾರತಾದ್ಯಂತ ಕನ್ನಡಿಗ ದೊರೆಗಳು ಆಳಿ ಅಲ್ಲಲ್ಲಿನ ಪ್ರಾದೇಶಿಕ ಸಂಸ್ಕೃತಿಯನ್ನು ಬೆಳೆಸಿದ್ದಾರೆ. ಈ ಬಗ್ಗೆ ಕನ್ನಡಿಗರಿಗಿರುವ ಅಕ್ಷಮ್ಯ ಅವಜ್ಞೆಗಳ ಬಗ್ಗೆ ೧೯೫೫ರಷ್ಟು ಹಿಂದೆ ಡಿ.ಸಿ ಸರ್ಕಾರರಂತಹ ಇತಿಹಾಸಕಾರರು ಮರುಗಿದ್ದಾರೆ.[2] ಆರನೇ

ಶತಮಾನದಲ್ಲಿ ಸ್ಥಾಪನೆಗೊಂಡ ಬಾದಾಮಿ ಚಾಲುಕ್ಯರು ಭಾರತದ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿರುವರಲ್ಲದೆ ಭಾರತಾದ್ಯಂತ ಅವರು ಹರಡಿದರು. ಅವರೂ ಸೇರಿದಂತೆ ಮುಂದಿನ ಕನ್ನಡ ರಾಜಮನೆತನಗಳು ವ್ಯಾಪಕಗೊಳಿಸಿದ 'ಕನ್ನಡಿಗ ಸಂಸ್ಕೃತಿ'ಯ ಬಗ್ಗೆ ಅಧ್ಯಯನವೇ ನಡೆದಿಲ್ಲ (There is ample evidence to prove that, for several centuries from the foundation of the Chalukya House of Badami in the sixth century A.D, the Kannadigs were not merely one of the important peoples on the stage of Indian history, but they actually spread over wide areas of India. However, neither the characteristics of the Kannadiga culture nor impact on the areas outside Karnataka have so far been studied. The world of scholars will be grateful to the Karnataka University if it is successful in initiating studies in this interesting subject.").[3]

ಭಾರತದ ಹೊರಗೆ ಆಳಿದ ಕನ್ನಡ ರಾಜಮನೆತನಗಳು ಸ್ಥೂಲವಾಗಿ ಇಂತಿವೆ. ಕಳಿಂಗದ ಪೂರ್ವ ಗಂಗರು ( ಕ್ರಿ.ಶ. ೫ನೇ ಶ.), ಆಂಧ್ರದ ವೆಂಗಿಯ ಪೂರ್ವ ಚಾಳುಕ್ಯರು (೭ನೇ ಶ.), (ಬಹುಶಃ ಕಳಿಂಗದ ಕದಂಬರೂ ಕೂಡ). ಬಂಗಾಳ ಬಿಹಾರಗಳ ಪಾಲರ (ಕ್ರಿ.ಶ. ೮ನೇ ಶ.) ದಾಖಲೆಗಳಲ್ಲಿ ಕರ್ನಾಟಕ (ಕರ್ನಾಟಕ ಸೈನಿಕರ) ಹೆಸರಿವೆ. ಪಾಲರಿಗೂ ರಾಷ್ಟ್ರಕೂಟರಿಗೂ ಇದ್ದ ವೈವಾಹಿಕ ಸಂಬಂಧ ಇದಕ್ಕೆ ಕಾರಣವಿರಬಹುದು. ಬಂಗಾಳದ ಸೇನರು (೧೧ನೇ ಶ.) ಕರ್ನಾಟ ಮೂಲದವರು. ಮತ್ತು ಚಾಲುಕ್ಯರ ಮೊದಲನೆಯ ಸೋಮೇಶ್ವರ, ಅವನ ಮಗ ಆರನೆಯ ವಿಕ್ರಮಾದಿತ್ಯರು ಪೂರ್ವ ಭಾರತವನ್ನು ಗೆದ್ದುದರ ಪರಿಣಾಮವೇ "ಕನಾಟ"ರೆಂದು ಕರೆದಿಕೊಳ್ಳುವ ಸೇನೆ ವಂಶ. ಆ ವಂಶದ ಮೂಲಪುರುಷ ಸಾಮಂತ ಸೇನನನ್ನು (ಸು. ೧೦೫೦) ಅವನ ದಾಖಲೆಗಳಲ್ಲಿ 'ದಾಕ್ಷಿಣಾತ್ಯ'ನೆಂದು, ಅವನ ಮೊಮ್ಮಗ ವಿಜಯಸೇನನನ್ನು (ಸು.೧೦೬೫) 'ಬ್ರಹ್ಮಕ್ಷತ್ರಿಯ' ಅಥವಾ 'ಕರ್ನಾಟ ಕ್ಷತ್ರಿಯ'ನೆಂದು ಕರೆದಿದೆ. ಅವನ ವಂಶಸ್ಥ ಬಲ್ಲಾಳ ಸೇನ (ಕ್ರಿ.ಶ ೧೨ನೇ ಶ.) ಇವರು ಚಂದ್ರ ವಂಶದ ಕ್ಷತ್ರಿಯರು. (ನೇಪಾಳದ "ಕರ್ನಾಟರು" ಸೂರ್ಯವಂಶದವರು). ಇವನ ಮಗ ತುರ್ಕಿಷ್‌ಮಸಲ್ಮಾನರಿಗೆ ಬಾಗ ಬೇಕಾಯ್ತು. ಸೇನರ ರಾಜಧಾನಿ ನಬೋದ್ವೀಪ (ನವದ್ವೀಪ) ಬಳಿ "ಬಲ್ಲಾಳ್‌ದೀಬ್" ಎಂಬ ದಿಬ್ಬವಿರುವುದು ದಾಖಲಾಗಿದೆ (ಬಲ್ಲಾಳ್ - ಕನ್ನಡ ವ್ಯಕ್ತಿನಾಮ. ದೀಬ್=ದಿಬ್ಬ).

ಭಾರತದ ಹಲವೆಡೆ ರಾಷ್ಟ್ರಕೂಟ ವಂಶಗಳು ಕಾಣಿಸಿವೆ. ಕರ್ನಾಟಕದ ರಾಷ್ಟ್ರಕೂಟರು (೮ - ೧೦ಶ.) ಕನ್ಯಾಕುಮಾರಿಯವರೆಗೆ ಗೆದ್ದು ಸಿಲೋನ್‌ಮೇಲೂ ದಾಳಿ ನಡೆಸಿದ್ದರು. ಅವರ ವ್ಯಾಪ್ತಿಗೆ ಈಗಿನ ಮಹಾರಾಷ್ಟ್ರದ ಇಡೀ ದಕ್ಷಿಣ ಪಶ್ಚಿಮ ಭಾಗ ಸೇರಿತ್ತು. ಗುಜರಾತಿನ ಚೌಳುಕ್ಯರು (೧೦ - ೧೩ನೇ ಶ.) ಮೂಲತಃ ಕರ್ನಾಟಕದ ಚಾಲುಕ್ಯರೇ. ಗುಜರಾತಿನ ಚೌಳುಕ್ಯರ (೧೨ ಶ.) ಅಥವಾ ಸೋಲಂಕಿಗಳ ರಾಣಿ ನಾಯಕಿ ದೇವಿ ಗೋವೆಯ ಕನ್ನಡ ದೊರೆ ಕದಂಬ ಪೆರ್ಮಾಡಿದೇವನ ಮಗಳು. (ಪೆರ್ಮಾನಡಿಯು ವಿಕ್ರಮಾದಿತ್ಯನ ಮಗಳ ಮಗ, ಗೋವೆಯ ದೊರೆ) ವಿಧವೆಯಾಗಿದ್ದ ಅವಳ ಚೌಳುಕ್ಯ ರಾಜ್ಯದ ಮೇಲೆ ಆಕ್ರಮಣ ಮಾಡಿದ ಘೋರಿ ಮಹಮ್ಮದನನ್ನು ೧೧೭೮ರಲ್ಲಿ ಸೋಲಿಸಿ, ದೆಹಲಿಯ ಪೃಥ್ವಿರಾಜ ಚೌಹಾಣನಿಂದ "ಯವನ ವಿಜೇತೆ" ಎಂಬ ಖ್ಯಾತಿಯನ್ನು ಪಡೆದಳು. (ಸೂರ್ಯನಾಥ ಕಾಮತ್: ಕರ್ನಾಟಕದ ವೀರರಾಣಿಯರು, ಪು. ೧೯ - ೨೧.)ಸು. ೯೬೫ರ ಕಾಲದ ಇವರಲ್ಲಿ "ಬಾರಪ್ಪ" ಎಂಬುವವನ ಹೆಸರಿದೆ.[4] ಇಂದಿಗೂ "ಸೋಲಂಕಿ" ವಂಶನಾಮದವರು ಗುಜರಾತಿನಲ್ಲಿದ್ದಾರೆ. ("ಸೋಲಂಕಿ" ಪದವು "ಚಾಲುಕ್ಯ" ಪದದ ತದ್ಭವ.)

ದೇವಗಿರಿಯ ಯಾದವರು ಕನ್ನಡ ದೊರೆಗಳು. ಮಾನಪುರದ ರಾಷ್ಟ್ರಕೂಟರು (೬ - ೭ಶ.), ಬೀರಾರಿನ ರಾಷ್ಟ್ರಕೂಟರು (೭ ಕ್ರಿ. ಶ.), ಒರಿಸ್ಸಾದ ರಾಷ್ಟ್ರಕೂಟರು (೧೧ - ೧೨ ಶ.) ಕನ್ನಡಿಗರು. ಮಧ್ಯಪ್ರದೇಶವನ್ನು ಆಳಿದವರು (೭೬೦ - ೮೬೫) ರಾಷ್ಟ್ರಕೂಟರೇ. ಕನೋಜಿನ ರಾಷ್ಟ್ರಕೂಟರೂ ಅಷ್ಟೇ (೧೧ - ೧೨ ಶ.) ಇವರ ೧೨ - ೧೩ನೇ ಶತಮಾನದ ಶಾಸನದಲ್ಲಿ ಲಖಣ ಪಾಲನ ಕಾಲದಲ್ಲಿ "ಈಶಾನಶಿವ" ಎಂಬ ಗೌಡ ದೇಶದ ಶೈವಗುರುವು ಹರಿಯಾಣದ "ಸಿಂಹಪಲ್ಲಿ"ಯಲ್ಲಿದ್ದು ಒಂದು ಶಿವದೇವಾಲಯ ಕಟ್ಟಿಸಿದನು. (ಪಲ್ಲಿ – ಪಳ್ಳಿ. ಇದು ದ್ರಾವಿಡ ಭಾಷಾ ಪದ.) ರಾಜಸ್ಥಾನದಲ್ಲಿ ಆಳಿದ ರಾಠೋಡರು (ರಠಡರು) ರಾಷ್ಟ್ರಕೂಟರೇ (೧೩ - ೧೪ ಶ.) ಹಸ್ತಿಕುಂಡಿ, ಧನೋಪ್, ಬಿಥುದ ಅವರ ಕೇಂದ್ರಗಳು.[5] ಗುಜರಾತ್, ಮಾಳವಗಳಲ್ಲಿ ಆಡಳಿತ ವಿಭಾಗಗಳನ್ನು ಹಳ್ಳಿಗಳ ಸಂಖ್ಯೆಯಿಂದ ಸೂಚಿಸುವ ಪದ್ಧತಿಗೆ ಕರ್ನಾಟಕವೇ ಮೂಲ. (ನೋಡಿ : "ಬನವಾಸಿ ೧೨೦೦೦" ನಾಡು). ಮಿಥಿಲೆಯನ್ನಾಳಿದ ಕರ್ನಾಟ ರಾಜರೂ ಕೂಡ ಆಡಳಿತ ಘಟಕಗಳನ್ನು ಹಳ್ಳಿಗಳ ಸಂಖ್ಯೆಯಿಂದ ಸೂಚಿಸುತ್ತಿದ್ದುದು ಗಮನಾರ್ಹ. 'ಗ್ರಾಮಪತಿ'ಯು ಒಂದು ಗ್ರಾಮದ ಕಂದಾಯ ವಸೂಲು

ಮಾಡುವವನಾದರೆ 'ದಶಗ್ರಾಮಿಕ'ನು ಹತ್ತು ಗ್ರಾಮಗಳ ಕಂದಾಯ ವಸೂಲು ಮಾಡುವ ಅಧಿಕಾರಿ; 'ಸಹಸ್ರ ಗ್ರಾಮಪತಿ'ಯು ಸಾವಿರ ಗ್ರಾಮಗಳ ಕಂದಾಯದ ಅಧಿಕಾರಿ. (Sinha : Mithila under the Karnatas, P. 136 – 7.) ಬಂಗಾಳ ಕೊಲ್ಲಿಯ ಆಚೆಯ ಆಗ್ನೇಯ ದ್ವೀಪಗಳ ಮೇಲೂ ಕರ್ನಾಟಕದ ಪ್ರಭಾವ ಆಗಿದೆ. ಅಲ್ಲಿನ ಶಾಸನಗಳ ಪೇಟಿಕಾ ಶಿರಸ್ಸಿನ ಬ್ರಾಹ್ಮಿಲಿಪಿಯು ಕದಂಬರ ಕಾಲದ ಲಿಪಿಯೇ ಆಗಿದೆ. ಇಂಡೋ ಚೈನೀಸ್‌ನ ಇಂಡೊನೇಷಿಯದ ಏಳು ಎಂಟನೇ ಶತಮಾನದ ದಾಖಲೆಗಳಲ್ಲಿ "ಶಕ" ವರ್ಷ ಸೂಚಿತವಾಗಲು ಕರ್ನಾಟಕದ ಪ್ರಭಾವವೇ ಕಾರಣ. (ಪಲ್ಲವರು 'ಶಕ' ವರ್ಷ ಬಳಸಲಿಲ್ಲ; ೬ನೇ ಶತಮಾನದಿಂದಲೇ ಬಾದಾಮಿ ಚಾಲುಕ್ಯರು ಅದನ್ನು ಬಳಸುತ್ತಿದ್ದರು.) ಅಲ್ಲಿ ದಶಮಾಂಶ ಪದ್ಧತಿಯ ಸಂಖ್ಯೆಗಳನ್ನು ನಮೂದಿಸಲು ಕರ್ನಾಟಕದ ಪ್ರಭಾವವೇ ಕಾರಣ. (ಮೇಲಿನ ಮಾಹಿತಿಗೆ ನಾನು ಡಿ. ಸಿ. ಸರ್ಕಾರ್‌ಲೇಖನಕ್ಕೆ ಕೃತಜ್ಞ.)

ಹಿಮಾಚಲಪ್ರದೇಶದಲ್ಲಿ ಆಳಿದ ಸೇನರೂ ಕೂಡ (ಕ್ರಿ. ಶ. ೧೨ – ೧೩ಶ.)ಬಂಗಾಳದ ಸೇನ ವಂಶದವರೇ (ಅರ್ಥಾತ್‌ಅವರ ಮೂಲ ಕರ್ನಾಟಕವೇ). ಬಂಗಾಳದ ಲಕ್ಷ್ಮಣ ಸೇನ ಆ ಪ್ರದೇಶದ ಕೊನೆಯ ಹಿಂದೂ ದೊರೆ. ಅವನ ವಂಶದ ರೂಪಸೇನ್‌ಪಂಜಾಬಿಗೆ ಹೋಗಿ ಅಲ್ಲಿ ಆಳಿದನು; ಅವನ ಮಗ ಬೀರಸೇನ ಹಿಮಾಚಲ ಪ್ರದೇಶದ ಸುಕೇತ್‌ಗೆ ಹೋಗಿ (ಕ್ರಿ. ಶ. ೧೨೩೩) ಅಲ್ಲಿ ಒಂದು ರಾಜ್ಯವನ್ನು ಕಟ್ಟಿದನು. ಇದು ಭಾರತದ ಸ್ವಾತಂತ್ರ್ಯದ ಬಳಿಕ ಭಾರತದಲ್ಲಿ ವಿಲೀನವಾಯ್ತು. ಈಗಲೂ ಆ ಸೇನರ ವಂಶಸ್ಥರಾದ ರಾಜಾ ಅಶೋಕ್‌ಪಾಲ್‌ಸೇನ್, ತಿಕ್ಕ ಉಮೇಶ್ವರ ಸಿಂಗ್‌ಇವರು ಮಂಡಿ ಎಂಬ ಊರಿನ ಅರಮನೆಯಲ್ಲಿ ವಾಸವಾಗಿದ್ದಾರೆ. ಅವರು ಮೂಲತಃ ಕರ್ನಾಟಕದವರೆಂದು ಮತ್ತೆ ಹೇಳಬೇಕಾಗಿಲ್ಲ.[6] 'ಕಾಲಿಕಾ' ಇವರ ಕಾಲದಲ್ಲಿ ಸಾಹಿತ್ಯ, ಶಿಲ್ಪ, ಖಗೋಳ ವಿಜ್ಞಾನ, ವೈದ್ಯ ವಿಜ್ಞಾನಗಳು ಬೆಳೆದುವು.

ಆಧುನಿಕ ಪೂರ್ವ ಭಾರತದಲ್ಲಿ ಮಾನ್ಯವಾಗಿದ್ದ ಕಾನೂನು ಗ್ರಂಥವಾದ ವಿಜ್ಞಾನೇಶ್ವರನ "ಮಿತಾಕ್ಷರಾ" ಕಲ್ಯಾಣ ಚಾಲುಕ್ಯರ ಕಾಲದಲ್ಲಿ ರಚಿತವಾಗಿದ್ದರೆ, ಬಂಗಾಳದಲ್ಲಿ ಪ್ರಚುರವಾಗಿದ್ದ ಜೀಮೂತವಾಹನನ "ದಾಯ ಭಾಗ"ವು ಸೇನರ ಕಾಲದ್ದು: ಎರಡೂ ವಂಶಗಳು ಕರ್ನಾಟಕದವು ಎಂಬುದನ್ನು ಹೇಳಬೇಕಾಗಿಲ್ಲ. ಸುಪ್ರಸಿದ್ಧ ಕವಿ ಜಯದೇವನು (ಕೃತಿ – ಸಂಸ್ಕೃತ "ಗೀತ ಗೋವಿಂದ") ಲಕ್ಷ್ಮಣಸೇನನ ಆಸ್ಥಾನಕವಿ (ಕ್ರಿ. ಶ. ೧೨೦೦). ಬಂಗಾಳದ ಮಹಿಷಾಸುರ ಮರ್ದಿನಿ ಅಥವಾ ದುರ್ಗಾ (ಕಾಲೀ) ಮೂಲತಃ ಕರ್ನಾಟಕದ ಚಾಮುಂಡಿ ಎಂದೂ ಹೇಳುವವರಿದ್ದಾರೆ.[7] ಬಹುಶಃ ಅದು ಸರಿಯಾಗಿರಲಾರದು.

ಕರ್ನಾಟಕದ ಹೊರಗೆ ಕನ್ನಡಿಗರು ಉತ್ತರ ಬಿಹಾರ ಮತ್ತು ನೇಪಾಳಗಳನ್ನು ಕೂಡಿಸಿದಂತೆ ಆಳಿದರು: ಅವರೇ "ಕರ್ನಾಟ"ರು ಎಂದು ತಮ್ಮ ದಾಖಲೆಗಳಲ್ಲಿ ಕರೆದುಕೊಂಡಿರುವ ಮಿಥಿಲೆಯ "ಕರ್ನಾಟ" ರಾಜರು.

**ನೇಪಾಳ:**

ಭಾರತದ ಉತ್ತರಕ್ಕೆ, ದಕ್ಷಿಣದಲ್ಲಿ ಪಶ್ಚಿಮ ಬಂಗಾಳ ಬಿಹಾರ ಮತ್ತು ಉತ್ತರ ಪ್ರದೇಶಗಳಿಗೆ ಅಂಟಿಕೊಂಡಂತಿರುವ ಈಗಿನ ನೇಪಾಳವು ಹದಿನೆಂಟು ಮಿಲಿಯನ್‌ಜನಸಂಖ್ಯೆಯಿರುವ ೧೪೦, ೭೯೮ ಚದರ ಕಿಲೋ ಮೀಟರ್‌ವ್ಯಾಪ್ತಿಯ, "ವಿಶ್ವದ ಏಕೈಕ ಹಿಂದೂ ರಾಷ್ಟ್ರ"ವೆಂದು ನೇಪಾಳಿಗರು ಹೆಮ್ಮೆಯಿಂದ ಹೇಳಿಕೊಳ್ಳುವ ಒಂದು ಸ್ವತಂತ್ರ ರಾಷ್ಟ್ರ (ಚಿತ್ರ – ೧). "ನೇಪಾಳ" ಪದವು "ನಿಪ" (a lake) ಪದದಿಂದ ಬಂದಿದೆಯೆಂದು ಕೆಲವರು ಭಾವಿಸುತ್ತಾರೆ. ಹಿಂದೊಮ್ಮೆ ನೇಪಾಳ ಕಣಿವೆಯು ದೊಡ್ಡ ಸರೋವರವಾಗಿತ್ತೆಂದು ಹೇಳಲಾಗಿದೆ. (Inscriptions of Ancient Nepal. III. Ed: D. R. Regmi.) ನೇಪಾಳವನ್ನು "ನಾಗಹ್ರದ" (ಹ್ರದ = ಸರೋವರ) ಎಂದು ಕರೆಯುತ್ತಿದ್ದುದೂ ಉಂಟು. (Daniel Wright : History of Nepal.) 'ನೇವಾರ' ಜನಾಂಗದ ಜನರಿಂದ ನೇಪಾಳ ಬಂದಿತೆಂದು ಊಹಿಸುವುದೂ ಉಂಟು. "ನೇ" ಎಂಬುದು ದೇವರ ಹೆಸರು; ಅವನು ರಕ್ಷಿಸುತ್ತಿರುವ ನಾಡೇ, ಜನರೇ ನೇವಾರ. ನೇವಾರ – ನೇಪಾಳ. (Ed: Bikram Jit Hasrat: History of Nepal.) ಕೆಲವು ವಂಶಾವಳಿಗಳ ಪ್ರಕಾರ, ನಾನ್ಯದೇವನ ಜೊತೆ "ನಯೇರ" ನಾಡಿನಿಂದ ಬಂದವರು ನೇವಾರರು. ಇವರು 'ಬ್ರಹ್ಮಪುತ್ರ ಛೇತ್ರಿ' ಮತ್ತು 'ಆಚಾರ್' ವರ್ಗಕ್ಕೆ ಸೇರಿದವರು. ನೆವಾರಿಗಳು ಈ ಕತೆಯನ್ನು ನಂಬಿ ತಾವು ಕರ್ನಾಟಕದವರೆಂದೂ ಹೇಳಿಕೊಳ್ಳುತ್ತಾರೆ. ನೆವಾರಿಗಳು ನೇಪಾಳದ ಮೂಲ ನಿವಾಸಿಗಳೆಂಬಲ್ಲಿ ಅನುಮಾನವಿಲ್ಲ.

ದಕ್ಷಿಣದ ತರ್ರೈ (ತಿರ್ರೈ) ಎಂಬ ಸಮತಟ್ಟು ಪ್ರದೇಶ, ಮಧ್ಯದ ಕಣಿವೆ ಪ್ರದೇಶ (ರಾಜಧಾನಿ ಕಾಠಮಾಂಡೋ ಇರುವ ಅತ್ಯಂತ ಪ್ರಮುಖ ಪ್ರದೇಶ), ಉತ್ತರದ ಉನ್ನತ ಹಿಮಾಲಯ ಪರ್ವತ ಶ್ರೇಣಿ ಹೀಗೆ ನೇಪಾಳವನ್ನು ಸ್ಥೂಲವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು. ಅಲ್ಲಿ ಹಿಂದಿನಿಂದ ಅನುಸರಿಸಿಕೊಂಡು ಬಂದ ಧರ್ಮಗಳನ್ನು ಜನರು ಮುಂದುವರಿಸಲು ಮುಕ್ತ ಅವಕಾಶವಿದೆ; ಮತಾಂತರಕ್ಕೆ ಅವಕಾಶ ಇಲ್ಲ. ಜನಸಂಖ್ಯೆಯಲ್ಲಿ ಹಿಂದೂಗಳದ್ದೇ ಹೆಚ್ಚು[8] (೯೦% ಹಿಂದೂ; ೫.೩% ಬೌದ್ಧ; ೨.೯% ಮುಸ್ಲಿಮರು; ೫೦, ೦೦೦ ಕ್ರಿಶ್ಚಿಯನ್ನರು). ತರ್ರೈನಲ್ಲಿ ಹೆಚ್ಚಾಗಿ ಮೈಥಿಲಿ ಬ್ರಾಹ್ಮಣ, ರಜಪುತ್, ಭುನಿಯಾರ್, ಕೂರ್ಮಿ, ತೇಲಿ, ಥರು, ಧನ್ವರ್, ರಾಜ ಬಂಶಿ, ಸತರ್, ಮುಸಲ್ಮಾನ್‌ಜನರಿದ್ದರೆ, ಮಧ್ಯದ ಕಣಿವೆ ಪ್ರದೇಶದಲ್ಲಿ ಹೆಚ್ಚಾಗಿ ನೆವಾರ್, ರೈ, ಲಿಂಬು, ತಮಂಗ್, ಮಗರ್, ಗುರುಂಗ್, ಥಕಲಿ, ಬ್ರಾಹ್ಮಣ, ಛೇತ್ರಿ (ಕ್ಷತ್ರಿಯ) ಈ ಜನರಿದ್ದಾರೆ. ಉತ್ತರದ ಹಿಮಾಲಯ ಶ್ರೇಣಿಯಲ್ಲಿ ಷೆರ್ಪ, ಲ್ಹೋಮಿ, ಲೋಪ, ಬಾರಗೌನ್ಲೆ, ದೊಲ್ಪೊ ಮನಂಗ್ವ ಜನರಿದ್ದಾರೆ. ಕಾಠಮಾಂಡೋ ಸಮುದ್ರ ತಳದಿಂದ ೪೫೦೦ ಅಡಿ ಎತ್ತರದಲ್ಲಿದೆ. ಉತ್ತರದ ಎವರೆಸ್ಟ್‌ಶಿಖರದ ಎತ್ತರ ೨೯, ೦೨೮ ಅಡಿ. ಎವರೆಸ್ಟನ್ನು ನೇಪಾಳದಲ್ಲಿ 'ಸಾಗರ್‌ಮಾತಾ' ಎನ್ನುತ್ತಾರೆ. ಶೇಕಡ ಎಪ್ಪತ್ತೈದು ಭಾಗ ಬೆಟ್ಟಗುಡ್ಡಗಳಿದ್ದು ನೇಪಾಳದ ಮೂರನೇ ಭಾಗ ಒಂದು ಕಾಡಿನಿಂದ ಆವೃತ್ತ. ಅಧಿಕೃತ ಭಾಷೆ ಇಂಡೋ ಆರ್ಯನ್‌ವರ್ಗಕ್ಕೆ ಸೇರಿದ ನೇಪಾಲಿ; ಅಧಿಕೃತ ಬಣ್ಣದ ತೆಳುಗೆಂಪು; ಅಧಿಕೃತ ಪ್ರಾಣಿ ಗೋವು. ಅಗತ್ಯಕ್ಕಿಂತ ಸ್ವಲ್ಪ ಹೆಚ್ಚಾಗಿ ಧಾನ್ಯದ ಉತ್ಪನ್ನವಿದ್ದರೂ ಲೋಹ ಸಂಪತ್ತು ಕಡಿಮೆ.

ನೇಪಾಳದಲ್ಲಿ ಶೇಕಡ ಹನ್ನೆಡರಷ್ಟು ಸಾಕ್ಷರತೆ ಇದೆ. ೧೨ – ೧೯ನೇ ಶತಮಾನಗಳಲ್ಲಿ ಭಾರತದಲ್ಲಿ ಮುಸ್ಲಿಮರಿಗೆ ಸೋತ ಹಲವು ದೊರೆಗಳು ನೇಪಾಳಕ್ಕೆ ಬಂದು ಆಳಿದರು. ಹದಿನೆಂಟನೇ ಶತಮಾನದಲ್ಲಿ ಮಲ್ಲ ದೊರೆಗಳನ್ನು (ಇವರ ವಿಷಯ ಮತ್ತೆ ಮುಂದೆ ಬರುತ್ತದೆ) ಹಿಂದಕ್ಕೆ ತಳ್ಳಿ ಗೋರ್ಖ ವಂಶದ ಪೃಥ್ವಿನಾರಾಯಣ ಶಹನು ನೇಪಾಳದ ಬೇರೆ ಬೇರೆ ಭಾಗಗಳನ್ನು ಒಂದು ವ್ಯವಸ್ಥೆಗೆ ತಂದು ಕಾಠಮಾಂಡೊದಿಂದ ಆಳಲು ಆರಂಭಿಸಿದನು (೧೭೬೯). ಪಾಶ್ಚಾತ್ಯ ಜೀವನ ವಿಧಾನದ ಬಗ್ಗೆ ಅವನಿಗೆ ತಿರಸ್ಕಾರ ಭಾವನೆಯಿತ್ತು. ಆ ಕಾರಣದಿಂದ, ತನಗಿಂತ ಹಿಂದಿನವರು ಕ್ರಿಸ್ತಪಾದ್ರಿಗಳಿಗೆ ನೀಡಿದ್ದ ಆಶ್ರಯವನ್ನು ರದ್ದುಪಡಿಸಿದನು (S. D. Munni : Foreign policy of Nepal ನೋಡಿ.) ಆಧುನಿಕ ನೇಪಾಳದ ಅಸ್ತಿತ್ವಕ್ಕೆ ಅವನು ಕಾರಣ. ೧೭೭೫ರಲ್ಲಿ ಮಾಡಿದ ಭಾಷಣದಲ್ಲಿ ಅವನು "ಹಾಗೆ ನೋಡಿದರೆ, ನನ್ನ ನೇಪಾಳವೇ ನಿಜವಾದ 'ಹಿಂದೂಸ್ಥಾನ್'" ಎಂದು ಹೇಳಿಕೊಂಡನು. ಅವನ ಪ್ರಕಾರ, ಭಾರತವು "ಮುಘ್ಲಾನ" (ಮುಸ್ಲಿಮರ ನಾಡು) ಎಂದು ಕರೆಯಿಸಿಕೊಳ್ಳಲು ಯೋಗ್ಯವಾದ ರಾಷ್ಟ್ರ. ಪೃಥ್ವಿನಾರಾಯಣ ಶಹನಿಗೆ ತಾನು ಒಬ್ಬ ಹಿಂದೂವೆಂದು ಕರೆದುಕೊಳ್ಳಲು ಹೆಮ್ಮೆಯಿತ್ತು. ಭಾರತದ ಚರಿತ್ರೆಯಲ್ಲಿ ಮುಸ್ಲಿಮ್‌ದೊರೆಗಳಿಂದಾದ ಅನಾಹುತಗಳ ಬಗ್ಗೆ ಅವನಿಗೆ ತೀವ್ರ ನೋವಿತ್ತೆಂಬುದು ಸ್ಪಷ್ಟ. ಮುಂದೆ ಶಹ ವಂಶದ ದೊರೆಗಳು ದುರ್ಬಲರಾದಾಗ, ಥಾಪಾ (೧೮೦೬ – ೩೭), ರಾಣಾ (೧೮೪೦ – ೧೯೫೦) ವಂಶದವರು ಪ್ರಬಲರಾಗಿ ಶಹ ರಾಜರನ್ನು ಹೆಸರಿಗೆ ಇಟ್ಟುಕೊಂಡು ನೇಪಾಳವನ್ನು ಆಳಿದರು. ಹತ್ತೊಂಬತ್ತನೇ ಶತಮಾನದಲ್ಲಿ ಬ್ರಿಟಿಷರು ಭಾರತವನ್ನು ತಮ್ಮ ಕೈಗೆ ತೆಗೆದುಕೊಂಡಾಗ, ರಾಣಾ ವಂಶದವರು ನೇಪಾಳದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಬ್ರಿಟಿಷರ ಜೊತೆ ಒಂದು ಒಪ್ಪಂದ ಮಾಡಿಕೊಂಡರು. ಬ್ರಿಟಿಷರು ಆ ಒಪ್ಪಂದದ ಪ್ರಕಾರ, ಧೈರ್ಯಶಾಲಿಗಳಾದ ಗೋರ್ಖಾಗಳನ್ನು ತಮ್ಮ ಸೈನ್ಯಕ್ಕೆ ಸೇರಿಸಿಕೊಳ್ಳಬಹುದು; ವಿದೇಶಾಂಗ ನೀತಿಯಲ್ಲಿ ನೇಪಾಳವು ಬ್ರಿಟನ್ನನ್ನು ಆಶ್ರಯಿಸಬೇಕು. ಇದರಿಂದಾಗಿ ನೇಪಾಳಕ್ಕೆ ಬ್ರಿಟನ್ನಿನ ರಕ್ಷಣೆ ದೊರೆಯಿತು; ಆಂತರಿಕ ಸ್ವಾತಂತ್ರ್ಯ ಉಳಿಯಿತು. ೧೮೦೬ – ೩೭ರ ಅವಧಿಯಲ್ಲಿ ಪ್ರಧಾನಿಯಾಗಿದ್ದ ಭೀಮಸೇನ್‌ಥಾಪಾ ನೇಪಾಳದಲ್ಲಿ ಗುಲಾಮಗಿರಿ ರದ್ದುಪಡಿಸಿದನು. ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದುದರ ಜೊತೆಯಲ್ಲಿ ಹಿಂದಿನಂತೆ ರಾಜ್ಯಾಡಳಿತವು ಶಹ ದೊರೆಗಳ ಕೈಗೆ ದೊರಕಿತು (೧೯೫೦)[9], ನೇಪಾಳವು ಸ್ವತಂತ್ರ ರಾಷ್ಟ್ರವಾಯಿತು.

ನೇಪಾಳವು ಬೇರೆ ದೇಶಗಳಿಂದ ಸುತ್ತುವರಿದ ಚಿಕ್ಕ ರಾಷ್ಟ್ರವಾದ್ದರಿಂದ, ವ್ಯಾಪಾರದಲ್ಲಿ ವಿಶೇಷವಾಗಿ ಭಾರತವನ್ನು ಅವಲಂಬಿಸುತ್ತದೆ. ೧೯೯೦ರಲ್ಲಿ ಪ್ರಜಾಪ್ರಭುತ್ವವಾದಿಗಳ ಧ್ವನಿ ಪ್ರಬಲವಾಗಿ ರಾಜನ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಯ್ತು. ಈಗ ಇರುವಂತೆ, ಹದಿನೆಂಟು ವರ್ಷಗಳಿಗಿಂತ ಮೇಲ್ಪಟ್ಟ ಪ್ರಜೆಗಳಿಗೆ ಮತದಾನದ ಹಕ್ಕು ಇದೆ. ಅವರಿಂದ ಆಯ್ಕೆಯಾದ ಇನ್ನೂರೈದು ಸದಸ್ಯರಿರುವ ಪ್ರತಿನಿಧಿ ಸಭೆ ('ಲೋಯರ್‌ಹೌಸ್') ಮುಖ್ಯವಾದುದು. ಅರವತ್ತು ಜನರಿರುವ ರಾಷ್ಟ್ರೀಯ ಸಭೆ ಕೂಡ ('ಅಪ್ಪರ್‌ಹೌಸ್') ಉಂಟು. ಬಹುಮತವಿರುವ ಪಕ್ಷದ ನಾಯಕನನ್ನು ರಾಜನು ಪ್ರಧಾನಿಯಾಗಿ ನೇಮಿಸುತ್ತಾನೆ. ರಾಜನು ಪಾರ್ಲಿಮೆಂಟಿನ ಭಾಗವೂ ಹೌದು.

ನೇಪಾಳಿ ಭಾಷೆಯು ಸಾಹಿತ್ಯಕವಾಗಿ ಶ್ರೀಮಂತಗೊಂಡಿದೆ. ಕಾಠಮಾಂಡೊ ಪ್ರದೇಶದ ನೆವಾರರ ಶಿಲ್ಪ, ಚಿತ್ರ, ವಾಸ್ತುಗಳು ಜಗತ್ಪ್ರಸಿದ್ಧ ಕಾಠಮಾಂಡೊ ಕಣಿವೆಯೊಂದರಲ್ಲಿ ಎರಡು ಸಾವಿರಕ್ಕೂ ಮೀರಿದ ದೇವಾಲಯ, ಮಂದಿರಗಳಿವೆ. ಧರ್ಮವು ನೇಪಾಳಿಗಳ ಉಸಿರಾಗಿದೆ.[10] ಕಾಠಮಾಂಡೊ ಕಣಿವೆಯ ನೆವಾರಿಗಳು ನೇಪಾಳದ ಸ್ಥಳೀಯ ಪ್ರಮುಖ ಜನಾಂಗಗಳಲ್ಲಿ ಒಂದು. ಬಾಗ್‌ಮತಿ, ವಿಷ್ಣುಮತಿ ನದಿಗಳ ಸಂಗಮಸ್ಥಾನದಲ್ಲಿದೆ. ರಾಜಧಾನಿ ಕಾಠಮಾಂಡೊ. ಅಲ್ಲಿ ಒಂದೇ ಮರದಿಂದ ಕಟ್ಟಿದೆಯೆಂದು ನಂಬಲಾದ "ಕಾಷ್ಠ ಮಂಟಪ" (ಕಾಷ್ಠ ಮಂಡಪ) ಹೆಸರಿನ ಬೃಹತ್‌ಕಟ್ಟಡವಿದೆ. "ಕಾಷ್ಠ ಮಂಡಪ" ವೇ ಕಾಠಮಾಂಡೊ ಎಂದಾಗಿದೆ. ಆ ಕನಿಷ್ಠ ಮಂಟಪದಲ್ಲಿ ಹಿಂದೂಗಳ ಮೂವತ್ತಮೂರು ಕೋಟಿ ದೇವತೆಗಳು ವಾಸಿಸುವರೆಂದು ನಂಬಲಾಗಿದ್ದು, ಹಿಂದೂಗಳಿಗೆ ಆ ಕಟ್ಟಡ ಅತ್ಯಂತ ಪವಿತ್ರವಾಗಿದೆ.

[1] ರಾಜಶೇಖರ ವಿರೂಪಾಕ್ಷಸ್ವಾಮಿ ಗೋರಟಾ : 'ನೇಪಾಳದ ವೀರಶೈವರು' (ಸಂ: ಎ. ಎಸ್. ಹಿರೇಮಠ – "ವೀರಶೈವ ದರ್ಶನ" ಕೃತಿಯಲ್ಲಿ)

[2] D.C Sircar: `Kannadigas outside down the Ages.' (studies in Education and Culture. D.C pavate Felicitation volume. 1959 E.d: G.S. Halappa). ಈ ಅಧ್ಯಾಯದ ಹಲವು ವಿವರಗಳು ಮೇಲ್ಕಂಡ ಲೇಖನದಿಂದ

[3] ಅದೇ, ಪು. ೨೪೬. ಭಾರತದ ಹೊರಗೆ ಕರ್ನಾಟಕ ಸಂಸ್ಕೃತಿಯ ಪ್ರಭಾವ ಕುರಿತಂತೆ ನಡೆದಿರುವ ಅಧ್ಯಯನಗಳಲ್ಲಿ ನೇಪಾಳ ಸಂಬಂಧಿಯಾದ ನನ್ನ ಅಧ್ಯಯನವೇ ಮೊತ್ತಮೊದಲನೆಯದು. ಭಾರತದ ಒಳಗೂ ಅಂತಹ ವಿಶೇಷ ಅಧ್ಯಯನ ನಡೆದಿಲ್ಲವೆಂದೇ ಹೇಳಬೇಕಾಗಿದೆ.

[4] H. C. Ray : Dynastic History of Northen India, Vol. II. ನೋಡಿ.

[5] ಅದೇ.

[6] ಇಲ್ಲಿಯ ವಿವರಗಳು, B. Chakravati : Sens of Himachala Pradesh Their Pan – Indian Heritage ಕೃತಿಯಿಂದ (ಈ ಕೃತಿಯತ್ತ ಗಮನ ಸೆಳೆದವರು ಡಾ. ಸೂರ್ಯನಾಥ ಕಾಮತ್).

[7] ಅದೇ.

[8] The Europa World Year Book, 2000. Vol. II.

[9] ವಿವರಗಳು – Encyclopaedia Britannica (Macropaedia) ಸಂಪುಟದಿಂದ.

[10] ಅದೇ, ಧರ್ಮ ಮತ್ತು ರಾಜತ್ವ ಇವು ಇಂದಿಗೂ ಅಲ್ಲಿನ ನಿಯಂತ್ರಕ ಶಕ್ತಿಗಳು.

## ೨. ರಾಜಕೀಯ ಸಂಬಂಧ

ನೇಪಾಳದ ಪ್ರಾಚೀನ ದಾಖಲೆಗಳ ಪ್ರಕಾರ, 'ಭರತ ವರ್ಷ'ದ ಸಾರವತ್ತಾದ ಭಾಗ ನೇಪಾಳವೇ ಆಗಿತ್ತು; 'ಭರತವರ್ಷ'ದಲ್ಲಿ ಅದಕ್ಕೊಂಡು ವಿಶಿಷ್ಟ ಸ್ಥಾನವಿದೆ. ಆ ಸಾಂಸ್ಕೃತಿಕ ಘಟಕದಲ್ಲಿ ಇಂದಿನ ನೇಪಾಳ, ಭಾರತಗಳು ಸೇರಿವೆ.

ಭಾರತ ನೇಪಾಳಗಳು ಇಂದು ರಾಜಕೀಯವಾಗಿ ಭಿನ್ನ ರಾಷ್ಟ್ರಗಳಾಗಿದ್ದರೂ ಸಾಂಸ್ಕೃತಿಕವಾಗಿ ಅವೆರಡೂ ಒಂದೇ: ಅದನ್ನು ಸನಾತನ ಸಂಸ್ಕೃತಿ ಎನ್ನಿ, ನೇಪಾಲೋ ಭಾರತೀಯ ಸಂಸ್ಕೃತಿ ಎನ್ನಿ ಅಥವಾ ಭಾರತೋ ನೇಪಾಲೀಯ ಸಂಸ್ಕೃತಿ ಎನ್ನಿ. ಕರ್ನಾಟಕದ ಹಳ್ಳಿಗಳಲ್ಲಿ ಇಂದಿಗೂ ಅನಕ್ಷರಸ್ಥರು ಹೇಳುವ ವೀರಭದ್ರನ ಉತ್ಸವದ "ಖಡ್ಗ"ಗಳಲ್ಲಿ ("ವಡಬು"ಗಳಲ್ಲಿ) ನೇಪಾಳದ ಹೆಸರನ್ನು ಹೇಳಬಹುದು. ವೀರಭದ್ರ ದೇವರು "ಚಪ್ಪನ್ನೈವತ್ತಾರು ದೇಶ"ಗಳಲ್ಲಿ ಪ್ರಕೀರ್ತಿತ, ಅವರ ಪ್ರಕಾರ - "ಹೀಗಿರುತ್ತದೆ ಸ್ಥೂಲವಾಗಿ 'ಖಡ್ಗ"ಗಳ ಆರಂಭ. ಆ ಐವತ್ತಾರು ದೇಶಗಳು, ವಿವೇಕ ಚಿಂತಾಮಣಿ ಕೊಡುವ ಪಟ್ಟಿ ಪ್ರಕಾರ ಹೀಗಿವೆ - ಅಂಗ, ವಂಗ, ಕಳಿಂಗ, ತೆಲುಂಗ, ಕೊಂಗ, ಲಾಟ, ಬಂಗಾಳ, ಚೋಳ, ಕೇರಳ, ಗೌಳ, ಪಾಂಚಾಳ, ಸಿಂಹಳ, ಕುಂತಳ, ನೇಪಾಳ, ಮಲೆಯಾಳ, ತುಳುವ, ಸೈಂಧವ, ಕೊಂಕಣ, ಕುರು, ಮಗಧ, ಮತ್ಸ್ಯ, ವಿದರ್ಭ, ಕೋಸಲ, ಶೂರಸೇನ, ಕಾಶ್ಮೀರ, ಮಹಾರಾಷ್ಟ್ರ, ಕರ್ಣಾಟ, ಕಿರಾತ, ತುರುಷ್ಕ, ಶಂಕರ, ಬರಮ, ತ್ರಿಗರ್ತ, ನಿಷಧ, ಮಧ್ಯ, ಜೈನ, ಬರ್ಬರ, ಬಾಹ್ಲೀಕ, ಲಾಟ, ಚೈನ, ಕರಾಳ, ಓಢ್ರ, ಘೂರ್ಝರ, ಕಾಂಬೋಜ, ಸೌರಾಷ್ಟ್ರ, ಸೌವೀರ, ಪಾಂಡ್ಯ, ಹೂಣ, ಯವನ, ಮ್ಲೇಚ್ಛ, ಹೈಹಯ, ಆರ್ಯಾವರ್ತ, ಭೋಜ, ದ್ವೈಪ, ಅಮರುಕ, ಉತ್ತರ ಕುರು ಮತ್ತು ಗ್ರೈಟಿ.

[1] 'ನೇಪಾಳ'ಕ್ಕೆ ಒಂದು ದೇಶದ ಹೆಸರಲ್ಲದೆ ವಿರೇಚಕ ಗುಣವುಳ್ಳ ಕಾಯಿ ಬಿಡುವ ಗಿಡ ಎಂಬರ್ಥವೂ ಇದ್ದಿತು. 'ನೇಪಾಳ ಕಂಬಳಿ'ಗೆ ವಾತ ಶ್ಲೇಷ್ಮ ತೊಂದರೆ ಹೋಗಲಾಡಿಸುವ, ಐಶ್ವರ್ಯ ತಂದುಕೊಡುವ ಗುಣವಿದೆಯೆಂದು ನಂಬಿದ್ದರು. ("ವಾತ ಶ್ಲೇಷ್ಮಹರವಾಗಿಯುಂ ಐಶ್ವರ್ಯಪ್ರದವಾಗಿಯೂ ಇರುವುದು"). 'ನೇಪಾಳಗುದುರೆ' ಎಂಬೊಂದು ಜಾತಿಯ ಒಳ್ಳೆಯ ಕುದುರೆಗಳಲ್ಲದೆ ಬೇವಿನಲ್ಲಿ 'ನೇಪಾಳ ಬೇವು' ಎಂಬ ಒಂದು ಬಗೆಯ ಕಹಿ ಎಲೆಯ ಮರವೇ ಇದ್ದಿತು.[2] "ನೇಪಾಳ ದೇಶದ ಭೂಪಾಳನಾದರೆ ಗೋಪಾಳದವನಿಗೆ ಏನು?" ಎಂಬ ಗಾದೆಯೇ ಪ್ರಚಲಿತವಿದ್ದಿತು. ಹದಿನಾಲ್ಕನೆ ಶತಮಾನದ ಕನ್ನಡ ಬಸವ ಪುರಾಣವು ನೇಪಾಳ, ಕುಂತಳ, ಬರ್ಬರ, ಕೇರಳ ಇತ್ಯಾದಿ ದೇಶಗಳಿಂದ "ಜಂಗಮ"ರು ಬಸವಣ್ಣನವರನ್ನು ನೋಡಲು ಬಂದರೆಂದು ಹೇಳುವುದು ಸ್ವಾರಸ್ಯವಾಗಿದೆ. ಇಂದಿಗೂ ನೇಪಾಳದಲ್ಲಿ ಜಂಗಮರಿರುವ ಸಂಗತಿ ಹಿಂದಾಗಲೇ ಸೂಚಿತವಾಗಿದೆ.[3]

ಬುದ್ಧನ ಹುಟ್ಟೂರಾದ ಲುಂಬಿನಿಯು (ರುಮಿಂದೈ) ದಕ್ಷಿಣ ನೇಪಾಳದಲ್ಲಿದೆ. ಕ್ರಿ. ಪೂ. ೩ನೇ ಶತಮಾನದ ಅಶೋಕನ ಶಾಸನವು ಅಲ್ಲಿದೆ. ನೇಪಾಳವನ್ನು ಲಿಚ್ಛವಿವಂಶೀಯರು (ಕ್ರಿ. ಶ. ೨ - ೮ ಶ.), ಠಾಕೂರಿಗಳು (೯ - ೧೧ಶ.)ಆಳಿದರು. ಠಾಕೂರಿ ವಂಶದ ಗುಣಕಾಮದೇವನು (೧೦ ಶ.)ಬಾಗ್ಮತಿ ಮತ್ತು ವಿಷ್ಣುಮತಿ ನದಿಗಳ ಸಂಗಮ ಸ್ಥಾನದಲ್ಲಿ 'ಕಾಂತಿಪುರ' ಅಥವಾ ಕಾಠಮಾಂಡೊ ನಗರವನ್ನು ಸ್ಥಾಪಿಸಿದವನು. ಕಾಠಮಾಂಡೊ ಅಥವಾ ಕಾಷ್ಠಮಂಡಪವು ಒಂದೇ ಒಂದು ಮರ ಬಳಸಿ ನಿರ್ಮಾಣವಾದ ದೊಡ್ಡ ಮರದ ಮನೆಯನ್ನು ಸೂಚಿಸುತ್ತದೆ: ಆ ಮನೆಯಿಂದಾಗಿ ನಗರಕ್ಕೆ ಆ ಹೆಸರು ಬಂದಿದೆ. ಇವನ ಕಾಲದಲ್ಲಿ ಪಶುಪತಿ ದೇವಾಲಯವು ಜೀರ್ಣೋದ್ಧಾರಗೊಂಡಿತು. ಈ ಠಾಕೂರಿ ವಂಶದ ರಾಘವದೇವನ ಕಾಲದಲ್ಲಿಯೇ ಕ್ರಿ. ಶ. ೮೭೯ - ೮೦ರಲ್ಲಿ ನೇಪಾಲ ಸಂವತ್(ನೆವಾರಿ ಶಕ) ಆರಂಭಗೊಂಡದ್ದು. ಈ ವಂಶದ 'ಸೂರ್ಯವಂಶಿ ರಜಪೂತ್' ಹರ್ಷದೇವನು (೧೦೯೦ - ೧೦೯೯) ದುರ್ಬಲನಾಗಿದ್ದ ಕಾರಣ, ಅವನ ಬಳಿಕ ಹತ್ತು ವರ್ಷ ರಾಜ್ಯವನ್ನು ವಶಪಡಿಸಿಕೊಳ್ಳಲು ಹಲವು ಮಹತ್ವಾಕಾಂಕ್ಷಿಗಳ ಮಧ್ಯೆ ತಿಕ್ಕಾಟಗಳು ನಡೆದುವು. ಸುಮಾರು ಈ ಕಾಲದಲ್ಲೇ "ಕರ್ನಾಟ" ವಂಶದ ದೊರೆ ನಾನ್ಯದೇವನು ದಕ್ಷಿಣ ನೇಪಾಳದ ಸಿಮ್ರೌನ್‌ಗಡ ರಾಜಧಾನಿಯಿಂದ ನೇಪಾಳದ ಮೇಲೆ ದಂಡೆತ್ತಿ ಬಂದು ಮಧ್ಯ ನೇಪಾಳದ ಭದಗಾಂವ್(ಭಕ್ತಪುರ) ನಗರವನ್ನು ತನ್ನ ನಿವಾಸವನ್ನಾಗಿ ಮಾಡಿಕೊಂಡನೆಂದು ಹೇಳಲಾಗಿದೆ.[4]

"ಕರ್ನಾಟ" ವಂಶದ ದೊರೆಗಳು ನೇಪಾಳವನ್ನು ಆಳಲು ಆರಂಭಿವುಸುದಕ್ಕೆ ಮೊದಲೆ, ಸಾಕಷ್ಟು ಹಿಂದಿನಿಂದಲೇ ಕರ್ನಾಟಕಕ್ಕೂ ನೇಪಾಳಕ್ಕೂ ಕೆಲವು ಸಂಬಂಧಗಳಿದ್ದುದನ್ನು ಗುರುತಿಸಬಹುದು. ಅಶೋಕನ ಸಾಮ್ರಾಜ್ಯದಲ್ಲಿ ನೇಪಾಲವೂ (ದಕ್ಷಿಣ ಭಾಗ) ಸೇರಿದ್ದು ಅವನ ಸಾಮ್ರಾಜ್ಯದ ದಕ್ಷಿಣ ಗಡಿಗಳು ಚಿತ್ರದುರ್ಗದವರೆಗೆ ವ್ಯಾಪಿಸಿದ್ದುವು: ನೇಪಾಳ, ಕರ್ನಾಟಕಗಳು ಅಶೋಕನ ಸಾಮ್ರಾಜ್ಯದ

ಎರಡು ಗಡಿಗಳಾಗಿದ್ದವು. ಕ್ರಿಸ್ತಪೂರ್ವ ಮೂರು – ಎರಡನೆಯ ಶತಮಾನಗಳಲ್ಲಿ ಜೈನ ಸನ್ಯಾಸಿ ಭದ್ರಬಾಹುವು ಕ್ಷಾಮ ಕಾರಣವಾಗಿ ಉತ್ತರ ಭಾರತದಿಂದ ದಕ್ಷಿಣಕ್ಕೆ, ಕರ್ನಾಟಕಕ್ಕೆ ತನ್ನ ಶಿಷ್ಯ ದೊರೆ ಚಂದ್ರಗುಪ್ತನ (ಸಂಪ್ರತಿ ಚಂದ್ರಗುಪ್ತ) ಸಮೇತ ಬಂದು ಶ್ರವಣ ಬೆಳ್ಗೊಳದಲ್ಲಿ ತನ್ನ ಕೊನೆಯ ದಿನಗಳನ್ನು ಕಳೆದುದು, ಅದರ ಕುರುಹಾಗಿ ಭದ್ರಬಾಹು ಗುಹೆ, ಚಂದ್ರಗುಪ್ತ ಬಸದಿಗಳು ಶ್ರವಣಬೆಳ್ಗೊಳದಲ್ಲಿರುವುದು ಸುಪ್ರಸಿದ್ಧ ವಿಷಯ. ಈಚಿನ ಅಲ್ಲಿನ ಶಾಸನಗಳಲ್ಲಿ, ವಡ್ಡಾರಾಧನೆಯಂತಹ ಕೃತಿಗಳಲ್ಲಿ ಆ ಘಟನೆ ದಾಖಲಾಗಿರುವುದೂ ಪ್ರಸಿದ್ಧವೇ. ಆದರೆ ಒಂದು ಕಥಾಂತರದ ಪ್ರಕಾರ, ಬಹುಶಃ ಶ್ವೇತಾಂಬರ ಸಂಪ್ರದಾಯದ ಕಥೆಯ ಪ್ರಕಾರ ಕ್ಷಾಮ ಮುಗಿದ ಮೇಲೆ ಭದ್ರಬಾಹುವು ಉತ್ತರ ಭಾರತಕ್ಕೆ ತನ್ನ ಶಿಷ್ಯರ ಸಮೇತ ಹಿಂದಿರುಗಿದನು. ಅವನ ಗೈರುಹಾಜರಿಯಲ್ಲಿ ವಿದ್ವಾಂಸರು ಜೈನಶಾಸ್ತ್ರದ ಹನ್ನೆರಡು ಉಪಾಂಗಗಳನ್ನು ಹತ್ತು 'ಪೈನ್ನ' (ಪ್ರಕೀರ್ಣ)ಗಳನ್ನು ವರ್ಗೀಕರಿಸಿದುದು ಭದ್ರಬಾಹುವಿಗೆ ಸಮ್ಮತವಾಗಲಿಲ್ಲವಾದ ಕಾರಣದಿಂದ (Bihar through the Ages ನೋಡಿ) ಜೈನ ಸಮುದಾಯದ ಮುಖ್ಯಸ್ಥ ಸ್ಥಾನವನ್ನು ಅವನು ಬಿಟ್ಟುಕೊಟ್ಟು ನೇಪಾಳಕ್ಕೆ ಹೋಗಿ ಅಲ್ಲಿ ತನ್ನ ಕೊನೆಯ ದಿನಗಳನ್ನು ತಪಸ್ಸಿನಲ್ಲಿ (penitence) ಕಳೆದನು.[5] ಭದ್ರಬಾಹುವಿನ ವೈಯಕ್ತಿಕ ಗ್ರಂಥವೆಂದರೆ "ಕಲ್ಪಸೂತ್ರ". ಕರ್ನಾಟಕಕ್ಕೂ ನೇಪಾಳಕ್ಕೂ ಐತಿಹಾಸಿಕವಾಗಿ ಸಂಬಂಧ ಕಲ್ಪಿಸುವ ಈ ಘಟನೆಯೇ ಅತ್ಯಂತ ಪ್ರಾಚೀನವಾದುದು. (ಈ ಸಂಗತಿಯ ಐತಿಹಾಸಿಕತೆ ಸ್ವಲ್ಪ ಪ್ರಶ್ನಾರ್ಹ).

**"ಕರ್ನಾಟ" ವಂಶ**

ಬಾದಾಮಿ ಚಾಲುಕ್ಯರ ಬಳಿಕ ಆಳಿದ ರಾಷ್ಟ್ರಕೂಟರ ಕಾಲದಲ್ಲಿ ಕರ್ನಾಟಕದ ದೊರೆಗಳು ಮಧ್ಯ, ಉತ್ತರ ಭಾರತದ ಹಲವು ಭಾಗಗಳನ್ನು ಗೆದ್ದು ಅಲ್ಲಿ ತಮ್ಮ ವಂಶಗಳನ್ನು ಸ್ಥಾಪಿಸಿದ ವಿಷಯಗಳನ್ನು ಹಿಂದೆ ನೋಡಿದ್ದೇವೆ. ಆದರೆ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಡೆದ ಘಟನೆ ಬಿಹಾರ ನೇಪಾಳಗಳ ರಾಜಕೀಯ ಸಾಂಸ್ಕೃತಿಕ ಚರಿತ್ರೆಯಲ್ಲಿ, ಸಿ.ಪಿ.ಎನ್. ಸಿನ್ಹಾ ಮಾತಿನಲ್ಲಿ ಹೇಳುವುದಾದರೆ ಒಂದು 'turning point', ಅದು ನಡೆದುದು ಕ್ರಿ. ಶ. ೧೦೯೭ರಲ್ಲಿ, ಆರನೆಯ ವಿಕ್ರಮಾದಿತ್ಯನ ಆಳಿಕೆಯ ಅವಧಿಯಲ್ಲಿ.[6]

ರಾಷ್ಟ್ರಕೂಟರನ್ನು ಹಿಮ್ಮೆಟ್ಟಿಸಿ ಸ್ವತಂತ್ರವಾಗಿ ಆಳಲು ಆರಂಭಿಸಿದ ಕಲ್ಯಾಣ ಚಾಲುಕ್ಯರಲ್ಲಿ ಕ್ರಮವಾಗಿ ಇಮ್ಮಡಿ ತೈಲ, 'ಇಱಿವ ಬೆಡಂಗ' ಸತ್ಯಾಶ್ರಯ, ಐದನೆಯ ವಿಕ್ರಮಾದಿತ್ಯ, ಇಮ್ಮಡಿ ಜಯಸಿಂಹ, ಒಂದನೆಯ ಸೋಮೇಶ್ವರರು ಆಳಿದರು. ಒಂದನೆಯ ಸೋಮೇಶ್ವರನೇ ಕ್ರಿ. ಶ. ೧೦೪೮ರ ಸರಿಸುಮಾರಿನಲ್ಲಿ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡದ್ದು. ಅವನ ಮಗನೇ ಆರನೆಯ ವಿಕ್ರಮಾದಿತ್ಯ (೧೦೭೬ – ೧೧೨೬). ಚಾಲುಕ್ಯರಲ್ಲಿ ಈ ತಂದೆ ಮಕ್ಕಳೇ ಅತ್ಯಂತ ಪ್ರಬಲರು ಮತ್ತು ಪ್ರಖ್ಯಾತರು. ಇವರ ಕಾಲದಲ್ಲಿ ಚಾಲುಕ್ಯ ಸಾಮ್ರಾಜ್ಯದ ಕೀರ್ತಿಯು ಉತ್ತರ ಭಾರತದಲ್ಲೆಲ್ಲಾ ಹಬ್ಬಿತು. ಆರನೆಯ ವಿಕ್ರಮಾದಿತ್ಯನು ಆಂಧ್ರ, ದ್ರಾವಿಡ, ನೇಪಾಲ ದೊರೆಗಳನ್ನು ತನ್ನ ಪದಾಕ್ರಾಂತರನ್ನಾಗಿ ಮಾಡಿಕೊಂಡ ವಿಷಯ ಅವನ ಹಲವು ಶಾಸನಗಳಲ್ಲಿದೆ. ಅವನು ಬಿಹಾರ ಪ್ರಾಂತವನ್ನು ಗೆದ್ದು ಅಲ್ಲಿ ಚಾಳುಕ್ಯರ ಪ್ರತಿನಿಧಿಯಾಗಿ ನಾನ್ಯದೇವನನ್ನು ನೇಮಿಸಿದನು. ಆ ಮುಂಚೆ ಬಂಗಾಳ ಪ್ರಾಂತವನ್ನು ಗೆದ್ದು ಅಲ್ಲಿ ಚಾಳುಕ್ಯರ ಪ್ರತಿನಿಧಿಯಾಗಿ ಸಾಮಂತಸೇನನನ್ನು ನೇಮಿಸಲಾಗಿತ್ತು. ಇವರೇ ಕ್ರಮೇಣ ಸ್ವತಂತ್ರವಾದ ಮಿಥಿಲೆಯ 'ಕರ್ನಾಟ' ವಂಶದ, ಬಂಗಾಳದ 'ಸೇನ' ವಂಶದ ಮೂಲಪುರುಷರು. ಸು. ೧೧೫೮ರ ವಲ್ಲಾಲ ಸೇನನು (<ಬಲ್ಲಾಳ) ಚಾಲುಕ್ಯ ರಾಜಕುಮಾರಿಯನ್ನು ಮದುವೆಯಾಗಿದ್ದನು.[7]

ನೇಪಾಳದಿಂದ ಹರಿದು ಬರುವ ಗಂಡಕಿ, ಕೋಶಿ ನದಿಗಳು ಬಿಹಾರದಲ್ಲಿ ಗಂಗಾನದಿಯನ್ನು ಸೇರುತ್ತವೆ. ಬಿಹಾರದ ಪೂರ್ವದಲ್ಲಿ ಕೋಶಿ, ಪಶ್ಚಿಮ ಭಾಗದಲ್ಲಿ ಗಂಡಕಿ, ದಕ್ಷಿಣದಲ್ಲಿ ಗಂಗಾನದಿಗಳ ಮಧ್ಯದ ಭೂ ಭಾಗವೇ ಇತಿಹಾಸ ಪ್ರಸಿದ್ಧ ವಿದೇಹ ಅಥವಾ ಮಿಥಿಲಾಃ ಆಧುನಿಕ ಕಾಲದಲ್ಲಿ ಅದನ್ನು ತಿರಹುತ್‌ಎಂದೂ ಕರೆಯುತ್ತಾರೆ. ಆ ಪ್ರದೇಶವನ್ನಾಳಿದವನೇ ವಿಕ್ರಮಾದಿತ್ಯನ ಪ್ರತಿನಿಧಿ ನಾನ್ಯದೇವ. ಕ್ರಿ. ಶ. ೧೦೯೭ರಲ್ಲಿ ಅವನು ಸ್ಥಾಪಿಸಿದ "ಕರ್ನಾಟ" ವಂಶವು ಮುಂದಿನ ಇನ್ನೂರೈವತ್ತು ವರ್ಷಗಳಲ್ಲಿ ಆ ಭಾಗದ ಸಾಮಾಜಿಕ ಧಾರ್ಮಿಕ ಜೀವನದಲ್ಲಿ ಬಹುದೊಡ್ಡ ಗುಣಾತ್ಮಕ ಬದಲಾವಣೆಯನ್ನು ತಂದಿತು.

ಈ ನಾನ್ಯದೇವನು ಬಹುಶಃ ಹುಟ್ಟಿನಿಂದ ಬ್ರಾಹ್ಮಣನಾಗಿದ್ದು, ಸೇನಾ ದಂಡನಾಯಕನಾಗಿ ಆರನೆಯ ವಿಕ್ರಮಾದಿತ್ಯನ ಆಪ್ತನಾಗಿ ಕೆಲಸ ಮಾಡುತ್ತಿದ್ದಿರಬಹುದು. ಆರನೆಯ ವಿಕ್ರಮಾದಿತ್ಯನ ಮಗ ಮೂರನೆಯ (ಭೂಲೋಕಮಲ್ಲ) ಸೋಮೇಶ್ವರನ ಕಾಲದ ಕ್ರಿ. ಶ. ೧೧೨೭ರ ಶಾಸನದಲ್ಲಿ ಚಕ್ರವರ್ತಿಯ ಪಟ್ಟಾಭಿಷೇಕ ಕಾಲದಲ್ಲಿ ನನ್ನಯಭಟ್ಟ ಎಂಬ ಜ್ಯೋತಿಷಿಗೆ ದಾನವನ್ನು ನೀಡಲಾಗಿದೆ. (B. R. Gopal : The Chalukyas of Kalyan, P.7), ನಾನ್ಯ (ನಿನ್ನಿ) ದೇವನೂ ನನ್ನಯಭಟ್ಟನೂ ಬಂಧುಗಳಾಗಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ನಾನ್ಯದೇವ ಬಹುಶಃ ಒಬ್ಬ ಬ್ರಹ್ಮಕ್ಷತ್ರಿಯ.

ದಾಖಲೆಗಳು ನಾನ್ಯದೇವನನ್ನು 'ಕರ್ನಾಟಕ ಕುಲ ಭೂಷಣ' ಎಂದೇ ಕರೆದಿವೆ. (ಅವನನ್ನು ಒಂದು ವಂಶಾವಳಿಯು 'ದೋಯ' ಎಂದಿದೆ.) ಕನ್ನಡಿಗನಾದ ಅವನ ನಿಜವಾದ ಹೆಸರು ನನ್ನಿದೇವ. 'ನನ್ನಿ' ಎಂದರೆ ಕನ್ನಡದಲ್ಲಿ ಪ್ರೀತಿ, ಪ್ರಾಮಾಣಿಕತೆ ಎಂದರ್ಥ. "ನನ್ನಯ್ಯ" ಎಂಬಂತಹ ಹೆಸರುಗಳ ಮೂಲದಲ್ಲಿರುವ ಪದ "ನನ್ನಿ"ಯೇ.[8] "ನನ್ನಿ" ಪದದ ಜಾಗದಲ್ಲಿ ಅದರ ಸಮೀಪದ ಸಂಸ್ಕೃತ 'ನಾನ್ಯ'ವನ್ನು ಸೇರಿಸಲು ಕಾರಣ, ಅವನು ಆಳಲು ಆರಂಭಿಸಿದ ಪ್ರದೇಶವು ಸಂಸ್ಕೃತದ ಸೋದರ ಭಾಷೆಗಳಾದ ಹಿಂದಿ ಇತ್ಯಾದಿ ಭಾಷಾ ಪ್ರದೇಶವಾಗಿದ್ದುದು. ಅವನ ಇನ್ನೊಂದು ಹೆಸರು "ನಾನ್ಯುಪದೇವ" ಎಂಬುದು "ನನ್ನಿಯಪ್ಪ ದೇವ" ಎಂಬುದರ ಸಂಸ್ಕೃತೀಕೃತ ರೂಪ. ನಾನ್ಯದೇವ ಮತ್ತು ಅವನ ಮುಂದಿನ ರಾಜರನ್ನು ದಾಖಲೆಗಳಲ್ಲಿ "ಕರ್ಣಾಟ ಚೂಡಾಮಣಿ"ಗಳೆಂದು "ಕರ್ಣಾಟ ವಂಶೋದ್ಭವ"ರೆಂದು "ಕರ್ಣಾಟಾಧಿಪ"ರೆಂದೇ ಕರೆದಿದೆ. ನಾನ್ಯದೇವನು ಬಿಹಾರದ ಪಾಲರನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿಕೊಂಡು ತನ್ನ ಆಳಿಕೆಯನ್ನು ದೃಢಪಡಿಸಿಕೊಂಡನು.

ಕ್ರಿ. ಶ. ೧೦೯೭ – ೧೧೪೭ರವರೆಗೆ ಆಳಿದ ನಾನ್ಯದೇವನ ಮೊದಲ ರಾಜಧಾನಿ ಕೋಯಿಲಿ ನಾನ್‌ಪುರ (ಈ 'ಕೋಯಿಲ್' ಎಂಬುದು ದೇವಾಲಯ ಎಂಬರ್ಥದ ದ್ರಾವಿಡದ ಕೋಯಿಲ್‌ಇರಬಹುದು); ಬಳಿಕ ಅವನು ಸಿಮ್ರೌನ್‌ಗಡದಲ್ಲಿ ಕೋಟೆ ಕಟ್ಟಿ ಅಲ್ಲಿಗೆ ತನ್ನ ರಾಜಧಾನಿಯನ್ನು ವರ್ಗಾಯಿಸಿದನು. ಸಿಮ್ರೌನ್‌ಗಡವು ದಕ್ಷಿಣ ನೇಪಾಳದಲ್ಲಿ, ಭಾರತದ ಗಡಿಯಾಚೆ ಹತ್ತು ಕಿಲೋಮೀಟರ್‌ದೂರದಲ್ಲಿದೆ. ಕರ್ನಾಟ ರಾಜರ ವಿಶೇಷಣಗಳಲ್ಲಿ, ನೇಪಾಳದ ಹಸ್ತಪ್ರತಿಗಳಲ್ಲಿ ಉಲ್ಲೇಖವಾಗಿರುವಂತೆ "ಪರಮೇಶ್ವರ, ಪರಮ ಭಟ್ಟಾರಕ" ಎಂಬುವೂ ಗಮನಾರ್ಹ. ಇವು ಕಲ್ಯಾಣ ಚಾಲುಕ್ಯ ಚಕ್ರವರ್ತಿಗಳ ವಿಶೇಷಣಗಳೂ ಆಗಿದ್ದುದು ಪ್ರಸಿದ್ಧವೇ. ನಾನ್ಯದೇವನು ೧೧೨೦ ರಲ್ಲಿ. ಮತ್ತೆ ೧೧೪೧ ರಲ್ಲಿ ನೇಪಾಳದ ಮೇಲೆ ಧಾಳಿ ಮಾಡಿ ಭಕ್ತಪುರ ಮತ್ತು ಪಾಟಣ್‌ಗಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡನು. ಈ ನಗರಗಳು ಕಾಠಮಾಂಡೊಗೆ ಹದಿನೈದು, ಹತ್ತು ಕಿಲೋ ಮೀಟರ್‌ಅಂತರದಲ್ಲಿವೆ.

ವಿದ್ವಾಂಸ ನಾನ್ಯದೇವನು ಭರತನ ನಾಟ್ಯಶಾಸ್ತ್ರದ ಮೇಲೆ 'ಭರತ ಭಾಷ್ಯ' ಎಂಬ ಭಾಷ್ಯ ಬರೆದಿದ್ದಾನೆ. ಸರಸ್ವತಿ ಹೃದಯಾಲಂಕಾರ ಎಂಬ ಹೆಸರಿನ ಈ ಗ್ರಂಥದ ಅಂತ್ಯದಲ್ಲಿ ತನ್ನನ್ನು "ಕರ್ಣಾಟ ಕುಲ ಭೂಷಣ" ಎಂದು ಕರೆದುಕೊಂಡಿದ್ದಾನೆ. ಅದರಲ್ಲಿ 'ಕರ್ಣಾಟ – ಭಾಷಾ – ದೇಶೀರಾಗ"ಗಳ ಮತ್ತು ಇತರ ರಾಗಗಳ ಹೆಸರುಗಳನ್ನು ಹೇಳುತ್ತಾನೆ. "Nanyadeva and his `Karnata – bhasa – viduh' or musical followers (of Karnataka) gave tremendous impetus to music and probably encouraged the use of 'ಭಾಷಾ' or vernacular of the land" (vijayakanta Misra : Cultural Heritage of Mithila, P. 216.)" (ಮಿಥಿಲೆಯ ಸಂಗೀತ ಪರಂಪರೆ ಮುಂದೆ ಹರಿಸಿಂಹದೇವನ ಕಾಲಕ್ಕೆ ನೇಪಾಳಕ್ಕೂ ಹರಿಯಿತು.) ವಿಶೇಷವಾಗಿ ಸಂಗೀತ ಭಾಗದಲ್ಲಿ ಅವನು 'ಮಾರ್ಗ', 'ದೇಶಿ' ಎಂಬ ಎರಡು ಬಗೆಯ ಸಂಗೀತ ಶೈಲಿಗಳನ್ನು ವರ್ಣಿಸಿದ್ದಾನೆ. (ಈ ಪರಿಭಾಷೆ ಆ ಕಾಲಕ್ಕೆ ಕರ್ಣಾಟಕದಲ್ಲಿ ಪರಿಚಿತವಾಗಿತ್ತು.) ನಾನ್ಯದೇವನ ಕೃತಿ ಮಿಥಿಲೆ ಪ್ರದೇಶದ ಸಂಗೀತ ನರ್ತನ ಕಲೆಯ ವಿಕಾಸಕ್ಕೆ ನಾಂದಿ ಹಾಡಿತು; ಭದ್ರಬುನಾದಿಯನ್ನು ಹಾಕಿತು. ಅವನ "ಸರಸ್ವತೀ ಹೃದಯಾಲಂಕಾರ" ಭಾಷ್ಯದಲ್ಲಿ ಕೊಟ್ಟಿರುವ 'ದೇಶಿ' ರಾಗಗಳು ವಾಸ್ತವವಾಗಿ ಕರ್ನಾಟಕ ಸಂಗೀತದ ರಾಗಗಳೇ ಆಗಿವೆ. ಆಧುನಿಕ ಪೂರ್ವ ಭಾರತದಲ್ಲಿ ಪ್ರಚುರವಿದ್ದ ಹಿಂದೂ ಕಾನೂನಿಗಾಗಿ (ದತ್ತು ಸ್ವೀಕಾರ, ಪಿತ್ರಾರ್ಜಿತ ಆಸ್ತಿ, ಆಸ್ತಿ ವಿಭಜನೆ ಇತ್ಯಾದಿಗಳು) ಅವಲಂಬಿಸುತ್ತಿದ್ದ ಏಕೈಕ ಧರ್ಮಶಾಸ್ತ್ರ ಗ್ರಂಥ ಕಲ್ಯಾಣ ಚಾಲುಕ್ಯರ ಕಾಲದ ವಿಜ್ಞಾನೇಶ್ವರನ 'ಮಿತಾಕ್ಷರಾ'. ಇದು ಯಜ್ಞವಲ್ಕ್ಯ ಸ್ಮೃತಿಗೆ ಬರೆದ ಟೀಕೆಯಾದರೂ, ತನಗಿಂತ ಹಿಂದಿನ ಕೃತಿಕಾರರ ಅಭಿಪ್ರಾಯಗಳನ್ನು "ತರ್ಕಬದ್ಧವಾಗಿ ಸಂಗ್ರಹಿಸಿ, ವಿಮರ್ಶಿಸಿ ಅಂತ್ಯದಲ್ಲಿ ತನ್ನದೇ ಆದ ಅಭಿಪ್ರಾಯವನ್ನು ನೀಡಿದ್ದಾನೆ" (ಇಮ್ಮಡಿ ಶಿವಬಸವ ಸ್ವಾಮಿಗಳು: ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ, ಪು. ೧೯೯). ಬಂಗಾಳವನ್ನು

ಹೊರತುಪಡಿಸಿದರೆ ಇಡೀ ಭಾರತದಲ್ಲಿ ಅಧಿಕೃತ ಕಾನೂನು ಗ್ರಂಥವೆಂದು ಪರಿಗಣಿತವಾಗಿದ್ದದ್ದು ಇದೇ. ವಿಜ್ಞಾನೇಶ್ವರನ 'ಮಿತಾಕ್ಷರಾ'[9] ಇಡೀ ಭಾರತದಲ್ಲಿ ಪ್ರಚುರವಾಗಲು ಅದರ ಶ್ರೇಷ್ಠತೆಯ ಜೊತೆಗೆ, ಅವನಿಗೆ ಆಶ್ರಯ ನೀಡಿದ್ದ ಆರನೆಯ ವಿಕ್ರಮಾದಿತ್ಯನ ಪ್ರತಿನಿಧಿಯಾಗಿ ಉತ್ತರ ಭಾರತವನ್ನು ಆಳಿದ ನಾನ್ಯದೇವನೂ ಕಾರಣವಿರುವಂತಿದೆ. (ಬಂಗಾಳದಲ್ಲಿ ಮಾತ್ರ ಪ್ರಚಲಿತವಿದ್ದುದು ಜೀಮೂತವಾಹನನ 'ದಾಯಭಾಗ' - ಅದೂ ಕರ್ನಾಟಕದ ದೊರೆಗಳಾದ ಸೇನರ ಆಶ್ರಯದಲ್ಲೇ ರಚಿತವಾದುದೆಂಬುದು ಗಮನಾರ್ಹ).

ನಾನ್ಯದೇವನ ಹಿರಿಯ ಮಗ ಮಲ್ಲದೇವನು ನೇಪಾಳವನ್ನೂ, ಕಿರಿಯ ಮಗ ಗಂಗದೇವನು (೧೧೪೭ - ೮೮) ಮಿಥಿಲೆಯನ್ನೂ ಆಳಿದರು. ಮಲ್ಲದೇವನು ಆಶ್ರಯವಿತ್ತಿದ್ದ ವರ್ಧಮಾನ ಉಪಾಧ್ಯಾಯನು ಸ್ಮೃತಿಗಳನ್ನು ಕುರಿತು ಬರೆದಿದ್ದಾನೆ. ಅವನ ಬರವಣಿಗೆಗಳಲ್ಲಿ ಬರುವ ಒಬ್ಬ "ಕರ್ಣಾಟ ಲಲಾಟ"ನನ್ನು ಇನ್ನೂ ಗುರುತಿಸಲಾಗಿಲ್ಲ. ಅವರ ಬಳಿಕ ಬಂದ ನರಸಿಂಹ ದೇವನು ದಾಖಲೆಗಳಲ್ಲಿ "ಕರ್ಣಾಟಾನ್ವಯ ಭೂಷಣ"ನೆನ್ನಿಸಿಕೊಂಡಿದ್ದರೂ "ಕರ್ಣಾಟ" ರಾಜ್ಯವು ಅವನ ಕಾಲದಲ್ಲಿ ದುರ್ಬಲಗೊಂಡಿತು. ದೆಹಲಿ ಸುಲ್ತಾನ ಷಹಾಬುದ್ದೀನ್ ಮಹಮ್ಮದ್ ಘೋರಿಯನ್ನು ಅವನು ಎದುರಿಸಿದನಾದರೂ ಅವನಿಗೆ ಕಪ್ಪ ಕಾಣಿಕೆ ಕೊಟ್ಟು ಮಿಥಿಲೆಯನ್ನು ತನ್ನ ವಶದಲ್ಲಿ ಉಳಿಸಿಕೊಂಡನು.

ರಾಮಸಿಂಹದೇವನನ್ನು (೧೨೨೭ - ೧೨೮೫) ಕ್ರಿ.ಶ. ೧೨೪೪ರ ನೇಪಾಳದ ಶಾಸನದಲ್ಲಿ "ಅಪ್ಪು ರಾಮಸಿಂಹದೇವ"ನೆಂದಿದೆ.[10] ಸಮರ್ಥನೂ ಉದಾರಿಯೂ ಸಾಹಿತ್ಯಪ್ರೇಮಿಯೂ ಆಗಿದ್ದ ಅವನ ಕಾಲದಲ್ಲಿ ಮಿಥಿಲೆಯು ಸಂಸ್ಕೃತ ವಿದ್ವಾಂಸರಿಗೆ ತಾಣವಾಯಿತು; ಹಲವು ತತ್ವಶಾಸ್ತ್ರ ಕೃತಿಗಳು ಅವರಿಂದ ರಚಿತವಾದವು. ಅವನಲ್ಲಿ ಬೌದ್ಧ, ಹಿಂದೂ ಧರ್ಮಗಳ ಸಮನ್ವಯವಿತ್ತು. ಬೌದ್ಧರು ಕಾಳಿ ಶಿವನಿಗೆ ಗೌರವ ಸಲ್ಲಿಸಿದರೆ ಶ್ರೀಮಂತ ಹಿಂದೂಗಳು ಬೌದ್ಧರಿಗೆ ದತ್ತಿಗಳನ್ನು ನೀಡಿದರು. ಟಿಬೆಟಿನ ಬೌದ್ಧ ಗುರು ಧರ್ಮಸ್ವಾಮಿಯು ಅವನ ರಾಜಧಾನಿ "ಪ - ತ"ವನ್ನು (ಸಿಮ್ರೌನ್‌ಗಡ) ವರ್ಣಿಸುತ್ತ ಅಲ್ಲಿ ಆರು ಲಕ್ಷ ಮನೆಗಳು, ಊರ ಸುತ್ತ ಏಳು ಪೌಳಿ ಗೋಡೆಗಳ ಕೋಟೆ ಇದ್ದುದನ್ನು ಹೇಳುತ್ತಾನೆ. ಕೋಟೆಯಿಂದ ಹೊರಗಡೆ ಅರಮನೆಯಿದ್ದರೂ ಅದರ ಸುತ್ತ ಮರಗಳು ಹನ್ನೆರಡು ಕಂದಕಗಳು ಅದರ ರಕ್ಷಣೆಗಿದ್ದುವು. (ಚಿತ್ರ ೪೦ - ೪೧). "ತುರುಷ್ಕ"ರ ಭಯವು ಆ ಭದ್ರತೆಗೆ ಕಾರಣ. ಬಿಹಾರವು ಅಂದು ಮುಸ್ಲಿಮರ ಕೈಯಲ್ಲಿದ್ದರೂ ಅದರ ಉತ್ತರ ಭಾಗದಲ್ಲಿದ್ದ ಮಿಥಿಲೆಯನ್ನು ಅವರ ಆಕ್ರಮಣದಿಂದ ರಾಮಸಿಂಹದೇವನು ಮುಕ್ತಗೊಳಿಸಿದ್ದನು. ಸಮಕಾಲೀನನಾಗಿದ್ದ ಧರ್ಮಸ್ವಾಮಿಯ ಪ್ರಕಾರ, "ಮುಸ್ಲಿಮರ ಖಡ್ಗದ ಮೊನಚನ್ನು ಮೊಂಡುಗೊಳಿಸಿದ" ಯಶಸ್ವಿ ದೊರೆ.[11] ಶ್ರೀಕರ ಎಂಬ ವಿದ್ವಾಂಸನ ಅಮರಕೋಶದ ಟೀಕೆಯು ಇವನ ಕಾಲದಲ್ಲಿ ರಚಿತವಾಯಿತು. ಪೃಥ್ವೀಧರ, ರತ್ನೇಶ್ವರ, ಚಿತ್ರಧವ ಮೊದಲಾದ ವಿದ್ವಾಂಸರು ಅವನ ಆಶ್ರಯವನ್ನು ಪಡೆದಿದ್ದರು. ಬೌದ್ಧನಾಗಿದ್ದ ಧರ್ಮಸ್ವಾಮಿಯ ಪಾಂಡಿತ್ಯಕ್ಕೆ ಮಾರುಹೋದ ರಾಮಸಿಂಹದೇವನು ಅವನನ್ನು ತನ್ನ ಪುರೋಹಿತನಾಗಿರಲು ಪ್ರಾರ್ಥಿಸಿಕೊಂಡದ್ದು ಗಮನಾರ್ಹ.

ಇವನ ನಂತರದ ದೊರೆ ಶಕ್ತಿಸಿಂಹದೇವ ಅಥವಾ ಶುಕ್ರಸಿಂಹ ದೇವನು ಪ್ರಜೆಗಳ ಬಗ್ಗೆ ನಿರ್ಲಕ್ಷ್ಯ ಮನೋಧರ್ಮದವನಾಗಿದ್ದು ಅವನನ್ನು ನಿಯಂತ್ರಿಸಲು ಅವನ ಮಂತ್ರಿಯೇ ಏಳು ಜನ ಪ್ರತಿಷ್ಠಿತರ ಮಂಡಲಿಯನ್ನು ಸ್ಥಾಪಿಸಿದ್ದು ಒಂದು ವಿಶೇಷ ಕುತೂಹಲಜನಕ ವಿಷಯ. ಇವನ ಕಾಲದಲ್ಲಿ "ಕರ್ನಾಟ" ರಾಜ್ಯದ ವೈಭವ ಕೆಳಗಿಳಿಯಿತು.

ಹಾಗೆ ಕೆಳಗಿಳಿದುದನ್ನು ಮತ್ತೆ ಮೇಲಕ್ಕೆ ಕೊಂಡೊಯ್ದ ದೊರೆ ಅವನ ನಂತರದ ಹರಿಸಿಂಹದೇವ. ೧೨೮೩ - ೮೪ರಲ್ಲಿ ಪಟ್ಟಕ್ಕೆ ಬಂದು ಮುಂದೆ ಐವತ್ತು ವರ್ಷಗಳವರೆಗೆ ಆಳಿದ ಹರಿಸಿಂಹದೇವನ್ನು ಶಾಸನಗಳು, ಸಾಹಿತ್ಯಕೃತಿಗಳು "ಕರ್ನಾಟ ಕುಲ ಸಂಭವ", "ಕರ್ನಾಟ ವಂಶೋದ್ಭವ", "ಕಾರ್ನಾಟ ಚೂಡಾಮಣಿ" ಎಂದು ಮುಂತಾಗಿ ಕರೆದಿವೆ. (ಚಿತ್ರ - ೩) "ಕರ್ನಾಟ" ವಂಶದ ದೊರೆಗಳಲ್ಲೆಲ್ಲ ಇವನು ಪ್ರಖ್ಯಾತ. ಜ್ಯೋತಿರೀಶ್ವರ ಠಾಕೂರನ "ಧೂರ್ತ ಸಮಾಗಮ" ಎಂಬ ನಾಟಕದಲ್ಲಿ ಅವನನ್ನು "ಹಿಂದೂಪತಿ"ಯೆಂದು ಉಮಾಪತಿಯ "ಪಾರಿಜಾತ ಹರಣ ನಾಟಕ"ದಲ್ಲಿ "ಹಿಂದೂಪತಿ ಹರಿಸಿಂಹ"ನೆಂದು ಸಂಬೋಧಿಸಿದೆ. ಅವನಿಗೂ ದೇವಗಿರಿ ಯಾದವ ದೊರೆ ರಾಮಚಂದ್ರನಿಗೂ ಹದಿನಾಲ್ಕನೇ ಶತಮಾನದ ಪೂರ್ವಾರ್ಧದಲ್ಲಿ ಪತ್ರ ವ್ಯವಹಾರ ನಡೆದಿರುವುದಕ್ಕೆ ದಾಖಲೆಯಿದೆ. ಅವನ ಬಹುದೊಡ್ಡ ಸಾಧನೆಯೆಂದರೆ, ಮಿಥಿಲೆಯ ಮೇಲೆ ದಂಡೆತ್ತಿ ಬಂದ ಮುಸ್ಲಿಮರ ದಾಳಿಗಳನ್ನು ಯಶಸ್ವಿಯಾಗಿ ತಡೆದುದು.

“ದಾನರತ್ನಾಕರ”ವು ಹೇಳುವಂತೆ “ಮ್ಲೇಚ್ಛ”ರ ದವಡೆಗಳಲ್ಲಿ ಸಿಲುಕಿದ್ದ ಮಿಥಿಲೆಯನ್ನು ರಕ್ಷಿಸಿದವನು ಹರಿಸಿಂಹದೇವ. ಅವನ ರಾಜಧಾನಿಯ ಮೇಲೆ ದಂಡೆತ್ತಿ ಬಂದ ದೆಹಲಿಯ ಘಿಯಾಸುದ್ದೀನ್ ತುಘಲಕನ ಸೈನ್ಯವನ್ನು ಹಿಮ್ಮೆಟ್ಟಿಸಿದ್ದೇ “ಕವಿಶೇಖರಾಚಾರ್ಯ” ಬಿರುದಿನ ಜ್ಯೋತಿರೀಶ್ವರನ[12] “ಧೂರ್ತ ಸಮಾಗಮ” ಎಂಬ ನಾಟಕದ ವಸ್ತು.[13] ಆ ನಾಟಕವನ್ನು ಮ್ಲೇಚ್ಛರ ಮೇಲೆ ಗಳಿಸಿದ ವಿಜಯದ ಸ್ಮರಣಾರ್ಥವಾಗಿ ಬರೆಯಲಾಗಿತ್ತು. ಅದನ್ನು ಹರಿಸಿಂಹದೇವ ತನ್ನ ಅರಮನೆಯ ರಂಗಸ್ಥಳದ ಮೇಲೆ ವೀಕ್ಷಿಸಿದನು. ಘಿಯಾಸುದ್ದೀನ್ ತುಘಲಕನನ್ನು ಅಲ್ಲಿ ‘ಸುರತ್ರಾಣ’ (Sultan) ಎಂದು ಕರೆದಿದೆ. ಹರಿಸಿಂಹದೇವನು ತನ್ನ ಮಿಥಿಲೆ ರಾಜ್ಯವನ್ನು ಸುತ್ತುವರಿದಿದ್ದ ಮುಸ್ಲಿಮರಿಂದಾಗಿ ತನ್ನ ರಾಜ್ಯವನ್ನು ಹೆಚ್ಚು ವಿಸ್ತರಿಸಲು ಸಾಧ್ಯವಿರಲಿಲ್ಲವಾದ ಕಾರಣ ಅವನು ನೇಪಾಳದತ್ತ ಗಮನ ಹರಿಸಿ ಅಲ್ಲಿ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುವತ್ತ ಲಕ್ಷ್ಯ ವನ್ನಿತ್ತನು. ಆಗ ನೇಪಾಳದಲ್ಲಿ “ಮಾತ್ಸ್ಯ ನ್ಯಾಯ”ವಿತ್ತು (anarchy). ಕ್ರಿ.ಶ. ೧೩೧೧ರಲ್ಲಿ ಅವನು ನೇಪಾಳದ ಮೇಲೆ ಧಾಳಿ ಮಾಡಿ ಅದನ್ನು ತನ್ನ ರಾಜ್ಯದ ಭಾಗವಾಗುವಂತೆ ಮಾಡಿದನು. ಸುತ್ತಮುತ್ತಲೂ ಮುಸ್ಲಿಂ ದೊರೆಗಳಿಂದ ಆವೃತವಾಗಿದ್ದ ಹರಿಸಿಂಹದೇವನ ಮಿಥಿಲೆ ರಾಜ್ಯವು ಸಹಜವಾಗಿಯೇ “the only refuge of Hindus and Hinduism” ಎಂಬ ಖ್ಯಾತಿಗೆ ಗುರಿಯಾಗಿದೆ.

ಕ್ರಿ.ಶ. ೧೩೨೪ರಲ್ಲಿ ಮತ್ತೆ ಮುಸ್ಲಿಂ ಧಾಳಿ ನಡೆದಾಗ ಹರಿಸಿಂಹದೇವನು ಸೋತು ನೇಪಾಳಕ್ಕೆ ಹೋಗಿ ಅಲ್ಲಿ ನೆಲೆಸಬೇಕಾಯ್ತು. ಸುಂದರ ದೇವಾಲಯಗಳಿಂದ ಶಿಲ್ಪಗಳಿಂದ ಅರಮನೆ ಕೋಟೆ ಗೋಪುರಗಳಿಂದ ನಳನಳಿಸುತ್ತಿದ್ದ ಸಿಮ್ರೌನ್‌ಗಡ ನಗರವನ್ನು ಮುಸ್ಲಿಂ ಸೈನ್ಯವು ಹಾಳುಗೆಡವಿತು. ಈಗ ಅದೊಂದು ಕೆಲವೇ ಮನೆ ಗುಡಿಸಲುಗಳಿರುವ ಚಿಕ್ಕ ಗ್ರಾಮವಾದರೂ ಅಲ್ಲಿ ಎಲ್ಲಿ ನೋಡಿದರೂ ಸೂಕ್ಷ್ಮ ಕೆತ್ತನೆಯ ಭಗ್ನ ದೇವಾಲಯ, ಶಿಲ್ಪ ಮೂರ್ತಿಗಳು ಕಾಣಸಿಗುತ್ತವೆ. ಏಳು ಕಿಲೋ ಮೀಟರ್ ಸುತ್ತಳತೆಯ ಕೋಟೆಯ (ಚಿತ್ರ ೪೦, ೪೧) ಸುತ್ತಮುತ್ತ ಅರಣ್ಯ ಪ್ರದೇಶ, ವ್ಯವಸಾಯ ಯೋಗ್ಯ ಭೂಮಿ ಇದೆ. ಸುತ್ತಮುತ್ತ ಫಲವತ್ತಾದ ಜೋಳದ ಹೊಲಗಳಿವೆ; ಎಲ್ಲೆಲ್ಲೂ ಮಣ್ಣಲ್ಲಿ ಬತ್ತದ ತೆನೆಗಳು ಕಾಣಸಿಗುತ್ತವೆ.[14] ದೇವಾಲಯಗಳ ಪಕ್ಕದಲ್ಲಿನ ದಿಬ್ಬಗಳಲ್ಲಿ ಹಲವು ಪ್ರಾಚೀನ ಸ್ಮಾರಕಗಳು ಹುದುಗಿವೆ. ಸುಂದರ ಭಗ್ನ ವಿಷ್ಣು, ಮಹಿಷಾಸುರ ಮರ್ದಿನಿ, ಸೂರ್ಯ, ಕಂಕಾಲಿ, ಅಷ್ಟಭುಜ ದೇವಿ, ಬ್ರಹ್ಮ, ಹರಿಹರ, ನವಗ್ರಹ ಮೂರ್ತಿಗಳು ಅಲ್ಲಿ ದೊರಕಿವೆ. ಸುಂದರ ಪಟ್ಟಿಕಾ ಶಿಲ್ಪಗಳನ್ನು ಕಾಣಬಹುದು. (ಚಿತ್ರ ೫ಎ, ೫ಬಿ, ೬, ೭) ಭಗ್ನಕೋಟೆ, ಸುಂದರ ಶಿಲ್ಪಗಳು, ದೇವಾಲಯಗಳು ತಕ್ಕಮಟ್ಟಿಗೆ ಕರ್ನಾಟಕದ ಹಂಪಿಯನ್ನು ಸಹಜವಾಗಿ ನೆನಪಿಸುತ್ತವೆ. ಸಮೀಪದಲ್ಲೇ ಹರಿಹರಪುರವೆಂಬ ಗ್ರಾಮವಿದೆ.[15]

ಹದಿನೆಂಟನೇ ಶತಮಾನದಲ್ಲಿ ಕಷಿಯಾನಿ ಡಿ ಮಚೆರತ ಎಂಬ ರೋಮನ್ ಕೆಥೊಲಿಕ್ ಪಾದ್ರಿಯು ಸಿಮರೌನ್‌ಗಡದ ಸ್ಮಾರಕಗಳನ್ನು ಪರಿಶೀಲಿಸಿ ಸಿದ್ಧಪಡಿಸಿದ ನಕ್ಷೆಯನ್ನು ಭಕ್ತಪುರದ ಕಲ್ಲಿನ ಮೇಲೆ ಕೆತ್ತಲಾಗಿದೆ.[16] ಆ ನಗರದ ಇಕ್ಕಟ್ಟಾದ ಓಣಿಗಳು, ಸುತ್ತುವರಿದ ಎತ್ತರದ ಏಳು ಗೋಡೆಗಳು, ಅವುಗಳ ಮಧ್ಯೆ ಕಾಲುವೆಗಳು (ಚಿತ್ರ ೪೦ – ೧), ಒಂದೇ ಒಂದು ಬಾಗಿಲಿನಿಂದ ಪ್ರವೇಶಿಸಬೇಕಾದ ನಾಲ್ಕು ಕೋಟೆಗಳನ್ನು ಆ ಪಾದ್ರಿ ವಿವರಿಸಿದ್ದಾನೆ. ಆ ಕೋಟೆಯ ದಕ್ಷಿಣದ ತುದಿಯು ಭಾರತದಲ್ಲಿದೆ. ಪುರಾತತ್ವ ಶೋಧಜ್ಞರ ಪ್ರಕಾರ ಸಿಮಲ್ (ಸಿಮರ್) ಅಥವಾ ಹತ್ತಿ ಮರಗಳು (Cottan tree) ಹೆಚ್ಚು ಬೆಳೆಯುವ ಪ್ರದೇಶವಾದ್ದರಿಂದ ಊರಿಗೆ ಆ ಹೆಸರು ಬಂದಿದೆ (ಸಿಮರ್ + ಬನ್ + ಗಡ್). ಆ ಪ್ರದೇಶವನ್ನು ವಿ(ಬಿ)ದೇಹ, ಮಿಥಿಲ, ತಿರಭುಕ್ತಿ (ತಿರ್ಹುತ್), ಬೃಹದಾರಣ್ಯ, ನೈಮಿಕಾನನ, ಜಾನಕೀ ಜನ್ಮಭೂಮಿ, ಶಾಂಭವಿ, ಸ್ವೋರ್ಣಲಂಶಲ್, ಜ್ಞಾನಕ್ಷೇತ್ರ, ಕ್ರಿಯಾಪೀಠ ಮತ್ತು ತಪೂವನ ಎಂಬ ಭಿನ್ನ ಹೆಸರುಗಳಿಂದ ಕರೆಯಲಾಗುತ್ತಿದೆ.

ಸುಲ್ತಾನ್ ಘಿಯಾಸುದ್ದೀನನು ಸಿಮ್ರೌನ್‌ಗಡ ನಗರದ ಅಮೂಲ್ಯ ಕಲಾ ಸಂಪತ್ತಿನ ದೇವಾಲಯ, ಶಿಲ್ಪಗಳನ್ನು, ಕಲಾಕೃತಿಗಳನ್ನು ನಾಶಪಡಿಸಿ ಇಡೀ ನಗರವನ್ನು ಹಾಳುಗೆಡವಿದನು. ಸಾವಿರಾರು ಹಿಂದುಗಳ ನರಮೇಧ ಅವ್ಯಾಹತವಾಗಿ ನಡೆಯಿತು. ಸಿಮ್ರೌನ್‌ಗಡದ ಸುತ್ತಮುತ್ತ ಇರುವ ಲಕ್ಷ್ಮೀಪುರ, ಕೊತ್ವಾಲಿ, ಭಗವಾನ್‌ಪುರ, ದೇವಪುರ, ಹರಿಹರಪುರ, ಉಜಿಡಿ, ಕಚೋರ್ಬ, ಅಮೃತಗಂಜ್, ಗೋಳಗಂಜ್, ಖಜಹನಿ, ನಾಯಕ ತೋಲ್ ಮತ್ತು ಝುಮರಿ ಊರುಗಳಲ್ಲಿ ದೇವ, ದೇವಿಯರ ಸುಸ್ಥಿತಿಯಲ್ಲಿರುವ ಅಥವಾ ಭಗ್ನಗೊಂಡ ಶಿಲ್ಪಗಳನ್ನು ಕಾಣಬಹುದು. ಅಲ್ಲಿ ಚತುರ್ಮುಖ ಲಿಂಗವು ದೊರಕಿದೆ. ಒಡೆದ ಮಡಕೆ ಚೂರುಗಳು, ಹಳೆಯ ಇಟ್ಟಿಗೆಗಳು ಎಲ್ಲ ಕಡೆ ಚೆಲ್ಲುವರಿದಿವೆ. ಅಲ್ಲಿನ ಅವಶೇಷಗಳಲ್ಲಿ ಹಿಂದೂ ಸಂಬಂಧಿ ಅಲ್ಲದೆ, ಬೌದ್ಧ ಮೂರ್ತಿಗಳೂ ಇತರ ಅವಶೇಷಗಳೂ ಮುಸ್ಲಿಮರ

ನಾಣ್ಯಗಳೂ ದೊರಕಿವೆ. ೧೧ – ೧೩ನೇ ಶತಮಾನಗಳ ಮಧ್ಯಕ್ಕೆ ಸೇರುವ ಐವತ್ತೆರಡು "ಗಂಡ"ಗಳಲ್ಲಿ (೧ ಗಂಡ = ೪ ಕೊಳ) ಬಹುತೇಕ ಕೊಳಗಳು ಮಾಯವಾಗಿವೆ ಅಥವಾ ಮಣ್ಣಿನಿಂದ ಮುಚ್ಚಿ ಹೋಗಲಿವೆ.

ಹರಿಹರಪುರದ ದಕ್ಷಿಣಕ್ಕೆ ಕಲಾತ್ಮಕ ಕೆತ್ತನೆಯ ಒಂದು ದೊಡ್ಡ ಬಂಡೆಯನ್ನು "ತಿಜೋರಿ ಬಕಸ್" (Box of Treasure) ಎಂದು ಕರೆಯುತ್ತಾರೆ. ಅದರ ಕೆಳಗೆ ಅಪಾರ ಐಶ್ವರ್ಯವಿತ್ತೆಂದು ಜನರ ನಂಬಿಕೆ. ಅಮೃತಗಂಜ್ ಹಳ್ಳಿಯ ಸಮೀಪದ ಖಜಹನಿ ಊರಲ್ಲಿ (=ಖಜಾನೆ) ರಾಜರು ತಮ್ಮ ಸಂಪತ್ತನ್ನು ಇಡುತ್ತಿದ್ದರೆಂದು ನಂಬಲಾಗಿದೆ. ಅಲ್ಲಿ ಅಗೆಯುವಾಗ ಕೆಲವರಿಗೆ ಮಣಗಟ್ಟಲೆ ಚಿನ್ನ ಸಿಕ್ಕಿದೆ. ಆ ಪ್ರದೇಶದ ಹಲವು ಸುಂದರ ಮೂರ್ತಿಗಳನ್ನು ವಿದೇಶಗಳಿಗೆ ಒಯ್ಯಲಾಗಿದೆ. ಕೆಲವನ್ನು ಕಾಠಮಾಂಡೊದ ರಾಷ್ಟ್ರೀಯ ಸಂಗ್ರಹಾಲಯದಲ್ಲಿ ಇಡಲಾಗಿದೆ.[17]

ಇಲ್ಲಿಯ ಹಲವು ಸುಂದರ ಶಿಲ್ಪಗಳನ್ನು ರೂಪಿಸಿದವರು ದಕ್ಷಿಣ ಭಾರತದ (ಕರ್ನಾಟಕದ) ಶಿಲ್ಪಿಗಳೆಂದು ವಿದ್ವಾಂಸರು ಭಾವಿಸಿದ್ದಾರೆ.[18] ಆ ಪ್ರದೇಶದಲ್ಲಿ "Gadhimai" ಹೆಸರಿನ ಅತ್ಯಂತ ಪ್ರಸಿದ್ಧ ಸ್ತ್ರೀ ದೇವತಾ ಕೇಂದ್ರ ಅಥವಾ ಶಕ್ತಿಪೀಠವಿದೆ.

ಸುಮಾರು ನಲವತ್ತು ಚದರ ಕಿಲೋಮೀಟರ್ ವ್ಯಾಪ್ತಿಯುಳ್ಳ ಸಿಮ್ರೌನ್‌ಗಡ್ ಪ್ರಾಚೀನ ನಿವೇಶನವು ತನ್ನ ಭವ್ಯ ಪರಂಪರೆಯನ್ನು ಸಾರುವ ಅವಶೇಷಗಳಿಂದ ತುಂಬಿದೆ; ಅದು ನಮಗೆ ಸಹಜವಾಗಿಯೇ "ಹಂಪಿ"ಯನ್ನು ನೆನಪಿಸುತ್ತದೆ. ಸಿಮರೌನ್‌ಗಡವನ್ನು "ನೇಪಾಳದ ಹಂಪಿ"ಯೆಂದು ಕರೆಯಬಹುದು. ಎರಡೂ ಶ್ರೇಷ್ಠ ಸಂಸ್ಕೃತಿಗಳನ್ನು ಬೆಳಸಿದ ಕೇಂದ್ರಗಳು, ಎರಡನ್ನೂ ಆಳಿದವರು ಕರ್ನಾಟರೇ – ಸಿಮ್ರೌನ್‌ಗಡದ ದೊರೆಗಳು "ಕರ್ನಾಟ"ರೆಂದೇ ಪ್ರಸಿದ್ಧ; ಹಂಪಿಯ ವಿಜಯನಗರ ಸಾಮ್ರಾಜ್ಯದ ದೊರೆಗಳಂತೂ ತಮ್ಮನ್ನು "ಕರ್ನಾಟಕ ರಾಜ್ಯ ರಮಾ ರಮಣ"ರೆಂದೇ ಕರೆದುಕೊಂಡರು. ಎರಡನ್ನೂ ಹಾಳು ಮಾಡಿದವರು ಮುಸ್ಲಿಮರು; ಎರಡೂ ಪ್ರದೇಶಗಳಲ್ಲಿ ಹಿಂದೂಗಳ ಬರ್ಬರ ಹತ್ಯೆ ನಡೆಸಿದವರು ಅವರು. ಹಂಪಿಯ ಪ್ರಾಚೀನ ನಿವೇಶನವು ಸುಮಾರು ನೂರು ಚದರ ಕಿಲೋಮೀಟರ್ ವ್ಯಾಪ್ತಿಯುಳ್ಳದ್ದು. ಎರಡಕ್ಕೂ ಇರುವ ದಟ್ಟ ಹೋಲಿಕೆ ಎದ್ದು ಕಾಣುತ್ತದೆ. ಹಂಪಿಗಿಂತ ಸಿಮರೌನ್‌ಗಡವು ಹೆಚ್ಚು ಹಾಳಾಗಿದೆಯೆಂಬ ಮಾತು ನಿಜ. ಸಿಮರೌನ್‌ಗಡದ ಮೂರ್ತಿ ಶಿಲ್ಪವು ಹಂಪಿಯ ಮೂರ್ತಿ ಶಿಲ್ಪಕ್ಕಿಂತ ಸುಂದರ.

ಹರಿಸಿಂಹದೇವನ ಕಾಲದಲ್ಲಿ ಮಿಥಿಲೆಯನ್ನು ಹೊರತುಪಡಿಸಿ ಇಡೀ ಉತ್ತರ ಭಾರತ ಮುಸ್ಲಿಮ್ ದೊರೆಗಳ ವಶವಾಗಿತ್ತು. ಹೀಗಾಗಿ ಅವನನ್ನು "ಒಂದು ರೀತಿಯಲ್ಲಿ ಉತ್ತರ ಭಾರತದ ಕೊನೆಯ ದೊಡ್ಡ ಹಿಂದೂ ದೊರೆ" ("In a way, he was the last great Hindu King of North India") ಎಂದು ಬಣ್ಣಿಸಲಾಗಿದೆ.[19] ಸಿಮ್ರೌನ್‌ಗಡದ ಅವಶೇಷಗಳು ಹಿಂದೂ ಮುಸ್ಲಿಮ್ ಘರ್ಷಣೆಗಳ ಸಂಕೇತವೂ ಹೌದು. "….the ruins over ther (are) the living tales of five centuries of incessant struggle between the Muslim bigotry and the Hindu retaliations."[20]

ಹರಿಸಿಂಹದೇವನನ್ನು "ಅತಿದೊಡ್ಡ ಸಮಾಜ ಸುಧಾರಕ" ಎಂದು ಕರೆದಿದ್ದಾರೆ.[21] ಮಿಥಿಲೆಯ ಸಮಾಜದ ಕಟ್ಟಳೆಗಳನ್ನು ರೂಪಿಸಿದವನು ಅವನು. "ಕುಲೀನತಾ"[22] ವ್ಯವಸ್ಥೆಯನ್ನು ಅವನು ರೂಢಗೊಳಿಸಿದ್ದು ಅದು ಇಂದಿಗೂ ಬಿಹಾರದಲ್ಲಿ ಜಾರಿಯಲ್ಲಿದೆ. ಇಂದಿಗೂ ಬಿಹಾರದ ಬ್ರಾಹ್ಮಣರು, ಕಾಯಸ್ಥರು "ವಂಶ ವೃಕ್ಷ"ಗಳನ್ನು ಕಾಪಾಡಿಕೊಂಡು ಬರುತ್ತಾರೆ. ನೇಪಾಳದಲ್ಲೂ ಅಷ್ಟೇ. (ಚಿತ್ರ ೪)

ಹರಿಸಿಂಹದೇವನ ಕಾಲದಲ್ಲಿ ಮೈಥಿಲೀ ಬ್ರಾಹ್ಮಣರನ್ನು ಶ್ರೋತ್ರಿಯ, ಜೋಗ್ಯ, ಪಂಜಿಬದ್ಧ ಮತ್ತು ಜೈಬರ್ ಎಂದು ನಾಲ್ಕು ವರ್ಗೀಕರಣ ಮಾಡಲಾಯ್ತು. (ಇದಕ್ಕೆ 'ನಾಗರ್' ಎಂಬುದನ್ನೂ ಸೇರಿಸುತ್ತಾರೆ.) ಹತ್ತೊಂಬತ್ತನೇ ಶತಮಾನದವರೆಗೆ ಇವರಲ್ಲಿ ಕೆಲವರು ನಲವತ್ತು ಐವತ್ತು ಮದುವೆ ಮಾಡಿಕೊಳ್ಳಬಹುದಿತ್ತು. ಈ ಮೈಥಿಲಿ ಬ್ರಾಹ್ಮಣರು, ಅದರಲ್ಲೂ ಎಲ್ಲರಿಗಿಂತ ಶ್ರೇಷ್ಠರೆಂದು ಭಾವಿಸುವ ಶ್ರೋತ್ರಿಯ ಬ್ರಾಹ್ಮಣರು ತಾವು ಮೂಲತಃ ಕರ್ನಾಟಕದವರೆಂದು ಇಂದಿಗೂ ಹೇಳಿಕೊಳ್ಳಲು ಹೆಮ್ಮೆ ಪಡುತ್ತಾರೆ. ನಾನು ಕಾಠಮಾಂಡೊದಲ್ಲಿ ಭೇಟಿ ಮಾಡಿದ ಮಿಥಿಲೇಶ ಕುಮಾರ ಝಾ ಎಂಬುವವರು ಹೇಳುವ ಪ್ರಕಾರ, ಕರ್ನಾಟಕದಲ್ಲಿ ಅವರು ಪ್ರತ್ಯಕ್ಷ ಕಂಡ ಬ್ರಾಹ್ಮಣರ ಉಪನಯನ ಸಂಸ್ಕಾರದ ವಿಧಿಗಳಿಗೂ ಬಿಹಾರದ ಮೈಥಿಲಿ ಬ್ರಾಹ್ಮಣರ ಉಪನಯನ ಸಂಸ್ಕಾರದ ವಿಧಿಗಳಿಗೂ ಬಹು ಹತ್ತಿರದ ಹೋಲಿಕೆಗಳಿವೆ. ಬ್ರಾಹ್ಮಣರಂತೆಯೇ 'ಕಾಯಸ್ಥ'ರಲ್ಲೂ[23] ನಾಲ್ಕು ವರ್ಗಗಳನ್ನು ಏರ್ಪಡಿಸಲಾಯ್ತು.

೧. ಒಂದನೇ ವರ್ಗ – ನಾನ್ಯದೇವನ ಜೊತೆ ಆರಂಭದಲ್ಲೇ ಕರ್ನಾಟಕದಿಂದ ಬಂದ ಶ್ರೀಧರದಾಸನೂ ಸೇರಿದಂತೆ ಹನ್ನೆರಡು ಜನ ಕಾಯಸ್ಥರು;

೨. ಎರಡನೇ ವರ್ಗ – ಮಿಥಿಲೆಯಲ್ಲಿ "ಕರ್ನಾಟ" ವಂಶ ಸ್ಥಾಪನೆಗೊಂಡ ಮೇಲೆ ಕರ್ನಾಟಕದಿಂದ ಕರೆಯಿಸಿಕೊಂಡ ಇಪ್ಪತ್ತು ಕುಟುಂಬಗಳು;

೩. ಮೂರನೇ ವರ್ಗ – ಆಮೇಲೆ ಮಿಥಿಲೆಗೆ ಬಂದ ಮೂವತ್ತು ಕುಟುಂಬಗಳು;

೪. ಕರ್ನಾಟ ವಂಶದವರ ಕಾಲದಲ್ಲಿ ಕೊನೆಯದಾಗಿ ಬಂದವರು. ಶ್ರೀಧರದಾಸನ ವಂಶಸ್ಥನಾದ ಸೂರ್ಯಕರ ಠಾಕೂರನು "ಪಂಜಿ" ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸಿದವನು. ನಾನ್ಯದೇವನ ಜೊತೆ ಬಂದ ಹನ್ನೆರಡು ಕಾಯಸ್ಥರ ಕುಟುಂಬಗಳು ಹೀಗಿವೆ – ಲಕ್ಷ್ಮೀಶ್ವರ, ಪ್ರಭಾಕರ, ದೇವಿ, [24] ಪುಣ್ಯಕರ ದೇವ, ಶ್ರೀಕರ, ಶ್ಯಾಮ, ಸಲಖನ ದೇವ, ಶ್ರೀಪತಿ (ಶ್ರೀಧರ), ಶ್ರೀವಾಮ, ಹರಿಹರ, ರತಿಕರ ಮತ್ತು ರತ್ನದೇವ. ಇವರಲ್ಲಿ ಕೊನೆಯವನಾದ ರತ್ನದೇವನೇ ಮಿಥಿಲೆಯ 'ಕರ್ಣ'[25] ಕಾಯಸ್ಥರ ಮೂಲಪುರುಷ.

ಹರಿಸಿಂಹನ ಕಾಲದಲ್ಲಿ 'ಸ್ಮೃತಿ' ಗ್ರಂಥಗಳು ರಚಿತವಾದುವು. ಅವುಗಳಲ್ಲಿ ಆಯಾ ಜಾತಿಯ ಜನರು ತಮಗೆ ವಿಧಿಸಿರುವ ಕಟ್ಟುಪಾಡುಗಳಿಗೆ ಬದ್ಧರಾಗಿರಲು ಸೂಚಿಸಲಾಗಿದೆ. ಆಧುನಿಕ ಪೂರ್ವ ಭಾರತದ ಸಂಸ್ಕೃತದ ವಿದ್ವತ್ತೆಂದರೆ ಮೈಥಿಲಿ ಬ್ರಾಹ್ಮಣರ ವಿದ್ವತ್ತೆಂದೇ ಜನಜನಿತವಾಗಿದ್ದಿರಲು ಕಾರಣ ಕರ್ನಾಟಕದ ದೊರೆಗಳು ಮತ್ತು ಅವರ ಜೊತೆ ಮಿಥಿಲೆಗೆ ಹೋದ ಕರ್ನಾಟಕದ ಬ್ರಾಹ್ಮಣರು. ಕರ್ನಾಟ ದೊರೆಗಳ ಕಾಲದಲ್ಲಿ ಮೈಥಿಲಿ ಸಾಹಿತ್ಯವೂ ಅರಳಿತು.

ನಾನ್ಯದೇವನ ಭರತಭಾಷ್ಯದ ವಿಷಯ ನೋಡಿದ್ದೇವೆ. ಹರಿಸಿಂಹದೇವನ ಕಾಲದ ಮಿಥಿಲೆಯ ವಿದ್ವಾಂಸ ಜ್ಯೋತಿರೀಶ್ವ ಠಾಕೂರನ 'ವರ್ಣರತ್ನಾಕರ'ದಲ್ಲಿ ಹಲವು ರಾಗಗಳ ಹೆಸರಿದ್ದು ಅವುಗಳಲ್ಲಿ 'ಕರ್ನಾಟ' ಎಂಬುದೂ ಒಂದು. ಅವನ ಕಾಲದಲ್ಲಿ ರಚಿತವಾದ ಗೋವಿಂದ ಠಾಕೂರನ "ಗೋವಿಂದ ಮಾನಸೋಲ್ಲಾಸ", ಅವನ ತಮ್ಮ ಚಂದ್ರೇಶ್ವರ ಠಾಕೂರನ "ಶೈವಮಾನಸೋಲ್ಲಾಸ"ಗಳು ಆರನೇ ವಿಕ್ರಮಾದಿತ್ಯ ಮಗ ಮೂರನೆಯ ಸೋಮೇಶ್ವರನ "ಮಾನಸೋಲ್ಲಾಸ" (ಅಥವಾ ಅಭಿಲಷಿತಾರ್ಥ ಚಿಂತಾಮಣಿ) ಎಂಬ ಕೃತಿಯನ್ನು ಮಾದರಿಯಾಗಿ ಹೊಂದಿರುವುದು ಸ್ಪಷ್ಟ. ಅವನ ಕಾಲದಲ್ಲಿ ವಿದ್ಯಾರ್ಥಿಗಳಿಗೆ "ಶಲಾಕಾ ಪರೀಕ್ಷಾ" ಎಂಬ ಹೆಸರಿನ ಪರೀಕ್ಷೆ ಇತ್ತು; ಆ ಪರೀಕ್ಷೆಯಲ್ಲಿ ಯಶಸ್ವಿಯಾದರೆ ಮಾತ್ರ ವಿದ್ಯಾರ್ಥಿಯನ್ನು ಒಬ್ಬ ತಜ್ಞನೆಂದು ಭಾವಿಸಲಾಗುತ್ತಿತ್ತು. ಒಂದು ಕೃತಿಯ ಯಾವುದೇ ಪುಟದಲ್ಲಿ ವಿದ್ವಾಂಸರು ಕಡ್ಡಿ ಇಟ್ಟು ತೋರಿಸಿದರೆ ಆ ಪುಟದಲ್ಲಿರುವುದನ್ನು ಆ ವಿದ್ಯಾರ್ಥಿ ಓದಿ ವಿವರಿಸುವುದೇ "ಶಲಾಕಾ ಪರೀಕ್ಷಾ". ಹರಿಸಿಂಹದೇವನು ಜನಗಳಿಗಾಗಿ ಹಲವು ದೇವಾಲಯಗಳನ್ನು ಕಟ್ಟಿಸಿ ಕೆರೆಗಳನ್ನು ಅಗಳಿಸಿದನು. ಅವನ ಜೊತೆ ಸ್ವತಂತ್ರ ಹಿಂದೂ ರಾಜ್ಯದ ಕೊನೆಯ ಗುರುತು ಭಾರತದಿಂದ ಮಾಯವಾಯಿತು. ("…With his departure the last semblance of independent Hindu kingdom went out of existence" – Sinha).

ಆಕಸ್ಮಿಕವಾದರೂ ತೀರ ಸ್ವಾರಸ್ಯದ ಸಂಗತಿಯಿದು : ಕ್ರಿ.ಶ. ೧೩೨೪ರಲ್ಲಿ ಉತ್ತರ ಭಾರತದಲ್ಲಿ ಹಿಂದೂ ರಾಜ್ಯವನ್ನು ಸಂರಕ್ಷಿಸಿಕೊಳ್ಳಲು "ಕರ್ನಾಟ" ರಾಜರು ವಿಫಲರಾದರೂ, ಕ್ರಿ.ಶ. ೧೩೩೬ರಲ್ಲಿ ದಕ್ಷಿಣ ಭಾರತದಲ್ಲಿ ಮುಸ್ಲಿಮರಿಂದ ಹಿಂದೂ ಸಂಸ್ಕೃತಿಯು ವಿನಾಶಗೊಳ್ಳುವುದನ್ನು ತಪ್ಪಿಸಲು, ಸನಾತನ ಸಂಸ್ಕೃತಿಯನ್ನು ರಕ್ಷಿಸಲು ಹಂಪಿಯಲ್ಲಿ ವಿಜಯನಗರ ಸಾಮ್ರಾಜ್ಯವು ಆರಂಭವಾಯಿತು. ಅದರ ಹಿನ್ನೆಲೆ ಸ್ಥೂಲವಾಗಿ ಹೀಗಿದೆ. ಅಲ್ಲಾವುದ್ದೀನ್ ಖಿಲ್ಜಿಯು ದೇವಗಿರಿಯ ಮೇಲೆ ದಾಳಿ ಮಾಡಿದ್ದು ೧೨೯೬ರಲ್ಲಿ. ಮಲ್ಲಿಕ್ ಕಾಫರನು ತನ್ನ ಸೈನ್ಯ ಸಮೇತ ದಕ್ಷಿಣ ಭಾರತದ ಮೇಲೆ ದಾಳಿ ಮಾಡಿ, ಸೇಉಣರ (ಯಾದವರ) ರಾಜಧಾನಿ ದೇವಗಿರಿಯನ್ನು ಕ್ರಿ.ಶ. ೧೩೧೧ರಲ್ಲಿ ಲೂಟಿ ಮಾಡಿ ಅದನ್ನು ನಾಶಪಡಿಸಿದನು. ಆ ಸೈನ್ಯವು ಇನ್ನೂ ದಕ್ಷಿಣಕ್ಕೆ ಬಂದು ಹೊಯ್ಸಳರ ರಾಜಧಾನಿ ದೋರ ಸಮುದ್ರದ ಮೇಲೆ ದಾಳಿ ಮಾಡಿ ಅದನ್ನು ನಾಶಪಡಿಸಿತು. ಹೊಯ್ಸಳರ ದೊರೆ ಮೂರನೆಯ ಬಲ್ಲಾಳನು ಸೋಲನ್ನು ಒಪ್ಪಿಕೊಂಡು ತನ್ನ ಸೈನ್ಯ ಸಮೇತ ಮುಸ್ಲಿಮ್ ಸೈನ್ಯ ಸಹಾಯಾರ್ಥ ತಮಿಳುನಾಡಿನ ಮದುರೆಗೆ ಹೋದನು. ಮದುರೆಯು ಮುಸ್ಲಿಮರ ವಶವಾಯಿತು. ೧೩೧೮ರಲ್ಲಿ ಸೇಉಣ ವಂಶವು ಕೊನೆಗೊಂಡಿತು. ಸೇಉಣರ ಅಧೀನ ರಾಜನಾಗಿದ್ದ ಹಂಪಿ

ಪಕ್ಕದ ಕಂಪಿಲಿರಾಜನು ಬಲ್ಲಾಳನ ವಿರುದ್ಧ ನಿಂತನು. ೧೩೨೭ರಲ್ಲಿ ಮೊಹಮ್ಮದ್ ಬಿನ್ ತುಘಲಕನ ದಂಡಯಾತ್ರೆಯು ಮತ್ತೆ ದೋರ ಸಮುದ್ರದ ಮೇಲೆ ನಡೆಯಿತು. ಬಲ್ಲಾಳನು ಮುಸ್ಲಿಮರಿಗೆ ಅಧೀನವಾಗಿದ್ದುದನ್ನು ತಿರಸ್ಕರಿಸಿ ಸ್ವತಂತ್ರನಾಗಲು ಆಗಲೇ ಯತ್ನಿಸಿದ್ದನು. ದೋರ ಸಮುದ್ರವನ್ನು ಎರಡನೆಯ ಬಾರಿಗೆ ಲೂಟಿ ಮಾಡಲಾಯ್ತು. ಬಲ್ಲಾಳನು ತಮಿಳುನಾಡಿಗೆ ಹೋಗಿ ತಿರುವಣ್ಣಾಮಲೈ ಸೇರಿ ಅಲ್ಲಿಂದ ದೆಹಲಿ ಸುಲ್ತಾನನನ್ನು ಎದುರಿಸಲು ಯತ್ನಿಸಿದನು. ದೇವಗಿರಿ ಸೇಉಣರು, ಓರಂಗಲ್ಲಿನ ಕಾಕತೀಯರು, ಕಂಪಿಲಿ ದೊರೆಗಳು, ಮದುರೆಯ ಪಾಂಡ್ಯರೆಲ್ಲ ಮುಸ್ಲಿಮ್ ಧಾಳಿಗೆ ಸೋತರು. ಹಿಂದೂ ದೇವಾಲಯ, ಧರ್ಮ ಗ್ರಂಥಗಳು ಬಹುಸಂಖ್ಯೆಯಲ್ಲಿ ಹಾಳಾದವು. ಲೆಕ್ಕವಿಲ್ಲದಷ್ಟು ಮತಾಂತರಗಳಾದವು. ಬಲ್ಲಾಳ ಒಬ್ಬನೇ 'ಹಿಂದೂ' ರಾಜನಾಗಿ ಉಳಿದನು; ಅವನು ಕಟ್ಟಿದ ಹೊಸ ರಾಜಧಾನಿ 'ಹೊಸ ಪಟ್ಟಣ'ವೇ ಮುಂದೆ ವಿಜಯನಗರವೆನ್ನಿಸಿತು. ವಿದ್ಯಾರಣ್ಯರ ಆಶೀರ್ವಾದದಿಂದ ಹಕ್ಕ ಬುಕ್ಕರ ಮೂಲಕ ಕ್ರಿ.ಶ. ೧೩೩೬ರಲ್ಲಿ ಸನಾತನ ಸಂಸ್ಕೃತಿಯ ಸಂರಕ್ಷಣೆಗಾಗಿ ಹಂಪಿಯಲ್ಲಿ ವಿಜಯನಗರ ಸಾಮ್ರಾಜ್ಯ ಉದಯವಾಗದಿದ್ದಲ್ಲಿ ದಕ್ಷಿಣ ಭಾರತದಿಂದ ಹಿಂದೂ ಸಂಸ್ಕೃತಿ ನಿರ್ನಾಮವಾಗುತ್ತಿತ್ತು.

ಹರಿಸಿಂಹದೇವನು ಕ್ರಿ.ಶ. ೧೩೨೪ರಲ್ಲಿ ದಿಲ್ಲಿ ಸುಲ್ತಾನನಿಗೆ ಸೋತು ಮಧ್ಯ ನೇಪಾಳಕ್ಕೆ ಹೋಗಿ ಅಲ್ಲಿ ಭತಗಾಂವ್‌ನಲ್ಲಿ (ಭದಗಾಂವ್; ಈಗಿನ ಭಕ್ತಪುರ) ನೆಲೆಸಿ ಅಲ್ಲಿಂದ ಆಳಲು ಆರಂಭಿಸಿದನು. ಅವನ ಜೊತೆ ಸಿಮರೌನ್‌ಗಡದಿಂದ ಬಂದ ದೇವಭಾಜು, ಭಂಡೇಲ್, ಆಚಾರ್ಯ, ವೈದ್ಯ, ಧೋಬಿ, ಖರ್ಗೆ(ಡ್ಗೆ) ಜಾತಿಗಳ ಜನರು ಈಗಲೂ ಅಲ್ಲಿದ್ದಾರೆ. ಅವನು ತನ್ನ ರಾಜಧಾನಿ ಶತ್ರುಗಳಿಗೆ ಪತನವಾದಾಗ, ಅಲ್ಲಿಂದ ತಲೇಜು ಭವಾನಿ ದೇವತೆಯ ವಿಗ್ರಹವನ್ನು ತಂದು ಭಕ್ತಪುರದಲ್ಲಿ ಸ್ಥಾಪಿಸಿದನು. ಈ ತಲೇಜು ಭವಾನಿ ಯಾರೂ ಅಲ್ಲ, ಈಗಿನ ಮಹಾರಾಷ್ಟ್ರದ ತುಳಜಾ ಭವಾನಿ. ವಾಸ್ತವವಾಗಿ ತುಳಜಾ ಭವಾನಿ ದೇವಾಲಯವಿರುವ ತುಳಜಾಪುರವು (ಒಸ್ಮಾನಾಬಾದ್ ಜಿಲ್ಲೆ) ಹಿಂದೊಮ್ಮೆ ಅಪ್ಪಟ ಕನ್ನಡ ಪ್ರದೇಶವಾಗಿದ್ದು, ಆ ದೇವಿ ಕರ್ನಾಟಕ ಚಾಲುಕ್ಯರ ಕಾಲದಲ್ಲೂ ಪ್ರಸಿದ್ಧಳಾಗಿದ್ದು ನಾನ್ಯದೇವನ ಮನೆದೈವವಾಗಿದ್ದಳೆಂದು ತೋರುತ್ತದೆ. (ತುಳಜಾ ಬಗ್ಗೆ ಪು. ೪೩ - ೫೦ ನೋಡಿ). ಆ ಕಾರಣದಿಂದಲೇ ನಾನ್ಯದೇವನು ಅವಳ ವಿಗ್ರಹವನ್ನು ಸಿಮರೌನ್‌ಗಡದಲ್ಲಿ ಸ್ಥಾಪಿಸಿ ದೇವಾಲಯ ಕಟ್ಟಿಸಿ ಅವಳ ಆರಾಧನೆ ಮಾಡುತ್ತಿದ್ದನು. ಈಗಲೂ ಹರಿಸಿಂಹದೇವನು ಭಕ್ತಪುರದಲ್ಲಿ ಕಟ್ಟಿಸಿದ ಮೂಲ ತುಳಜಾ ಭವಾನಿಯ ಭವ್ಯ ದೇವಾಲಯವಿದ್ದು, ಅದರ ಗರ್ಭಗುಡಿಯ ಬಾಗಿಲು ಸದಾ ಮುಚ್ಚಿರುತ್ತದೆ. ವರ್ಷಕ್ಕೊಮ್ಮೆ ದಸರಾ ಸಮಯದಲ್ಲಿ ಒಂದು ದಿನ ಅಲ್ಲಿ ತಲೇಜು ದೇವಿಯ ಪೂಜೆ ಮಾಡಲಾಗುತ್ತದೆ. ಅಲ್ಲಿ ದೇವಿಯ ವಿಗ್ರಹವಿಲ್ಲದಿದ್ದರೂ ಸಾಂಕೇತಿಕವಾಗಿ ಕಳಶ ಇಡುತ್ತಾರೆ. ಆ ಒಂದು ದಿನ ಮಾತ್ರ ಕೇವಲ ಹಿಂದೂಗಳಿಗೆ ಮಾತ್ರ ಪ್ರವೇಶ ಮತ್ತು ಅಂದು ಮಾತ್ರ ಪೂಜೆ. ಆ ದೇವಾಲಯದ ಗರ್ಭಗುಡಿ ವರ್ಷವಿಡೀ ಮುಚ್ಚಿರುವುದರಿಂದ ಆ ದೇವತೆಯನ್ನು 'ನಿಗೂಢ ದೇವತೆ'ಯೆಂದೇ (Mysterious Goddess) ಆಧುನಿಕ ಬರಹಗಳಲ್ಲಿ ವರ್ಣಿಸಲಾಗುತ್ತದೆ. ಭಕ್ತಪುರದ ಅರಮನೆ ಆವರಣದ ತಲೇಜು ಭವಾನಿ ದೇವಾಲಯದ ಹಿಂಭಾಗದಲ್ಲಿ ಕಾಷ್ಠಶಿಲ್ಪಗಳ ಪಟ್ಟಿಯಿದ್ದು ಅದರಲ್ಲಿ ನಾನ್ಯದೇವನಿಂದ ಹರಿಸಿಂಹದೇವನವರೆಗಿನ ಎಲ್ಲ ರಾಜರ ಚಿಕ್ಕ ಮೂರ್ತಿಗಳನ್ನು ಕೆತ್ತಿ, ಪ್ರತಿ ಶಿಲ್ಪದ ಕೆಳಗೆ ಆಯಾ ರಾಜರ ಹೆಸರನ್ನೂ ತೋರಿಸಿರುವುದು ಸ್ವಾರಸ್ಯವಾಗಿದೆ.[26] ಕಾಠಮಾಂಡೊ, ಪಾಟಣ್ ನಗರಗಳಲ್ಲಿಯೂ ಅರಮನೆಗಳ ಆವರಣದಲ್ಲಿ ತಲೇಜು ಭವಾನಿ ದೇವಾಲಯಗಳಿವೆ. ತುಳಜಾ ಭವಾನಿಯು ಮಹಾರಾಷ್ಟ್ರದ ಶಿವಾಜಿಯ ಆಪ್ತ ದೈವ, ಸ್ಫೂರ್ತಿದೇವತೆಯೆಂಬುದು ಪ್ರಸಿದ್ಧ.

ಹರಿಸಿಂಹದೇವನ ಬಳಿಕ ನೇಪಾಳವನ್ನು ಅವನ ವಂಶಸ್ಥರು ಬೇರೆ ಬೇರೆಡೆ ಇನ್ನೂರು ವರ್ಷ ಆಳಿದರು. ಅವನ ವಂಶಸ್ಥನಾಗಿದ್ದ ಮತಿ ಸಿಂಹದೇವನನ್ನು ನೇಪಾಳದ ಅಧಿಕೃತ ದೊರೆಯೆಂದು ಚೀನೀ ಚಕ್ರವರ್ತಿ ಮಾನ್ಯ ಮಾಡಿದ್ದನು. ಕೊನೆಯವನಾದ ಶಾಮಸಿಂಹ ದೇವನ ಬಳಿಕ ನೇಪಾಳವನ್ನು ಆಳಿದವರು ಮಲ್ಲರು: ಇವರನ್ನು "ಕರ್ನಾಟ ಮಲ್ಲ"ರೆಂದೇ ಕರೆದರೂ ಮಲ್ಲ ದೊರೆಗಳು ಮೂಲತಃ ನೇಪಾಳಿಗಳು; ನೆವಾರಿ ಪಂಗಡದವರು. ಕರ್ನಾಟ ವಂಶದ ದೊರೆಗಳು ಆಡಳಿತದಲ್ಲಿ ಬ್ರಾಹ್ಮಣರಿಗೆ ಮತ್ತು ಕಾಯಸ್ಥರಿಗೆ ಹೆಚ್ಚಿನ ಮಹತ್ವವನ್ನು ನೀಡಿದ್ದರೂ ಒಟ್ಟು ರಾಜ್ಯದ, ನಗರ ಹಳ್ಳಿ ಎಂಬ ಭೇದವಿಲ್ಲದೆ ಮೇಲ್ಜಾತಿ ಕೀಳ್ಜಾತಿ ಎಂಬ ಭೇದವಿಲ್ಲದೆ ಎಲ್ಲರ ಹಿತವನ್ನೂ ರಕ್ಷಿಸುವ ಹೊಣೆ ಹೊತ್ತಿದ್ದರು.

ಉತ್ತರ ಭಾರತವು ೧೨ - ೧೩ನೇ ಶತಮಾನಗಳಲ್ಲಿ ಮುಸ್ಲಿಮರ ತೀವ್ರ ದಾಳಿಗೆ ಒಳಗಾಗಿ ಹಿಂದೂ ದೇವಾಲಯಗಳು, ಧರ್ಮ ಗ್ರಂಥಗಳು ಬಹುಸಂಖ್ಯೆಯಲ್ಲಿ ನಾಶವಾದವು; ಮತಾಂತರಕ್ಕೆ ಒಪ್ಪದ ಬಹುಸಂಖ್ಯೆಯ ಹಿಂದೂಗಳು ಹತರಾದರು. ಇದರಿಂದಾಗಿ

ಹಿಂದೂಗಳೂ ಬೌದ್ಧರೂ ತಮ್ಮನ್ನು ತಮ್ಮ ಧರ್ಮವನ್ನು ರಕ್ಷಿಸಿಕೊಳ್ಳಲು ಭಾರತದಿಂದ ದುರ್ಗಮ ಪ್ರದೇಶವಾದ ನೇಪಾಳಕ್ಕೆ ಓಡಿಹೋಗಿ ರಕ್ಷಣೆ ಪಡೆದರು. ಅವರ ಜೊತೆ ಅಮೂಲ್ಯವಾದ ಹಿಂದೂ ಬೌದ್ಧ ಧರ್ಮಗ್ರಂಥಗಳು ನೇಪಾಳವನ್ನು ಸೇರಿದವು. ಕಾಠಮಾಂಡೊದ National Archieves ಸಂಗ್ರಹದಲ್ಲಿ ಅತ್ಯಮೂಲ್ಯ ಅಪೂರ್ವ ಹಸ್ತಪ್ರತಿಗಳು ಸಂಗ್ರಹಗೊಂಡಿರುವುದನ್ನು ಕಾಣಬಹುದು. 'ಹಿಂದೂ ದೊರೆ' ಹರಿಸಿಂಹದೇವನು ನೇಪಾಳಕ್ಕೆ ಹೋಗಿ ಅಲ್ಲಿಂದ ಆಳಲು ಆರಂಭಿಸಿದ ಮೇಲಂತೂ ಅಲ್ಲಿ ಭಾರತದ ಹಿಂದೂಗಳಿಗೆ ಹೆಚ್ಚಿನ ರಕ್ಷಣೆ ದೊರೆಯಿತು ಎಂಬುದನ್ನು ಹೇಳಬೇಕಾಗಿಲ್ಲ. ಮಲ್ಲವಂಶದ ಪದ್ಮಲ್ಲದೇವಿ ಮತ್ತು ದೇವಲ ದೇವಿಯರ[27] ಕಾಲದಲ್ಲಿ (೧೪ನೇ ಶ.) ಬಂಗಾಳದ ಸುಲ್ತಾನ್ ಷಂಸುದ್ದೀನ್ ನೇತೃತ್ವದಲ್ಲಿ ಮುಸ್ಲಿಮ್ ಸೇನೆ ನೇಪಾಲಕ್ಕೆ ನುಗ್ಗಿ ದಾಳಿ ಮಾಡಿದಾಗ ಪಾಟಣ್ ನಗರ ಭಸ್ಮೀಕೃತವಾಯಿತು; ಭಕ್ತಪುರದಲ್ಲಿ ಹಲವು ಮನೆಗಳು ಒಂದು ದೇವಾಲಯ ನಾಶವಾದವು. ಜನರು ಧೈರ್ಯದಿಂದ ಎದುರಿಸಿದ್ದರಿಂದ ಮುಸ್ಲಿಮ್ ಸೈನ್ಯ ವಾಪಸಾಗಬೇಕಾಯಿತು. ಮುಸ್ಲಿಮರು ಪಶುಪತಿ ಮಹಾದೇವನ ವಿಗ್ರಹವನ್ನು ವಿರೂಪಗೊಳಿಸಿದ್ದು ಅದೇ ಸಂದರ್ಭದಲ್ಲಿಯೇ. ಇಂದಿಗೂ "ವಿಶ್ವದ ಏಕೈಕ ಹಿಂದೂ ರಾಷ್ಟ್ರ" ಎಂದು ನೇಪಾಳ ಹೇಳಿಕೊಳ್ಳುವಲ್ಲಿ ಐತಿಹಾಸಿಕವಾಗಿ "ಕರ್ನಾಟ" ದೊರೆಗಳ ಪಾತ್ರ ನಗಣ್ಯವಾದುದು ಖಂಡಿತ ಅಲ್ಲ.

ಮಿಥಿಲೆಯವರ ಬಗ್ಗೆ ಒಂದು ಸಾಂಪ್ರದಾಯಿಕ ಹೇಳಿಕೆ ಹೀಗಿದೆ –

*ಅಂತಃ ಶಾಕ್ತಾ ಬಹಿಃ ಶೈವಾಃ*
*ಸಭಾಮಧ್ಯೇ ತು ವೈಷ್ಣವಾಃ* ||

ಅಂತರಂಗದಲ್ಲಿ ಶಕ್ತಿ ಪೂಜಕರು (ಶಾಕ್ತರು); ಬಹಿರಂಗದಲ್ಲಿ ಶೈವರು; ಸಭಾ ಮಧ್ಯದಲ್ಲಿ ವೈಷ್ಣವರು. ಕರ್ನಾಟಕದ ದೊರೆಗಳು ಶಾಕ್ತರೂ ಶೈವರೂ ವೈಷ್ಣವರೂ ಏಕಕಾಲಕ್ಕೆ ಆಗಿದ್ದರು ಎಂಬುದರ ದ್ಯೋತಕ ಇದು.

**ಮಲ್ಲರು :**

ಮಲ್ಲ ದೊರೆಗಳು ನೇಪಾಳದಲ್ಲಿ ಮೊದಲಿಂದ ಇದ್ದವರಾದರೂ, ಅವರ ಚರಿತ್ರೆ ಸುಮಾರು ೧೨೦೦ ರಿಂದ ಅರಿಮಲ್ಲ (ಅಥವಾ ಅರಿದೇವ)ನಿಂದ ಆರಂಭವಾಗುತ್ತದೆ. ಅವನ ಮಗ ಅಭಯ ಮಲ್ಲನು (೧೨೩೬ – ೫೫) ಕಲೆ ಸಾಹಿತ್ಯಗಳನ್ನು ಬಹುವಾಗಿ ಪ್ರೋತ್ಸಾಹಿಸಿದನು. ಅವನ ಕಾಲದಲ್ಲಿ ಆದ ಭೂಕಂಪದಿಂದ, ಕ್ಷಾಮ ಡಾಮರಗಳಿಂದ ಜನರು ಸಂತ್ರಸ್ತರಾದಾಗ, ಅವನು ಶಾಂತ್ಯರ್ಥವಾಗಿ ಲಕ್ಷಹೋಮವನ್ನು ನಡೆಯಿಸಿ ಪಶುಪತಿ ಮಹಾದೇವನಿಗೆ 'ಮಹಾಸ್ನಾನ' ಮಾಡಿಸುವ ವ್ಯವಸ್ಥೆಯನ್ನು ಆರಂಭಿಸಿದನು. ಇವನ ಬಳಿಕ ಆಳಿದ ಜಯದೇವ, ಆನಂದದೇವರು ಅನುಕ್ರಮವಾಗಿ ಕಾಠಮಾಂಡೊ ಭಕ್ತಪುರಗಳಲ್ಲಿ ಆಳುತ್ತಿದ್ದರು. ಆನಂದದೇವನ ಕಾಲದಲ್ಲಿ ಪನೌತಿ, ಬನೆಪ, ಧೂಲಿಖೇಲ್ ಇವೇ ಮೊದಲಾದ ಪಟ್ಟಣಗಳು ನಿರ್ಮಾಣವಾದವು. ಜಯಸಿಂಹಮಲ್ಲನು (೧೨೮೧ – ೮೪) ಕುಬ್ಲಾಖಾನನ ಕೋರಿಕೆಯ ಮೇರೆಗೆ ಟಿಬೆಟ್‌ನಲ್ಲಿ ಸ್ತೂಪ ರಚಿಸಲು ಅರ್ನಿಕೋ ಎಂಬ ಕಲಾವಿದನನ್ನು ಕಳುಹಿಸಿದನು. ಕಲಾವಿದ ಅರ್ನಿಕೋನಿಂದಾಗಿ ಪಗೋಡ ಶೈಲಿಯ ವಾಸ್ತುವು ಜನಪ್ರಿಯವಾಯಿತು. ಜಯರುದ್ರಮಲ್ಲನ ಕಾಲದಲ್ಲಿ (೧೩೨೪) ಹರಿಸಿಂಹದೇವನು ಮಿಥಿಲೆಯನ್ನು ಕಳೆದುಕೊಂಡು ನೇಪಾಳಕ್ಕೆ ಭಕ್ತಪುರದಲ್ಲಿ ಬಂದು ನೆಲೆಸಿದನು. ಅಲ್ಲಿ ಆಳುತ್ತಿದ್ದ ಮಲ್ಲ ವಂಶದ ದೊರೆಗಳು ಬಹು ಹಿಂದೆಯೇ ಮಿಥಿಲೆಯ "ಕರ್ನಾಟ" ರಾಜರ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದರು. ಜಯರುದ್ರಮಲ್ಲನ ತಾಯಿ ಪದ್ಮಲ್ಲದೇವಿ, ಹೆಂಡತಿ ದೇವಲ ದೇವಿ. ವಿಧವೆ ದೇವಲ ದೇವಿಯ ಕಾಲದಲ್ಲೇ ಬಂಗಾಳದ ಸುಲ್ತಾನ ಷಂಸುದ್ದೀನನು ೧೩೪೯ರಲ್ಲಿ ಕಾಠಮಾಂಡೊದ ಪಶುಪತಿ ಮತ್ತು ಸ್ವಯಂಭೂ ಬೌದ್ಧ ವಿಹಾರಗಳನ್ನು ಲೂಟಿ ಮಾಡಿದ್ದು. ದೇವಲ ದೇವಿ ತನ್ನ ಮೊಮ್ಮಗಳು ರಾಜಲ್ಲದೇವಿಯನ್ನು (ಈಕೆಯ ಹೆಸರು 'ಬಿಜ್ಜಲದೇವಿ' ಎಂದೂ ದಾಖಲಾಗಿದೆ – ಇದೇ ಸರಿ ಇರಬಹುದು) ಪಶ್ಚಿಮ ನೇಪಾಳದ ಮಲ್ಲ ವಂಶದ ಜಯಸ್ಥಿತಿ ಮಲ್ಲನಿಗೆ ಕೊಟ್ಟು, ಅವನನ್ನು ರಾಜನನ್ನಾಗಿ ಮಾಡಿ ಭಕ್ತಪುರವನ್ನು ಆಳುವಂತೆ ಮಾಡಿದಳು. ರಾಜಲ್ಲದೇವಿಯು "ಕರ್ನಾಟ" ದೊರೆ ಜಗತ್‌ಸಿಂಹನ ಮಗಳು.

ದೇವಲ ದೇವಿಯು “ಕರ್ನಾಟ” ರಾಜ ವಂಶದವಳು ಎಂಬುದು ಅವಳ ಹೆಸರಿನಿಂದಲೇ ಸೂಚಿತವಾಗುತ್ತದೆ. ಅವಳ ಮೊಮ್ಮಗಳು ರಾಜಲ್ಲದೇವಿ; ಭಕ್ತಪುರದಿಂದ ಆಳಿದ ಅತ್ಯಂತ ಪ್ರಖ್ಯಾತ ದೊರೆ ಜಯಸ್ಥಿತಿ ಮಲ್ಲನ (೧೩೫೪ - ೯೫) ಪತ್ನಿ.

ಜಯಸ್ಥಿತಿ ಮಲ್ಲನು ದೇಶದ ಶಾಂತಿಗೆ ಅಡ್ಡಿಮಾಡುತ್ತಿದ್ದ ಮದೋನ್ಮತ್ತ ಸ್ಥಳೀಯ ಮುಖ್ಯರನ್ನು ಸದೆ ಬಡಿದು ಕಾಠಮಾಂಡೊ ಕಣಿವೆಯಲ್ಲಿ ಶಾಂತಿಯನ್ನು ವ್ಯವಸ್ಥಿತ ಆಡಳಿತವನ್ನು ನೆಲೆಗೊಳಿಸಿದನು. ಸಾಂಪ್ರದಾಯಿಕ ಹಿಂದೂ ಚೌಕಟ್ಟಿನಲ್ಲಿ ನೇಪಾಳಿ ಸಮಾಜವನ್ನು ರೂಪಿಸಿದನು. ಜಾತಿ ವ್ಯವಸ್ಥೆ, ಭೂಮಿಯ ಅಳತೆ, ತೂಕಗಳು ಇತ್ಯಾದಿಗಳನ್ನು ಕಾನೂನಿಗೆ ಒಳಪಡಿಸಿದನು. ಹಲವು ದೇವಾಲಯಗಳ ನಿರ್ಮಾಪಕನೂ ಆದನು. ವಿದ್ವಾಂಸರನ್ನು ಪ್ರೋತ್ಸಾಹಿಸಿದ್ದಲ್ಲದೆ, ಸ್ವತಃ ಶೈವನಾಗಿದ್ದರೂ ಹಲವು ಬೌದ್ಧ ಮಂದಿರಗಳಿಗೆ ಉದಾರವಾಗಿ ದತ್ತಿಗಳನ್ನೂ ನೀಡಿದನು.

ಅವನು ತಂದ ಸಾಮಾಜಿಕ ಸುಧಾರಣೆಗಳಲ್ಲಿ ಮುಖ್ಯವಾದವು ಇವು: ಬ್ರಾಹ್ಮಣರನ್ನು ಪಂಚ ಗೌಡ, ಪಂಚ ದ್ರಾವಿಡರೆಂದು ವರ್ಗೀಕರಿಸಿದ್ದು (‘ದ್ರಾವಿಡ’ ಎಂಬುದು ಸಹಜವಾಗಿಯೇ ದಕ್ಷಿಣ ಭಾರತವನ್ನು ನೆನಪಿಸುತ್ತದೆ).

**ಪಂಚ ಗೌಡ**

| | | | | |
|---|---|---|---|---|
| ಸಾರಸ್ವತ್ | ಗೌಡ್ | ಕನೋಜ್ | ಮೈಥಿಲಿ | ಉತ್ಕಲ್ |

**ಪಂಚ ದ್ರಾವಿಡ**

| | | | | |
|---|---|---|---|---|
| ಮಹಾರಾಷ್ಟ್ರ | ತ್ರೈಲಿಂಗ್ (ಆಂಧ್ರ) | ದ್ರಾವಿಡ (ತಮಿಳುನಾಡು) | ಕರ್ನಾಟಕ | ಗೂರ್ಜರ (ಗುಜರಾತ್) |

ನೆವಾರಿ ಸಮಾಜವನ್ನು ಆಚಾರ್ಯ, ವೈದ್ಯ, ಶ್ರೇಷ್ಠ, ದೈವಜ್ಞರೆಂದು ವರ್ಗೀಕರಿಸಿದನು. ಉಳಿದವರನ್ನು ಮೂವತ್ತಾರು ಜಾತಿಗಳನ್ನಾಗಿ ವರ್ಗೀಕರಿಸಿ, ಬೀದಿ ಗುಡಿಸುವವರನ್ನು ಚಪ್ಪಲಿ ಹೊಲೆಯುವವರನ್ನು ಅಸ್ಪೃಶ್ಯರೆಂದು ಘೋಷಿಸಿದನು. ಬೇರೆ ಬೇರೆ ಜಾತಿಯವರು ತಮ್ಮ ಜಾತಿಗೆ ನಿಗದಿಯಾದ ವಸ್ತ್ರವನ್ನುಡಬೇಕು. ಕಟುಕರು ಉದ್ದನೆಯ ತೋಳಿನ ನಿಲುವಂಗಿ ಹಾಕಬೇಕು. ಬೀದಿ ಗುಡಿಸುವವರು ಬರಿಗಾಲು, ಬರಿದಲೆಗಳಲ್ಲಿ ಓಡಾಡಬೇಕು. ಕಿವಿಗೆ ಏನೂ ಧರಿಸಕೂಡದು. ಮೇಲ್ಜಾತಿಯವರಿಗೆ ಅವರು ಗೌರವ ಕೊಡಬೇಕು. ಅವನು ಕಾಠಮಾಂಡೊ ಸಮೀಪದ ಗೋಕರ್ಣದ ಗೋಕರ್ಣೇಶ್ವರ ದೇವಸ್ಥಾನದ ದೈನಂದಿನ ಪೂಜೆಗೆ ಸರಿಯಾದ ವ್ಯವಸ್ಥೆಯನ್ನು ಮಾಡಿದನು. (“ಗೋಕರ್ಣ” ಕ್ಷೇತ್ರವು ಕಾಠಮಾಂಡೊಗೆ ಐದಾರು ಕಿಲೋ ಮೀಟರ್ ದೂರದಲ್ಲಿದೆ; ಮತ್ತು ಆ ಹೆಸರು ಕರ್ನಾಟಕದ ಗೋಕರ್ಣ ಕ್ಷೇತ್ರದ ಅನುಸರಣೆಯೆಂಬ ಅಭಿಪ್ರಾಯವಿದೆ.)

ಮುಂದೆ ಆಳಿದ ಮಲ್ಲ ದೊರೆಗಳಲ್ಲಿ ಯಕ್ಷಮಲ್ಲನು (೧೪೨೮ - ೮೩) ವೈಷ್ಣವನಾಗಿದ್ದರೂ ಅಷ್ಟೇ ಶ್ರದ್ಧೆ ಪಶುಪತಿನಾಥನಲ್ಲಿಯೂ ಇದ್ದಿತು. ಅವನ ಕಾಲದಲ್ಲಿಯೇ ಪಶುಪತಿ ದೇವಾಲಯದ ಅರ್ಚನೆಯು ದಕ್ಷಿಣ ಭಾರತದ (ಕರ್ನಾಟಕದ) “ಭಟ್ಟ ಬ್ರಾಹ್ಮಣ”ರಿಂದಲೇ ನಡೆಯಬೇಕೆಂಬ ಪದ್ಧತಿಯು ಆರಂಭವಾದುದು. ಅವನೇ ಕರ್ನಾಟಕದಿಂದ “ಭಟ್ಟ ಬ್ರಾಹ್ಮಣ”ರನ್ನು ಮೊದಲು ಆಹ್ವಾನಿಸಿ ಕರೆಯಿಸಿಕೊಂಡವನು; ಆ ಪದ್ಧತಿ ಇನ್ನೂ ಈಗಲೂ ಮುಂದುವರಿದಿದೆ[28] (ವಿವರಣೆಗಳಿಗೆ, ಪು. ೩೬ - ೪೨). ಇದಕ್ಕೆ ಕಾರಣ, ನೇಪಾಳದಲ್ಲಿ ಹಿಂದೂ, ಬೌದ್ಧ ದೇವಾಲಯಗಳಲ್ಲಿ ಮದ್ಯ, ಮಾಂಸಗಳನ್ನು ದೇವತೆಗಳಿಗೆ ಅರ್ಪಿಸುವ ವಾಮಾಚಾರ ಪದ್ಧತಿಯು ಪ್ರಭಲವಾಗುತ್ತ ಬಂದುದು. ಕರ್ನಾಟಕದ ಅರ್ಚಕರಿಂದಾಗಿ ಪಶುಪತಿ ದೇವಾಲಯದಲ್ಲಿ ಸಾತ್ವಿಕ ಪೂಜಾ ವಿಧಾನವು ನೆಲೆಗೊಂಡಿತು.[29] ಯಕ್ಷ ಮಲ್ಲನು ಮುಂದೆ ತನ್ನ ರಾಜ್ಯವನ್ನು ನಾಲ್ಕು ಭಾಗಗಳಾಗಿ ಮಾಡಿ (ಭಕ್ತಪುರ, ಕಾಠಮಾಂಡೊ, ಪಾಟಣ್ ಮತ್ತು ಬನೇಪ) ತನ್ನ ನಾಲ್ಕು ಮಕ್ಕಳಿಗೆ ಹಂಚಿಕೊಟ್ಟನು.

ಮುಂದೆ ಭಕ್ತಪುರದಿಂದ ಆಳಿದ ಜಗಜ್ಜ್ಯೋತಿ ಮಲ್ಲನು (೧೬೧೩ - ೩೭) ಅಲ್ಲಿ ಭೈರವ ದೇವಾಲಯ ಕಟ್ಟಿಸಿ "ಅಧಿ ಭೈರವ್ ಜಾತ್ರಾ" ಆರಂಭಿಸಿದನು. (ಚಿತ್ರ ೩೭) ಹರಗೌರಿ ವಿವಾಹ, ಸಂಗೀತಸಾರ ಇತ್ಯಾದಿ ಸಂಸ್ಕೃತ ಕೃತಿಗಳನ್ನೂ ರಚಿಸಿದನು. ಜಿತಮಿತ್ರನು (೧೬೭೩ - ೯೬) ಸಂಸ್ಕೃತದಲ್ಲಿ ಜೈಮಿನಿ ಭಾರತ, ಅಶ್ವಮೇಧ ನಾಟಕ ಬರೆದನು. ಭಕ್ತಾಪುರದ ದರ್ಬಾರ್ ಕಟ್ಟಡ ಇವನ ಕಾಲದ್ದು. ಇವನ ಬಳಿಕ ಬಂದ ಭೂಪತೀಂದ್ರನ ಕಾಲದ್ದು ಐವತ್ತೈದು ಕಿಟಕಿಗಳ ಭಕ್ತಪುರದ ಅರಮನೆ; ಅದೊಂದು ಮರೆಯಲಾರದ ಸ್ಮಾರಕವಾಗಿ ಪರಿಣಮಿಸಿದೆ, ನೇಪಾಳದಲ್ಲಿ.

ಲಲಿತಪುರದಿಂದ (ಪಾಟಣ್) ಆಳಿದ ಸಿದ್ಧ ನರಸಿಂಹ ಮಲ್ಲನು (೧೬೧೮ - ೧೬೯೫) ತನ್ನ ವಂಶ ದೇವತೆ ತಲೇಜು ದೇವಾಲಯವನ್ನು ಅಲ್ಲಿ ಕಟ್ಟಿಸಿದನು. ಯೋಗನರೇಂದ್ರ ಮಲ್ಲನು (೧೬೮೪ - ೧೭೦೫) ಸತ್ತಾಗ ಅವನ ಇಪ್ಪತ್ತೊಂದು ಸತಿಯರು ಸಹಗಮನ ಮಾಡಿದರು.

ಕಾಠಮಾಂಡೊದಿಂದ ಆಳಿದ ಪ್ರತಾಪಮಲ್ಲನಿಗೆ (೧೬೪೧ - ೭೪) ಹದಿನೈದು ಭಾಷೆ ಗೊತ್ತಿದ್ದವು. ಅಲ್ಲಿನ ಹನುಮಾನ್ ಧೋಕಾದಲ್ಲಿ (Hanuman Gate) ಹಲವು ಭಾಷೆಗಳ ಶಿಲಾಶಾಸನಗಳಿವೆ. ಪಾರ್ಥಿಬೇಂದ್ರ ಮಲ್ಲನ (೧೬೮೧ - ೮೭) ಹಲವು ಪದ್ಯಗಳು ಶಾಸನಗಳಲ್ಲಿ ಉತ್ಕೀರ್ಣವಾಗಿವೆ. ಕಾಠಮಾಂಡೊದ ಕೊನೆಯ ದೊರೆ ಜಯಪ್ರಕಾಶ ಮಲ್ಲನು (೧೭೩೪ - ೬೮) ತನ್ನ ರಾಜ್ಯ ಉಳಿಸಿಕೊಳ್ಳಲು ಗೋರ್ಖರ ವಿರುದ್ಧ ಇಂಗ್ಲಿಷರ ಸಹಾಯವನ್ನು ಬೇಡಿ ಪಡೆದರೂ ಪ್ರಯೋಜನವಾಗಲಿಲ್ಲ. ಪೃಥ್ವೀನಾರಾಯಣ ಶಹನು ಅವನನ್ನು ಸೋಲಿಸಿ ಏಕೀಕೃತ ನೇಪಾಳ ರಾಜ್ಯಕ್ಕೆ ಕಾರಣಕರ್ತನಾದನು. ಅವನಿಂದ ಶಹ ವಂಶ ಆರಂಭವಾಗಿ ಇಂದಿಗೂ ಮುಂದುವರಿದಿದೆ (ಅದರ ಚರಿತ್ರೆ ಹಿಂದೆಯೇ ಬಂದಿದೆ).

ಪಾಶ್ಚಾತ್ಯ ಸಂಸ್ಕೃತಿಯ ವಿರೋಧಿಯಾಗಿದ್ದ ಪೃಥ್ವೀನಾರಾಯಣ ಶಹನು ಕ್ರೈಸ್ತ ಪಾದ್ರಿಗಳಿಗೆ ನೀಡಿದ್ದ ಆಶ್ರಯವನ್ನು ರದ್ದುಪಡಿಸಿದ ವಿಷಯವನ್ನಾಗಲೇ ನೋಡಿದ್ದೇವೆ. ಅಂದಿನ ೧೮ನೇ ಶತಮಾನದಲ್ಲಿ ಬಳಕೆಯಲ್ಲಿದ್ದ ಮಾತೊಂದು ಹೀಗಿದೆ – "…With the Bible comes the bayonet; with the merchant comes the musket (ಕೋವಿ)". ವಿಶ್ವದ ಶ್ರೇಷ್ಠರಲ್ಲೊಬ್ಬನಾದ ಆ ದೊರೆ ಅಪಾರ ರಾಷ್ಟ್ರೀಯವಾದಿ; ನೇಪಾಳಿಗಳಲ್ಲಿ ಆತ್ಮವಿಶ್ವಾಸ ಬೆಳೆಸಿದವನು ಅವನೇ. ಅವನ ಮಾತೊಂದು ಹೀಗಿದೆ – "ಇದು (ನೇಪಾಳ) ನನ್ನ ತೋಟ; ಇಲ್ಲಿ ನಾಲ್ಕು ಜಾತಿಗಳು, ಮೂವತ್ತಾರು ಉಪಜಾತಿಗಳು ಅರಳುತ್ತವೆ."[30]

"ಸೋಲಂಕಿ" (ನೋಡಿ – ಗುಜರಾತಿನ ಚೌಲುಕ್ಯ ಅಥವಾ ಸೋಲಂಕಿ) ಎಂಬ ಹೆಸರಿನ ಚಿಕ್ಕ ರಾಜ ಮನೆತನವು ಹದಿನಾಲ್ಕನೇ ಶತಮಾನದಲ್ಲಿ ಕಾಠಮಾಂಡೊ ದಕ್ಷಿಣದಲ್ಲಿ ಆಳಿದುದು ದಾಖಲಾಗಿದೆ (Jagadisha Chandra Sharma Regmi: Nepal – India Cultural Relations. ಅಪ್ರಕಟಿತ ಕೃತಿ). ಕಾಠಮಾಂಡೊ ಪರಿಸರದಲ್ಲಿ ಸೋಲಂಕಿ ವಂಶದ ಜೈತಸಿಂಗ್, ಜೀವಸಿಂಗ್ ಎಂಬುವವರು ಕ್ರಿ.ಶ. ೧೩೩೫ರಲ್ಲಿ ಆಳಿದುದು ದಾಖಲಾಗಿದೆ. "ಸೋಲಂಕಿ"ಗಳು ಕ್ರಮೇಣ ನೆವಾರಿ ಜನರಲ್ಲಿ ವಿಲೀನಗೊಂಡರು. ಸೋಳಂಕಿ ಎಂಬುದು ಚಾಲುಕ್ಯ ಪದದ ತದ್ಭವವೆಂಬುದು ಪ್ರಸಿದ್ಧವೇ.

**ಒಂದು ವಿಶೇಷ ಅನುಭವ :**

ನೇಪಾಳವನ್ನು ಹಿಂದಿನಿಂದ ಆಳುತ್ತಿದ್ದ "ಮಲ್ಲ"ರು ನೆವಾರಿ ಪಂಗಡದವರು ಮತ್ತು ನೇಪಾಳಕ್ಕೆ ಅವರು ಸ್ಥಳೀಯರು; ಸ್ಪಷ್ಟವಾಗಿ ಹೇಳುವುದಾದರೆ ನೇಪಾಳಿ ದೇಶೀಯರು. "ಕರ್ನಾಟ"ರು ಹೊರಗಿನವರು, ಕರ್ನಾಟಕದಿಂದ ನೇಪಾಳಕ್ಕೆ (ಮತ್ತು ಬಿಹಾರಕ್ಕೆ) ಹೋದವರು. ನಾನ್ಯದೇವನ ವಂಶಸ್ಥರು ತಮ್ಮನ್ನು "ಕರ್ನಾಟ"ರೆಂದು ಕರೆದುಕೊಳ್ಳಲು ವಿವರಣೆ ಬೇಕಾಗಿಲ್ಲ. ಆದರೆ ಹದಿನಾಲ್ಕನೇ ಶತಮಾನದಿಂದ ಈಚೆಗೆ ಆಳಿದ ಮಲ್ಲ ದೊರೆಗಳು ತಮ್ಮನ್ನು "ಕರ್ನಾಟ"ರೆಂದು "ಕರ್ನಾಟ ಮಲ್ಲ"ರೆಂದು ಕರೆದುಕೊಳ್ಳಲು ಕಾರಣ ಸ್ವಾರಸ್ಯವಾಗಿದೆ (ಹದಿನಾಲ್ಕನೇ ಶತಮಾನಕ್ಕೆ ಮುನ್ನ ಅವರು ಹಾಗೆಂದು ಕರೆದುಕೊಳ್ಳಲಿಲ್ಲ).

ನಾನ್ಯದೇವನು ಸಿಮ್ರೌನ್‌ಗಡದಿಂದ ಆರಂಭಿಸಿ ಹೆಚ್ಚು ಕಡಿಮೆ ಇಡೀ ನೇಪಾಳದ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿದ ವಿಷಯವನ್ನು ನೋಡಿದ್ದೇವೆ. "ಕರ್ನಾಟ"ರ ಅಧಿಪತ್ಯವನ್ನು ಒಪ್ಪಿಕೊಂಡು ನೇಪಾಳದ ಬೇರೆ ಬೇರೆ ಭಾಗಗಳನ್ನು ಮಲ್ಲ ಇತ್ಯಾದಿ ಅಧೀನ ರಾಜರು ಆಳಿದರು. ಸಿಮ್ರೌನ್‌ಗಡದ ಪತನದ ನಂತರ ಹರಿಸಿಂಹದೇವನು ನೇಪಾಳಕ್ಕೆ ಹೋಗಿ ಭಕ್ತಪುರದಲ್ಲಿ ನೆಲೆಸಿದಾಗ ಅಲ್ಲಿ ಆಳುತ್ತಿದ್ದ ಸಾಮಂತರು ಮಲ್ಲರು. ಮುಂದೆ, "ಕರ್ನಾಟ" ರಾಜಕುಮಾರಿ ರಾಜಲ್ಲದೇವಿಯನ್ನು ಮದುವೆಯಾದ ಜಯಸ್ಥಿತಿ ಮಲ್ಲನ ತರುವಾಯ ಮಲ್ಲರು ತಮ್ಮನ್ನು "ಕರ್ನಾಟ"ರೆಂದೇ ಕರೆದುಕೊಳ್ಳಲು ಕಾರಣ, "ಕರ್ನಾಟ" ವಂಶ ಪಡೆದಿದ್ದ ರಾಜಕೀಯ, ಸಾಂಸ್ಕೃತಿಕ ಶ್ರೇಯಸ್ಸು. (ಜಯಸ್ಥಿತಿ ಮಲ್ಲನು ತನ್ನ ಪೂರ್ವಜರು ಕರ್ನಾಟಕದವರೆಂದೇ ನಂಬಿದ್ದನೆಂಬ ಮಾತನ್ನು ಇತಿಹಾಸಕಾರರು ಆಡಿದ್ದಾರೆ). ಕರ್ನಾಟ ವಂಶದ ರಾಜಕುಮಾರಿಯನ್ನು ಮದುವೆಯಾದ ಮಲ್ಲ ದೊರೆಗಳು ತಮ್ಮನ್ನು "ಕರ್ನಾಟ"ರೆಂದೇ ಕರೆದುಕೊಳ್ಳಲು ಹೆಮ್ಮೆ ಪಟ್ಟರು. ಸಾಮಾನ್ಯವಾಗಿ ಹೆಣ್ಣು ತಾನು ಮದುವೆಯಾದ ಗಂಡಿನ ವಂಶದ ಹೆಸರನ್ನು ಪಡೆಯುತ್ತಾಳೆ; ಆದರೆ ಇಲ್ಲಿ ಗಂಡು ತಾನು ಮದುವೆಯಾದ ಹೆಣ್ಣಿನ ವಂಶದ ಹೆಸರನ್ನು ತಳೆದಿರುವುದು ಒಂದು ವಿಶೇಷ.

ನಾನು ಕಾಠಮಾಂಡೊ ವಿಮಾನ ನಿಲ್ದಾಣದಲ್ಲಿ ಇಳಿದಾಗ ನನ್ನನ್ನು ಸ್ವಾಗತಿಸಲು ಬಂದಿದ್ದ ಡಾ. ಮಾಲಾ ಮಲ್ಲ ಎಂಬಾಕೆ ತ್ರಿಭುವನ ವಿಶ್ವವಿದ್ಯಾಲಯದ ಇತಿಹಾಸ - ಪುರಾತತ್ವ ವಿಭಾಗದ ಪ್ರಾಧ್ಯಾಪಕಿ; ಪುಣೆಯ ಡೆಕನ್ ಕಾಲೇಜಿನಲ್ಲಿ ಉನ್ನತ ಶಿಕ್ಷಣ ಪಡೆದು ಇಂಡಾಲಜಿಯಲ್ಲಿ ಪರಿಣತಿ ಪಡೆದವರು.[31] ನೇಪಾಳದಲ್ಲಿ ನನಗೆ ದೊರೆತ ಅವರ ಸಹಕಾರ ಸ್ಮರಣೀಯವಾದುದು. ಒಮ್ಮೆ ಅವರ ಜೊತೆ ಮಾತನಾಡುತ್ತಿರುವಾಗ ಅವರು "ಭಕ್ತಪುರವನ್ನು ಆಳಿದ ಮಲ್ಲ ದೊರೆಗಳ ವಂಶಸ್ಥಳು ನಾನು" ಎಂದು ಹೇಳಿಕೊಂಡಾಗ ನನಗೆ ಆಶ್ಚರ್ಯವಾಯಿತು. ಆಕೆಯ ತಂದೆ ಡಾ. ಪ್ರಧಾನಾಂಗ್ ತ್ರಿಭುವನ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಪ್ರಧ್ಯಾಪಕರಾಗಿದ್ದು, ಕೆಲಕಾಲ ನೇಪಾಳ ಸರ್ಕಾರದಲ್ಲಿ ಆರ್ಥಿಕ ಸಚಿವರಾಗಿಯೂ ಕೆಲಸ ಮಾಡಿದವರು. ಅವರು ನನ್ನನ್ನು ಮನೆಗೂ ಕರೆದೊಯ್ದು ತಮ್ಮ ತಂದೆಯವರ ಪರಿಚಯ ಮಾಡಿಕೊಟ್ಟರು. ಅವರ ಹಿಂದಿನ ವಂಶಸ್ಥರು ಕರ್ನಾಟಕದವರಲ್ಲದಿದ್ದರೂ, ತಾವು "ಕರ್ನಾಟ"ರೆಂದೇ ಕರೆದುಕೊಂಡ ಭಕ್ತಪುರದ ಮಲ್ಲ ವಂಶದ ದೊರೆಗಳ ವಂಶಸ್ಥಳು ಆಕೆ ಎಂಬುದು ನನಗೆ ಬಹು ಹರ್ಷವನ್ನು ತಂದಿತು. (ಚಿತ್ರ ೫ ನೋಡಿ). ನೇಪಾಳದ ನೆವಾರಿಗಳಲ್ಲಿ "ಕರ್ನಾಟ" ಎಂಬ ಹೆಸರಿನ ಒಂದು ಉಪಜಾತಿಯೇ ಇದೆ. (ಮುಂದೆ ನೋಡಿ).

ಕಾಠಮಾಂಡೊದಲ್ಲಿ ನೇಪಾಳಿಯೊಬ್ಬರನ್ನು ಮದುವೆಯಾಗಿ ಅಲ್ಲೇ ನೆಲೆಸಿರುವ ಬೆಂಗಳೂರಿನ ಪದ್ಮಿನಿ ಬೈದ್ಯ ಎಂಬುವವರ ವಿಷಯ ತಿಳಿದು ಅವರನ್ನು ದೂರವಾಣಿ ಮೂಲಕ ಕಾಠಮಾಂಡೊದಲ್ಲಿ ಸಂಪರ್ಕಿಸಿದೆ. ಅವರಿಗೆ ಅನ್ಯ ಕೆಲಸದ ನಿಮಿತ್ತ ನಾನಿದ್ದಲ್ಲಿಗೆ ಬರಲಾಗಲಿಲ್ಲ. ಕಾಠಮಾಂಡೊದಿಂದ ನಾನು ಬೆಂಗಳೂರಿಗೆ ವಾಪಸಾದ ಎರಡು ಮೂರು ತಿಂಗಳಲ್ಲಿ ಅವರು ಬೆಂಗಳೂರು ಮಲ್ಲೇಶ್ವರದಲ್ಲಿರುವ ತಮ್ಮ ತಾಯಿಯ ಮನೆಗೆ ಬಂದು ನನಗೆ ತಿಳಿಸಿದಾಗ ಅವರನ್ನು ಭೇಟಿ ಮಾಡಲು ಹೋದೆ. ಅವರ ಗಂಡ ಶ್ರೀದೇವ್ ಬೈದ್ಯ ಕೂಡ ಬಂದಿದ್ದರು. ಅವರಿಬ್ಬರೂ ಪರಸ್ಪರ ಪ್ರೀತಿಸಿ, ಹಿರಿಯರ ಒಪ್ಪಿಗೆ ಪಡೆದು ಶಾಸ್ತ್ರೋಕ್ತವಾಗಿ ಮದುವೆ ಆದವರು. ಅವರಿಬ್ಬರ ಜೊತೆ ಲೋಕಾಭಿರಾಮವಾಗಿ ಮಾತನಾಡುತ್ತಿದ್ದಾಗ ಬೈದ್ಯ ಹೇಳಿದರು - ತಾವು ಭಕ್ತಪುರದ ರಾಜಾ ಹರಿಸಿಂಹದೇವನ ವಂಶಸ್ಥರೆಂದೂ ತಮ್ಮ ಬಳಿ ಇರುವ "ವಂಶಾವಳಿ"ಯಿಂದ (ಚಿತ್ರ ೪) ಅದು ಸ್ಪಷ್ಟವೆಂದೂ ಹೇಳಿದಾಗ ನನಗಾದ ಆನಂದ ಅವರ್ಣನೀಯ. ತಮ್ಮ ಬಳಿ ಇದ್ದ ಪುಟ್ಟ ಗಣಕ ಯಂತ್ರದಲ್ಲಿ ಅದು ದಾಖಲಾಗಿರುವುದನ್ನು ತೋರಿಸಿದರಲ್ಲದೆ, ಮುಂದೆ ಅದರ ಪ್ರತಿಯನ್ನು ಕಾಠಮಾಂಡೊದಿಂದ ನನಗೆ ತರಿಸಿಕೊಟ್ಟರು. (ಮೂಲ ವಂಶಾವಳಿಯ ಕಾಗದದ ಪ್ರತಿಯ ಗಾತ್ರ ೧೦" x ೩೦"). "ಬೈದ್ಯ" ಎಂಬುದು ಅವರ ಅಜ್ಜ ಇಡೀ ನೇಪಾಳಕ್ಕೆ ಮೊದಲ ಎಂ.ಬಿ.ಬಿ.ಎಸ್. ಪದವೀಧರರಾಗಿ ನೇಪಾಳದ ರಾಜರ ವೈದ್ಯರಾಗಿ ಕೆಲಸ ಮಾಡಿದುದರ ಸೂಚನೆ ಎಂದರು. ಅವರ ಹೆಸರಿನ "ದೇವ" ಎಂಬುದು ಸ್ಪಷ್ಟವಾಗಿತ್ತು; ನಾನ್ಯದೇವನ ವಂಶಸ್ಥರೆಲ್ಲರೂ "ದೇವ" ಎಂದು ಕೊನೆಯಾಗುವ ಹೆಸರುಗಳನ್ನು ಪಡೆದಿದ್ದುದು ಸ್ಪಷ್ಟವಾಗಿದೆ. (ಬೈದ್ಯ ದಂಪತಿಗಳ ಚಿತ್ರ. ೨ ನೋಡಿ : ಜೊತೆಗೆ ವಂಶಾವಳಿಯ ಚಿತ್ರವನ್ನೂ ನೋಡಿ). ಒಂದು ವಂಶದಲ್ಲಿ ಗಂಡು ಮಗು ಆದ ತಕ್ಷಣ ಆ ಮಗುವಿನ ಹೆಸರನ್ನು ವಂಶಾವಳಿಗೆ ಸೇರಿಸುತ್ತಾರೆ: ಹೀಗೆ 'ವಂಶಾವಳಿ'ಗಳನ್ನು ಉಳಿಸಿಕೊಂಡು ಬರುವ ಪದ್ಧತಿ ನೇಪಾಳ, ಬಿಹಾರದಲ್ಲಿದೆ. ಇದಕ್ಕೆ ಮತ್ತೆ ಕಾರಣ, ಕರ್ನಾಟಕದ ದೊರೆಗಳೇ. 'ಕುಲೀನತಾ' ವ್ಯವಸ್ಥೆಯು ಕಟ್ಟುನಿಟ್ಟಾಗಿ ಜಾರಿಗೆ ಬರಲು ಎಲ್ಲ ವಂಶಗಳ ವಂಶಾವಳಿಗಳು ಲಭ್ಯವಿರಬೇಕು ತಾನೇ!

ಶ್ರೀದೇವ ಬೈದ್ಯರಿಗೆ ಹರಿಸಿಂಹದೇವನು ಕರ್ನಾಟಕದ ನಾನ್ಯದೇವನ ‘ಕರ್ನಾಟ’ ವಂಶದ ಕೊನೆಯ ದೊರೆ, ಭಕ್ತಪುರದಲ್ಲಿ ಆಳಿದವನು ಅವನೇ ಎಂದು ನಾನು ಹೇಳಿದಾಗ ಅವರಿಗೆ ಅತ್ಯಂತ ಸಂತೋಷವಾಯಿತು. ನಾನ್ಯದೇವನಿಂದ ಹರಿಸಿಂಹದೇವನವರೆಗಿನ ರಾಜರ ಪಟ್ಟಿಯನ್ನು ನಾನು ಅವರಿಗೆ ಒದಗಿಸಿದೆ. ಶ್ರೀದೇವ ಬೈದ್ಯರು ನೆವಾರಿ ಜನಾಂಗದ “ಮಲ್ಲ” ಜಾತಿಯ ಶೈವರು; “ಶಕ್ತಿ” ಅವರ ಕುಲದೇವತೆ; ಕಾಶ್ಯಪಗೋತ್ರದ ಛೇತ್ರಿಯವರು (ಕ್ಷತ್ರಿಯರು). ಭಕ್ತಪುರದಿಂದ ಅವರ ಹಿಂದಿನವರು ಕಾಠಮಾಂಡೊಗೆ ಬಂದದ್ದು ದಂಡಪಾಣಿ ದೇವನ ಕಾಲದಲ್ಲಿ.

ಕರ್ನಾಟಕದ ದೃಷ್ಟಿಯಿಂದ ಇದೊಂದು ಅತ್ಯಂತ ಮಹತ್ವದ ಸಂಗತಿ ತಾನೇ! ಕ್ರಿ.ಶ. ೧೦೯೭ರಲ್ಲಿ ನೇಪಾಳಕ್ಕೆ ಹೋಗಿ ಅಲ್ಲಿ ಆಳಿದ ಕರ್ನಾಟಕದ ಶ್ರೇಷ್ಠ ರಾಜನೊಬ್ಬನ ವಂಶಸ್ಥರು ಈಗಲೂ ಇರುವ ಸಂಗತಿ, ಕರ್ನಾಟ ವಂಶದ ಸ್ತ್ರೀಯೊಬ್ಬಳನ್ನು ಮದುವೆಯಾದ ಕಾರಣದಿಂದ ತಮ್ಮನ್ನು “ಕರ್ನಾಟ”ರೆಂದೇ ಕರೆದುಕೊಂಡ ಮಲ್ಲವಂಶದ ದೊರೆಗಳ ವಂಶಸ್ಥರಾಗಲಿ ಈಗಲೂ ಇರುವ ಸಂಗತಿ ಸಂಭ್ರಮಪಡುವ ವಿಷಯವಲ್ಲವೇ? ಆ ಎರಡೂ ಕುಟುಂಬಗಳು ಮೂಲತಃ ಭಕ್ತಪುರದವರಾಗಿದ್ದು ಈಗ ಕಾಠಮಾಂಡೊದಲ್ಲಿ ನೆಲೆಸಿವೆ.[32]

**ವಂಶಾವಳಿ :**

[ನಾನ್ಯದೇವ
ಮಲ್ಲದೇವ
ಗಂಗದೇವ
ನರಸಿಂಹದೇವ
ರಾಮಸಿಂಹದೇವ
ಶಕ್ತಿ(ಶುಕ್ರ)ಸಿಂಹದೇವ][33] ಹರಿಸಿಂಹದೇವ ಮಲ್ಲ
ಗೋವಿಂದಾನಂದ ದೇವ
ಶ್ರೀಧರಾನಂದ ದೇವ
ಅಚ್ಯುತಾನಂದ ದೇವ
ದುರ್ಲ್ಮಾನಂದ ದೇವ
ನಾರಾಯಣಾನಂದ ದೇವ
ವಸುದೇವಾನಂದ ದೇವ
ಕುಶಲಾನಂದ ದೇವ
ಬ್ರಹ್ಮಾನಂದ ದೇವ
ಜೇಬ್ರಾನಂದ ದೇವ
ಅಮೃತಾನಂದ ದೇವ
ದಂಡಪಾಣಿ ದೇವ
ರಾಮದಾಸ್ ದೇವ್ ಬೈದ್ಯ
ಡಾ. ರತ್ನದಾಸ್ ದೇವ್ ಬೈದ್ಯ, ಎಂ.ಬಿ.ಬಿ.ಎಸ್.[34] ಡಾ. ರಘುವರ್ ದೇವ್ ಬೈದ್ಯ, ಎಂ.ಬಿ.ಬಿ.ಎಸ್.
ಶ್ರೀದೇವ್ ಬೈದ್ಯ
ಸಂಜಯ ದೇವ್ ಬೈದ್ಯ
ಶ್ರೇಯ[35]

ಮೇಲಿನ ವಂಶಾವಳಿ ದಾಖಲೆಯ (ಚಿತ್ರ ೪) ಬಲಗಡೆ ಸೂರ್ಯನ ಚಿತ್ರವನ್ನು ಗಮನಿಸಬಹುದು. ನಾನ್ಯದೇವನ ವಂಶಾವಳಿಗಳಲ್ಲಿ ಅವನನ್ನು 'ಸೂರ್ಯವಂಶಿ'ಯೆಂದು ಕರೆದಿರುವುದನ್ನು ವಿದ್ವಾಂಸರು ಗಮನಿಸಿದ್ದಾರೆ. ಆದ್ದರಿಂದ ಮೇಲಿನ ವಂಶಾವಳಿಯ ದಾಖಲೆಯು ಅಕ್ಷರಮಟ್ಟಿಗೆ ನೈಜವಾದುದೆಂದೂ, ಅದರಲ್ಲಿ ಹರಿಸಿಂಹದೇವ ಮಲ್ಲನಿಂದ ವಂಶಾವಳಿಯು ಆರಂಭವಾಗಿದ್ದರೂ ಅದು ನಾನ್ಯದೇವನ ಮುಂದುವರಿದ ವಂಶಾವಳಿಯೇ ಆಗಿದೆಯೆಂಬುದನ್ನು ನಂಬಬಹುದು. ಈ ವಂಶಾವಳಿಯ ಹೆಸರುಗಳೆಲ್ಲ ಕರಾರುವಾಕ್ಕಾಗಿವೆಯೆಂಬುದನ್ನು ಹೇಳುವುದು ಕಷ್ಟ. ಒಂದೇ ವಂಶದ ಬೇರೆ ಬೇರೆ ವಂಶಾವಳಿಗಳಲ್ಲಿ ಸ್ವಲ್ಪ ಭಿನ್ನತೆಯಿರುವುದನ್ನು ವಿದ್ವಾಂಸರು ಗಮನಿಸಿದ್ದಾರೆ. ಒಬ್ಬ ತಂದೆಯ ಹಿರಿಯ ಮಗನಿಂದ ಒಂದು ವಂಶಾವಳಿ ಮುಂದುವರಿದಿದ್ದರೆ ಇನ್ನೊಂದು ವಂಶಾವಳಿ ಅವನ ಇನ್ನೊಬ್ಬ ಮಗನಿಂದ ಮುಂದುವರಿದಿರಬಹುದು. ಯಾವುದೋ ಅವಧಿಯ ವ್ಯಕ್ತಿಯ ಹೆಸರು ದಾಖಲಾಗದಿರಬಹುದು; ಪ್ರತಿ ಮಾಡುವವರು ತಪ್ಪು ಮಾಡಿರಬಹುದು. ಆದರೆ, ಮೇಲಿನ ವಂಶಾವಳಿಯ ಸ್ವಾರಸ್ಯವೆಂದರೆ ಅದು ನೀಡುವ ಹರಿಸಿಂಹ ದೇವನ ಕಾಲ. ಅದು ನೀಡುವ ನೇಪಾಲಿ ಸವಂತ್ ೪೪೪ ಎಂಬುದು ಕ್ರಿ.ಶ. ೧೩೨೪ಕ್ಕೆ ಸರಿಹೋಗುತ್ತದೆ. ನಾವಾಗಲೇ ನೋಡಿರುವಂತೆ ಅದು ಹರಿಸಿಂಹದೇವನ (ಅಥವಾ ಉತ್ತರ ಭಾರತದ) ಚರಿತ್ರೆಯ ದೃಷ್ಟಿಯಿಂದ ಅತ್ಯಂತ ಮಹತ್ವದ ವರ್ಷ; ಆ ವರ್ಷವೇ ಅವನು ಸಿಮ್ರೌನ್‌ಗಡ ತ್ಯಜಿಸಿ ನೇಪಾಳಕ್ಕೆ ಬಂದುದು; ಮತ್ತು ಅದು ಉತ್ತರ ಭಾರತದ ಕೊನೆಯ ದೊಡ್ಡ ಹಿಂದೂ ರಾಜ್ಯದ ಕೊನೆಯ ವರ್ಷವೂ ಹೌದು.

ಮತ್ತೆ ಒತ್ತಿ ಹೇಳಬಯಸುತ್ತೇನೆ : ಒಂಬೈನೂರು ವರ್ಷಗಳ ಹಿಂದೆ ಕರ್ನಾಟಕದಿಂದ ಬಿಹಾರ ನೇಪಾಳಗಳಿಗೆ ಹೋದ ರಾಜನೊಬ್ಬನ ವಂಶಸ್ಥರ ವಂಶಾವಳಿ ದೊರಕಿರುವುದು ಮತ್ತು ಈಗಲೂ ಆ ರಾಜನ ವಂಶಸ್ಥರಿರುವುದು (ಚಿತ್ರ ೨) ಕನ್ನಡಿಗರಿಗೆ ಅತ್ಯಂತ ಹೆಮ್ಮೆಯ ಸಂಗತಿ.

[1] ಇದು ಆ ಕಾಲಕ್ಕೆ ಪ್ರಚಲಿತವಿದ್ದ ವಿಶ್ವದ ದೇಶದ ದೇಶಗಳ ಸಾಂಪ್ರದಾಯಿಕ ಪಟ್ಟಿ. ಇದರಲ್ಲಿ ಬರಮ (ಬರ್ಮ), ಚೈನ (ಚೀನಾ), ಯವನ (ಗ್ರೀಸ್), ತುರುಷ್ಕ ತುರುಷ್ಕ (ತುರ್ಕಿ) ಇತ್ಯಾದಿಗಳನ್ನು ಗಮನಿಸಬಹುದು.

[2] ಕನ್ನಡ ನಿಘಂಟು, ಸಂಪುಟ ೫. ಪು. ೪೯೬೭. ಹೋಲಿಸಿ ನೋಡಿ ; "Indian historical sources are abound in chamar, musk, medicinal hurbs and minerals, woolen blankets of Nepal origin, and suggest a brisk business of these commodities in India" –Jagadish Chandra Sharma Regmi: Nepal – India Cultural Relations, P.8 (ಅಪ್ರಕಟಿತ ಕೃತಿ).

[3] ಕಾಶ್ಮೀರದಿಂದ ಬಸವಣ್ಣನವರು ಜಂಗಮರನ್ನು ಕರೆಯಿಸಿಕೊಂಡರೆಂದೂ ಕತೆ ಇದೆ. ಇಂದಿಗೂ ಕಾಶ್ಮೀರದಲ್ಲಿ ಲಿಂಗಧಾರಿ ಜಂಗಮರು ಇದ್ದಾರೆ. ಅಂತಹ ಶಿವಾರ್ಚಕ ಜಂಗಮರನ್ನು ಭೇಟಿ ಮಾಡಿ ಬಂದಿರುವ ಶ್ರೀ ಗುರುಮೂರ್ತಿ ಎಂಬುವವರು ಆ ವಿಷಯ ತಿಳಿಸಿದ್ದಾರೆ. ಕೆ. ಎಸ್. ಸಿಂಗ್‌ಅವರ India's Communities ಎಂಬ ಕೃತಿಯಲ್ಲಿ ಭಾರತಾದ್ಯಂತ 'ಜಂಗಮ' ಜಾತಿ ಜನರು ಇರುವುದು ದಾಖಲಾಗಿದೆ. ನೋಡಿ ಅನುಬಂಧ : ೫.

[4] Netra B. Thapa : A Short History of Nepal, P 28.

[5] Sushila Tyagi : Indo – Nepalese Relations, P. 35 – 6.

[6] C.P.N. Sinha : Mithila under the Karnatas (1097 – 1325 A. D.), p.2. ಇದನ್ನು ಪ್ರೊ. ಸದಾನಂದ ಕನವಳ್ಳಿಯವರು "ಮಿಥಿಲೆಯನ್ನಾಳಿದ ಕರ್ನಾಟರು" ಶೀರ್ಷಿಕೆಯಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ.

[7] The struggle for Empire (Ed: R. C. Majumdar), P. 35.

[8] "ಚಲದೊಳ್‌ದುರ್ಯೋಧನನ್, ನನ್ನಿಯೊಳ್‌ಇನತನಯನ್" -ಪಂಪನ ಪ್ರಕಾರ ದುರ್ಯೋಧನನು ಚಲಕ್ಕೆ, ಕರ್ಣನು ಪ್ರಾಮಾಣಿಕತೆಗೆ ಪ್ರಸಿದ್ಧರು. ನನ್ನಯ್ಯ, ನನ್ನಿ ಚೋಡದೇವ, ನನ್ನಿ ನೊಳಂಬ, ನನ್ನಿಯ ಗಂಗ, ನನ್ನಿ ಕರ್ತಾರ ಬಟಿರ, ನನ್ನ ಚಂಗಾಳ್ವ, ನನ್ನಿ ಶಳುಕ್ಕಿ ರಾಜಮಲ್ಲ,

ನನ್ನಿಯ ಸಿಂದ ಇವೇ ಮೊದಲಾದ ವ್ಯಕ್ತಿನಾಮಗಳು ಕರ್ನಾಟಕದಲ್ಲಿ ಹಿಂದೆ ಪ್ರಚಲಿತವಾಗಿದ್ದವು. ಸಿದ್ಧರಾಮನ ಸೊನ್ನಲಿಗೆಯ ದೊರೆ ನನ್ನಪ್ಪ. "ನನ್ನಿ" ಪದದ ಮೂಲ ಸುಂದರ, ಒಳ್ಳೆಯ, ಶ್ರೇಷ್ಠ ಎಂಬರ್ಥಗಳ "ನಲ್".

[9] ಗುಲ್ಬರ್ಗ ಜಿಲ್ಲೆಯ ಮತ್ತೂರು ಗ್ರಾಮದ ೧೧೨೩ರ ಶಾಸನೋಕ್ತ ವಿಜ್ಞಾನದೇವನು ಕೌಶಿಕ ಗೋತ್ರದವನು; ಮಿತಾಕ್ಷರಾ ಕರ್ತೃ ವಿಜ್ಞಾನೇಶ್ವರನು ಭಾರದ್ವಾಜ ಗೋತ್ರದವನಾದ ಕಾರಣ ಇಬ್ಬರೂ ಬೇರೆ ಬೇರೆ ಎಂಬ ವಾದವಿದೆ. (ಎಸ್. ಗುರುರಾಜಾಚಾರ್: `Vijnaneshvara and Contemporary Society'. The Chalukyas of Kalyana. Ed: M.S. Nagaraja Rao ಕೃತಿಯಲ್ಲಿ.)

[10] "ಅಪ್ಪು" ಎಂಬುದು ಸ್ವಾಭಾವಿಕವಾಗಿಯೇ ಕನ್ನಡದ "ಅಪ್ಪ"ವನ್ನು ಜ್ಞಾಪಕಕ್ಕೆ ತರುತ್ತದೆ. "ಅಪ್ಪಿದೇವಯ್ಯ" ಎಂಬ ವಚನಕಾರನಿದ್ದನು. (ಅಂಕಿತ: ಈಶ್ವರೀಯ ವರದ ಮಹಾಲಿಂಗ). ಸಂಕೀರ್ಣ ವಚನ ಸಂಪುಟ. VI, ಪು. ೧೦೪. ಇದನ್ನು ನನ್ನ ಗಮನಕ್ಕೆ ತಂದವರು ಡಾ. ಎನ್.ಎಸ್. ತಾರಾನಾಥ್.

[11] C.P.N. Sinha : Mithila under the Karnatas, P.7.

[12] 'ಮಹೀಶಾಸನ' ವಂಶದ ಜ್ಯೋತಿರೀಶ್ವರನ ಊರು "ಪಲ್ಲೀ ಜನ್ಮ", ತಂದೆ ಧೀರಸಿಂಹ, ಅಜ್ಜ ರಾಮೇಶ್ವರ. ನಾಟಕದ ಪಾಠವು "ಓಂ ನಮೋ ಭೈರವಾಯ" ಎಂದು ಆರಂಭವಾಗುತ್ತದೆ. (Ed: Mahamahopadhyaya Haraprasada Sastri : A Catalogue of Palm – leaf Manuscripts and selected paper Manuscripts. National Archieves, Nepal.) "ಧೂರ್ತಸಮಾಗಮ" ಹಸ್ತಪ್ರತಿಯ ಸಂಖ್ಯೆ ೧೫೩೬. (ಹಸ್ತಪ್ರತಿ ಪುಷ್ಪಿಕೆಯ ಅಚ್ಚಾದ ಹಾಳೆಯಲ್ಲಿ "ಕಾರ್ಣಾಟ ಚೂಡಾಮಣಿ" ಗಮನಿಸಿ. ಚಿತ್ರ ಸಂಖ್ಯೆ. ೩)

[13] ಆ ನಾಟಕದ ಹಸ್ತಪ್ರತಿ ಕಾಠಮಾಂಡೋದ ರಾಷ್ಟ್ರೀಯ ಪತ್ರಾಗಾರದಲ್ಲಿದೆ (National Archieves). ಆ ಪತ್ರಾಗಾರವು ಒಂದು ಅದ್ಭುತ ಸಂಗ್ರಹ. ಉತ್ತರ ಭಾರತವು ಮುಸ್ಲಿಮರ ವಶವಾದಾಗ ಅನೇಕ ವಿದ್ವಾಂಸರು, ಸಂಪ್ರದಾಯ ಪ್ರಿಯರು ನೇಪಾಳಕ್ಕೆ ತಮ್ಮ ಬಳಿಯಿದ್ದ ಹಸ್ತಪ್ರತಿ ಒಯ್ದರು: ಅದರ ಒಂದು ಭಾಗ ಅದು.

[14] ಆಗುಂಬೆ ಎಸ್. ನಟರಾಜ್ : ಹೊರನಾಡಿನ ಮೂರು ಕರ್ನಾಟಕ ರಾಜ್ಯಗಳು, ಪು. ೪.

[15] ಮೋಹನ ಪ್ರಸಾದ್ ಖನಾಲ್ : ಸಿಮರೌನ್ ಗಡ ಕೀ ಇತಿಹಾಸ್ (ನೇಪಾಳಿ) – ಇದರ ಕೆಲವು ಭಾಗಗಳನ್ನು ಓದಿ ವಿವರಿಸಿದವರು ಡಾ. ವಿಜಯಾ ಸುಬ್ಬರಾಜ್.

[16] "ಸಿಮರೌನ್‌ಗಡ ವಿಷಯಕ್ ಸಂಗೋಷ್ಠೀ" (ನೇಪಾಲಿ. ಸಂಯೋಜಕ್ : ಡಾ. ರಾಮದಯಾಲ್ ರಾಕೇಶ್), ಪು. ೧೧೮ – ೨೦.

[17] ಅವುಗಳನ್ನು ನೇಪಾಳದ National Museum ಸಂಗ್ರಹಾಲಯದಲ್ಲಿ ನಾನು ನೋಡಿದ್ದೇನೆ. ಆ ಮ್ಯೂಜಿಯಮ್ಮಿನ ಸಹಾಯಕ ಅಧಿಕಾರಿ ನಿರನ್ ಕುಮಾರ್ ರಾಜ್ ಬಂಶಿಯು ನೆವಾರಿ ಜನಾಂಗದ "ಕರ್ನಾಟ" ಜಾತಿಯವರೆಂದು ಅವರ ಮಾತಿನಿಂದಲೇ ತಿಳಿಯಿತು. ಆ ಮ್ಯೂಜಿಯಮ್ಮಿನ ಕಲಾಕೃತಿಗಳು ಅದ್ಭುತ. ಲೋಹದ "ಸಿಂಹ ಸಿಂಹ ಸಿಂಹ ವಾಹನಿ ಲೋಕೇಶ್ವರ"ನ ಎರಕದ ಮೂರ್ತಿಯಾಗಲಿ, ನಾಲ್ಕಡಿ ಎತ್ತರದ ಸೂರ್ಯ, ಉಮಾ ಮಹೇಶ್ವರ, ವಿಷ್ಣು ಶಿಲಾಮೂರ್ತಿಗಳಾಗಲಿ ಅನನ್ಯ ಕುಸುರಿ ಕಲೆಯ ಪ್ರತೀಕ. ಬುದ್ಧ ಮಾಯಾದೇವಿಯ ವಿಗ್ರಹ, ಅಂತೆಯೇ ವಿಷ್ಣುವಿನ ವಿಶ್ವರೂಪ ದರ್ಶನ ಇವುಗಳ ಚೆಲುವು ಎಣೆಯಿಲ್ಲದ್ದು. ಬಲಿ, ಬಾಮನ್, ತ್ರಿವಿಕ್ರಮರ ಶಿಲ್ಪವನ್ನು ನೋಡಿಯೇ ಸವಿಯಬೇಕು.

[18] ಸಿಮರೌನ್‌ಗಡ ವಿಷಯಕ್ ಸಂಗೋಷ್ಠೀ, ಪು. ೧೨೨. ಸಿಮ್ರೌನ್‌ಗಡ ಪ್ರದೇಶದ ಶಿಲ್ಪಗಳಲ್ಲಿ ಹಲವನ್ನು ರೂಪಿಸಿದವರು ಕರ್ನಾಟಕದವರು ಎಂಬ ವಿಷಯವನ್ನು ನನಗೆ ಖಚಿತಪಡಿಸಿದವರು ಡಾ. ಚಂದ್ರಪ್ರಸಾದ್ ತ್ರಿಪಾಠಿ (ಕಾಠಮಾಂಡೋದ ಪುರಾತತ್ವ ಇಲಾಖಾ ವಿದ್ವಾಂಸರು). ಅವರು ನ್ನ ಜೊತೆ ಮಾತನಾಡುತ್ತ, ಸಿಮ್ರೌನ್‌ಗಡದ ಭೂಶೋಧಗಳಲ್ಲಿ ತಾವೂ ಕೆಲಸ ಮಾಡಿದುದನ್ನು ವಿವರಿಸಿದರು. "ಸಿಮರೌನ್‌ಗಡ ವಿಷಯಕ್ ಸಂಗೋಷ್ಠೀ" ಎಂಬ ನೇಪಾಲಿ ಕೃತಿಯ (ಸಂಯೋಜಕ. ರಾಮದಯಾಳ್ ರಾಕೇಶ್) ಕೊನೆಯಲ್ಲಿ ಬರುವ ಇಂಗ್ಲಿಷ್ ಲೇಖನದ ಕೆಲವು ಭಾಗಗಳು ಹೀಗಿವೆ – "ಸುಲ್ತಾನ್ ಘಿಯಾಸುದ್ದೀನ್ (Tugalak Dynasty of Delhi) defeated King ಹರಿಸಿಂಹ ದೇವ in war in 1324 A.D. and brought to an end the 229 years of ಕರ್ನಾಟ dynasty which was considered a golden age in view of the economic, political, religious and artistic development of the time...ಸುಲ್ತಾನ್ ಘಿಯಾಸುದ್ದೀನ್ was not content with the capturing of ಸಿಮ್ರೌನ್‌ಗಡ್, but also destroyed the town demolishing monuments of

archaeological importance including shrines and temples and artifacts which were second to none…(ಸಿಮ್ರೌನ್‌ಗಡ್) was the shelter house of famous artists and sculpturists of South India.” (p. 118 – 9)

[19] Sinha : Mithila under the Karnatas, P.83.

[20] ಅದೇ, ಪು. ೬೨.

[21] ಅದೇ.

[22] ಗಂಡು – ಹೆಣ್ಣುಗಳ ಮಧ್ಯೆ ವಿವಾಹ ವ್ಯವಸ್ಥೆಯಾಗಲು ಅದರ ಹಿಂದಿನವರು ಏಳು ತಲೆಮಾರುಗಳವರೆಗೆ ಯಾವುದೇ ರೀತಿಯ ಬಂಧುಗಳೂ ಆಗಿರಕೂಡದು.

[23] ‘ಕಾಯಸ್ಥ’ರು ಮುಖ್ಯವಾಗಿ ರಾಜನ ಬಳಿ ಅಧಿಕಾರಿಗಳಾಗಿದ್ದವರು: ಉದಾ.ಗೆ ಖಜಾನೆಯಲ್ಲಿ, ರೆವಿನ್ಯೂ ದಾಖಲೆಗಳ ಕಚೇರಿಯಲ್ಲಿ ಇತ್ಯಾದಿ. ಸೇನಬೋವ (ಶಾನಭೋಗ)ಕ್ಕೆ ‘ಕಾಯಸ್ಥ’ ‘ಅಕ್ಷರಜೀವಕ’ ಎಂದೇ ಅರ್ಥ ಹೇಳಿದೆ, ಕನ್ನಡ ಹಲಾಯುಧದಲ್ಲಿ.

[24] ಈ ಹೆಸರು ತಪ್ಪಾಗಿ ಅಚ್ಚಾಗಿದೆಯೆಂದು ತೋರುತ್ತದೆ.

[25] ‘ಕರ್ಣ’ ಎಂಬ ವಂಶನಾಮವನ್ನು ಹೆಸರುಗಳ ಅಂತ್ಯದಲ್ಲಿ ಸೇರಿಸಿಕೊಳ್ಳುವ ಈ ಕಾಯಸ್ಥರು ಇಂದಿಗೂ ತಮ್ಮ ಮೂಲ ನಾಡು ಕರ್ನಾಟಕವೆನ್ನುತ್ತಾರೆಂಬುದನ್ನು ಖಚಿತಪಡಿಸಿಕೊಂಡಿದ್ದೇನೆ. “ಕರ್ಣ” ಎಂದರೆ ಕರಣ, clerk ಎಂದರ್ಥ. ನೋಡಿ – “ಕರಣಿಕ”.

[26] ಇದನ್ನು ನನಗೆ ತೋರಿಸಿದವರು ಭಕ್ತಪುರದ ನಿವಾಸಿ, ಯುವ ಸಂಶೋಧಕ ಡಾ. ಪುರುಷೋತ್ತಮ ಲೋಚನ ಶ್ರೇಷ್ಠ. ಅವರು ಭಕ್ತಪುರದ ಜಂಗಂ ಮಠಗಳ ಬಗ್ಗೆ ಬರೆದಿರುವುದು ಮುಂದೆ ಪ್ರಸ್ತಾಪಗೊಳ್ಳುತ್ತದೆ.

[27] ಈ ಹೆಸರುಗಳು ನಮಗೆ ಸಹಜವಾಗಿಯೇ ಕರ್ನಾಟಕದ ಹೆಸರುಗಳನ್ನು ನೆನಪಿಗೆ ತರುತ್ತವೆ. ಉದಾ.ಗೆ ಶಾಂತಲ, ಸುಗ್ಗಲೆ, ಕಂಚಲದೇವಿ, ಮೈಳಲದೇವಿ, ನಾಗಲದೇವಿ, ಭಾಗಲ ಮಹಾದೇವಿ, ಸಾವಳದೇವಿ. ಅಂತೆಯೇ, ನೇಪಾಳದ ವಂಶಾವಳಿಗಳಲ್ಲಿ (೧೨೬೪ – ೧೩೧೧) ಕಂಡು ಬರುವ “ವೀರಮ್ಮ ದೇವಿ”ಯ ಹೆಸರು; ಇವಳು ಜಯಶಕ್ತಿ ದೇವನ ಯುವರಾಜ್ಞಿ. ಅವಳ ಹಲವು ಧಾರ್ಮಿಕ ಕಾರ್ಯಗಳನ್ನು ದಾಖಲೆಗಳು ಕೊಂಡಾಡಿವೆ. ‘ಗೋಪಾಲರಾಜ ವಂಶಾವಳಿ’ಯಲ್ಲಿ ಕಂಡುಬರುವ ರುದ್ರಮದೇವಿಯು ರಾಜದೇವನ (ಸು. ೧೩೪೭) ಪತ್ನಿ; ಇವೆರಡೂ ಕರ್ನಾಟಕದ ಹೆಸರುಗಳನ್ನು ಜ್ಞಾಪಿಸುತ್ತವೆ (Jadish Chandra Sharma Regmi : Nepal India Cultural Relations, P. 19. ಅಪ್ರಕಟಿತ).

[28] Netra B. Thapa : A Short History of Nepal, P. 45.

[29] ಇದನ್ನು ನನಗೆ ತಿಳಿಸಿದವರು ಪಶುಪತಿ ದೇವಾಲಯದ ಈಗಿನ ‘ಮೂಲಭಟ್ಟ’ರಾದ ಶ್ರೀ ಮಹಾಬಲೇಶ್ವರ ಭಟ್ಟರು : ಇವರು ದಕ್ಷಿಣ ಕನ್ನಡ ಜಿಲ್ಲೆಯವರು.

[30] Netra B. Thapa : A Short History of Nepal, P. 4 – 5.

[31] ಅವರನ್ನು ಪರಿಚಯಿಸಿದವರು ಪುಣೆಯಲ್ಲಿ ಅವರ ಸಹಾಧ್ಯಾಯಿಯಾಗಿದ್ದು ಈಗ ಬೆಂಗಳೂರಿನಲ್ಲಿ ಇಂಡಿಯನ್ ಕೌನ್ಸಿಲ್ ಫಾರ್ ಹಿಸ್ಟಾರಿಕಲ್ ರಿಸರ್ಚ್‌ನ ಉಪ ನಿರ್ದೇಶಕರಾಗಿರುವ ಡಾ. ಎಸ್.ಕೆ. ಅರುಣಿಯವರು.

[32] ಶ್ರೀಮತಿ ಪದ್ಮಿನಿ ಮತ್ತು ಶ್ರೀದೇವ ಬೈದ್ಯರನ್ನು ಕರ್ನಾಟಕ ಸರ್ಕಾರದ ಸಂಸ್ಕೃತಿ ಸಚಿವೆಯವರಿಗೆ ಪರಿಚಯ ಮಾಡಿಸಿದ್ದಲ್ಲದೆ, ಹಂಪಿ ಸಂರಕ್ಷಣೆ ಕುರಿತಂತೆ ನಡೆದ ಚಳವಳಿ ಸಭೆಗೆ ಅವರನ್ನು ಕರೆದು ಅಲ್ಲಿ ಸಾರ್ವಜನಿಕರಿಗೆ ಸಮೂಹ ಮಾಧ್ಯಮದವರಿಗೆ ಪರಿಚಯ ಮಾಡಿಕೊಡಲಾಯ್ತು.

[33] ಮೇಲಿನ ಆರು ಹೆಸರುಗಳು ಇತಿಹಾಸದ ಕೃತಿಗಳಿಂದ. ಮುಂದಿನವು ವಂಶಾವಳಿಯಿಂದ. ಹರಿಸಿಂಹದೇವನ ಹೆಸರು ಎರಡರಲ್ಲೂ ಉಂಟು.

[34] ಇವರು ನೇಪಾಳದ ಪ್ರಪ್ರಥಮ ಎಂ.ಬಿ.ಬಿ.ಎಸ್. ಪದವೀಧರರು ಮತ್ತು ನೇಪಾಳದ ದೊರೆಗಳ ರಾಜ ವೈದ್ಯರಾಗಿದ್ದವರು.

[35] “ಶ್ರೇಯ” ಶ್ರೀದೇವ್ ಬೈದ್ಯರ ಮೊಮ್ಮಗು. ಶ್ರೀದೇವ್ ಬೈದ್ಯ ನಮಗೆ ಕೊಟ್ಟಿರುವ ವಂಶಾವಳಿಯು “ಹರಿಸಿಂಹಮಲ್ಲ(ದೇವ)”ನಿಂದ ಆರಂಭವಾಗುತ್ತದೆ. ಸ್ವಾರಸ್ಯವೆಂದರೆ ಈ ವಂಶಾವಳಿಯು ನೇಪಾಳಿ ಸಂವತ್ ೪೪೪ ಎಂಬ ತೇದಿ ಕೊಡುತ್ತದೆ; ಇದು ಕ್ರಿ.ಶ. ೧೩೨೪ಕ್ಕೆ ಸರಿ ಹೊಂದುತ್ತದೆ. ಹರಿಸಿಂಹದೇವನು ಭಕ್ತಪುರದಿಂದ ಆಳಲು ಆರಂಭಿಸಿದ್ದು ಅದೇ ವರ್ಷದಿಂದ ಎಂಬುದು ಇತಿಹಾಸ ಪ್ರಸಿದ್ಧ. (ನೋಡಿ, ಪು. ೨೪)

# ೬. ಸಾಮಾಜಿಕ ಸಂಬಂಧಗಳು

ಬಿಹಾರ, ನೇಪಾಳಗಳ ಮೈಥಿಲಿ ಬ್ರಾಹ್ಮಣರು ಇಂದಿಗೂ ಹೆಮ್ಮೆಯಿಂದ ತಾವು ಮೂಲತಃ ಕರ್ನಾಟಕದವರೆಂದೇ ಹೇಳಿಕೊಳ್ಳುವುದನ್ನು ಹಿಂದೆಯೇ ಗಮನಿಸಲಾಗಿದೆ. ನೇಪಾಳದ ಸ್ಥಳೀಯ ಬ್ರಾಹ್ಮಣರಲ್ಲಿ ಉಪಾಧ್ಯೆ, ಅರಿಯಾಲು, ಆಚಾರ್ಯ, ಪೌಡೇಲ್ ಮುಂತಾದ ಭಿನ್ನ ವರ್ಗಗಳಿದ್ದು ಅವರಲ್ಲಿ ಉಪಾಧ್ಯೆಯವರು ತಾವು ಉಳಿದವರಿಗಿಂತ ಶ್ರೇಷ್ಠರೆಂದು ಭಾವಿಸುತ್ತಾರೆ.

[1] ಮೈಥಿಲಿ ಬ್ರಾಹ್ಮಣರು ಕರ್ನಾಟ ರಾಜರ ಜೊತೆ ನೇಪಾಳಕ್ಕೆ ಹೋದವರು; ಮೂಲತಃ ಕರ್ನಾಟಕದವರು. ನೇಪಾಳದ ಬಹುತೇಕ ಬ್ರಾಹ್ಮಣರು ಮುಸ್ಲಿಮರಿಂದ ರಕ್ಷಣೆ ಪಡೆಯಲು ಭಾರತವನ್ನು ಬಿಟ್ಟು ನೇಪಾಳಕ್ಕೆ ಬಂದವರೆಂದು ಹೇಳಿಕೊಳ್ಳುತ್ತಾರೆ.ನಾನ್ಯದೇವನ ಕಾಲದಲ್ಲಿ ಅವನು ನೇಪಾಳವನ್ನು ಗೆದ್ದಾಗ ಕರ್ನಾಟಕದಿಂದ ಮಿಥಿಲೆಗೆ, ಮುಂದೆ ಹರಿಸಿಂಹದೇವನು ಸಿಮ್ರೌನ್‌ಗಡ್‌ತ್ಯಜಿಸಿ ಭಕ್ತಪುರಕ್ಕೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಿದಾಗ ಮಿಥಿಲೆ ಪ್ರದೇಶದಿಂದ ಮೈಥಿಲಿ ಬ್ರಾಹ್ಮಣರು ಹೆಚ್ಚಾಗಿ ನೇಪಾಳಕ್ಕೆ ಹೋಗಿ ನೆಲಸಿದ ವಿಷಯವನ್ನು ಗಮನಿಸಿದೆ. ಹದಿನಾರನೇ ಶತಮಾನದಲ್ಲಿಯೂ ಶಿವಸಿಂಹ ಮಲ್ಲನು ಮಿಥಿಲೆ ಬ್ರಾಹ್ಮಣರನ್ನು ನೇಪಾಳಕ್ಕೆ ಆಹ್ವಾನಿಸಿ ಅವರ ಜೀವನೋಪಾಯಕ್ಕೆ ಮನೆ, ಭೂಮಿಗಳನ್ನು ದಾನ ಮಾಡಿದ ವಿಷಯವು ನೇಪಾಳ ಚರಿತ್ರೆಯ ಗ್ರಂಥಗಳಲ್ಲಿ ಉಕ್ತವಾಗಿದೆ.

“ಮೈಥಿಲ ಕೋಕಿಲ” ಎಂದೇ ಪ್ರಸಿದ್ಧನಾದ ವಿದ್ಯಾಪತಿಯು (ಜನನ : ಕ್ರಿ. ಶ. ೧೩೫೦) ಮಿಥಿಲಾ ಪ್ರದೇಶದ ದರ್ಭಾಂಗ ಜಿಲ್ಲೆಯ (ಬಿಹಾರ) ಬಿಸಪಿಯಲ್ಲಿ ಜನಸಿದವನು. ಅವನು ಹುಟ್ಟುವ ಹೊತ್ತಿಗೆ ಕರ್ನಾಟ ವಂಶದ ಕೊನೆಯ ರಾಜ ಹರಿಸಿಂಹದೇವನು ನೇಪಾಳಕ್ಕೆ ಸ್ಥಳಾಂತರಿಸಿದ್ದರೂ, ಅದೇ ವಂಶದ ಚಿಕ್ಕ ದೊರೆಗಳು ಮಿಥಿಲೆಯನ್ನು ಆಳುತ್ತ ತಮ್ಮ ಹಿಂದಿನವರು ಸಂಸ್ಕೃತ, ಮೈಥಿಲಿ ವಾಙ್ಮಯಗಳನ್ನು ಬೆಳೆಸಿದ ಪರಂಪರೆಯನ್ನು ಮುಂದುವರಿಸಿದರು. ಚಾಲುಕ್ಯರ ಸಾಮ್ರಾಜ್ಯದಲ್ಲಿ ಕನ್ನಡವು ಸಂಸ್ಕೃತದ ಜೊತೆ ಜೊತೆಗೆ ರಾಜ ಪ್ರೋತ್ಸಾಹವನ್ನು ಪಡೆದು ಬೆಳೆದುದನ್ನು ಪ್ರತ್ಯಕ್ಷವಾಗಿ ಕಂಡಿದ್ದ ನಾನ್ಯದೇವನು ಮಿಥಿಲೆ ಪ್ರದೇಶದಲ್ಲಿ ಸಂಸ್ಕೃತದ ಜೊತೆ ದೇಶೀಯ ಭಾಷೆ (ಮೈಥಿಲಿ) ಸಂಸ್ಕೃತಿಗಳನ್ನು ಅಭಿವೃದ್ಧಿಪಡಿಸಲು ಎಲ್ಲ ಬಗೆಯ ಪ್ರೋತ್ಸಾಹ ನೀಡಿದನು. ವಿದ್ಯಾಪತಿ ಕವಿಯ ವಂಶದ ಮೂಲಪುರುಷ ವಿಷ್ಣುಶರ್ಮ. ಇವನ ಮೊಮ್ಮಗ ರಾಜಾದಿತ್ಯನು ಕರ್ನಾಟ ದೊರೆಗಳಲ್ಲಿ ಮಂತ್ರಿಯಾಗಿದ್ದನು. ಇವನ ಮೊಮ್ಮಗ ಬೀರೇಶ್ವರ ಠಾಕೂರನು ಹರಿಸಿಂಹದೇವನಲ್ಲಿ ಪ್ರಧಾನಿಯಾಗಿದ್ದನು. ಅವನ ಮಗನೇ ಚಂಡೇಶ್ವರ. ಈತ ಕವಿ ವಿದ್ಯಾಪತಿಯ ಚಿಕ್ಕಪ್ಪನ ಮಗ. ವಿದ್ಯಾಪತಿಯು ಶಿವಸಿಂಹ ಎಂಬ ದೊರೆಯ ಆಸ್ಥಾನ ಕವಿ. ಹರಿಸಿಂಹದೇವನು ಮಿಥಿಲೆಯಿಂದ ನೇಪಾಳಕ್ಕೆ ಹೋದಮೇಲೆ ದೆಹಲಿ ಸುಲ್ತಾನನು ಹರಿಸಿಂಹದೇವನ ವಂಶಸ್ಥನಾದ ರಾಮೇಶ್ವರ ಠಕ್ಕುರನನ್ನು ಸಾಮಂತ ರಾಜನೆಂದು ಮಿಥಿಲಾ ರಾಜ್ಯಕ್ಕೆ ನೇಮಕ ಮಾಡಿದನು. ಶಿವಸಿಂಹನು ರಾಮೇಶ್ವರ ಠಕ್ಕುರನ ಮುಂದಿನ ಮೂರನೆಯ ಸಂತತಿಯವನು. ಹೀಗೆ ಕರ್ನಾಟ ದೊರೆಗಳ ಮಂತ್ರಿ - ವಿದ್ವಾಂಸರ ಪರಂಪರೆಗೆ ಸೇರಿದ ಆಸ್ಥಾನ ಕವಿ ವಿದ್ಯಾಪತಿಯು ಮೈಥಿಲೀ ಭಾಷೆಯಲ್ಲಿ ಕಾವ್ಯಗಳನ್ನು ಹಾಡುಗಳನ್ನು ರಚಿಸಿದನು. ಸಂಸ್ಕೃತವೇ ಪ್ರತಿಷ್ಠಿತ ಭಾಷೆಯಾಗಿ ಮೆರೆಯುತ್ತಿದ್ದ ಕಾಲದಲ್ಲಿ ದೇಶೀಯ ಭಾಷೆಯೊಂದರಲ್ಲಿ ಕೃತಿರಚನೆ ಮಾಡಲು ಎಂಟೆದೆ ಬೇಕಾಗಿತ್ತು. ವಿದ್ಯಾಪತಿ ಅಂತಹ ಧೈರ್ಯವನ್ನು ಮಾಡಿದ್ದು ಗಮನಾರ್ಹ.[2] ಸ್ತ್ರೀ ಶಿಕ್ಷಣ ಪ್ರತಿಪಾದಕನಾಗಿದ್ದ ಅವನ ಸೊಸೆ ಚಂದ್ರಕಲಾ ಒಬ್ಬ ಪ್ರಸಿದ್ಧ ಕವಯಿತ್ರಿ. ಹರಿ ಹರರಿಗೆ ಭೇದ ಮಾಡದ ಅವನ ಹಾಡುಗಳಲ್ಲಿ ಶಿವಪರವಾದ ಸ್ತುತಿಗಳೇ ಹೆಚ್ಚು. ನೇಪಾಳದ ಮಲ್ಲ ದೊರೆಗಳ ಕಾಲದ ಕವಿಗಳ ರಚನೆಗಳೂ ಅವರ ಸ್ವಭಾಷೆಯಲ್ಲಿಯೇ ಇವೆ. ವಿದ್ಯಾಪತಿಯ ಪ್ರಭಾವ, ಕವಿಯಾಗಿ ಗೇಯಕಾರನಾಗಿ ನೇಪಾಳಿ ಭಾಷೆಯ ಮೇಲೆ ಸಾಕಷ್ಟಾಗಿದೆ. ವಿದ್ಯಾಪತಿಯಂತಹ ಕವಿ - ವಿದ್ವಾಂಸರನ್ನು ರೂಪಿಸಿದ್ದು ಮಿಥಿಲೆಯ ಕರ್ನಾಟ ರಾಜರು ಸೃಷ್ಟಿಸಿದ ಉದಾರ ವಾತಾವರಣ, ಸಂಸ್ಕೃತಪರವಾಗಿದ್ದರೂ ಜನರು ಆಡುವ ಭಾಷೆಯನ್ನೂ ಗೌರವಿಸುವ ಮನೋಧರ್ಮದ ವಾತಾವರಣ.

ವಿಶೇಷವಾಗಿ ಮೈಥಿಲಿ ಬ್ರಾಹ್ಮಣರು ಈಗ ಮೈಥಿಲಿ ಭಾಷೆಯನ್ನು ಹಿಂದಿನಿಂದ ಸ್ವತಂತ್ರ ಭಾಷೆಯೆಂದು ಗುರುತಿಸಿ, ದರ್ಭಾಂಗವನ್ನು ರಾಜಧಾನಿಯನ್ನಾಗಿಸಿಕೊಂಡು ಮೈಥಿಲೀ ರಾಜ್ಯವನ್ನು ರೂಪಿಸಬೇಕೆಂಬ ಹೋರಾಟವನ್ನೂ ನಡೆಸಿದ್ದಾರೆ. (ಆ ಹೋರಾಟ ದುರ್ಬಲವಾಗಿದ್ದರೂ ಜೀವಂತವಾಗಿದೆ.)

ನೇಪಾಳದ (ಬಿಹಾರದ) ಕಾಯಸ್ಥರು ಮುಖ್ಯವಾಗಿ ಒಂದಾನೊಂದು ಕಾಲದಲ್ಲಿ ಅಧಿಕಾರಿಗಳಾಗಿದ್ದವರು. ವಿಶೇಷವಾಗಿ ಹಣಕಾಸು ವ್ಯವಸ್ಥೆಗೆ ಸಂಬಂಧಿಸಿದ ದಾಖಲೆಗಣನ್ನು ನೋಡಿಕೊಳ್ಳುತ್ತಿದ್ದವರು ಅವರು. ಅವರಲ್ಲಿ ಈಗ ಕೆಲವರು ರೈತರಾಗಿದ್ದರೂ, ಭೂಮಿ ಒಡೆಯರೂ ಆಗಿರುವ ಅವರು ಬೇರೆಯವರಿಂದ ವ್ಯವಸಾಯ ಮಾಡಿಸುವುದೇ ಹೆಚ್ಚು. ಅವರು ಹನ್ನೊಂದನೇ ಶತಮಾನದ ಅಂತ್ಯದಲ್ಲಿ ನಾನ್ಯದೇವನ ಜೊತೆ ಬಂದ ಕರಣಗಳ (Accountants) ವಂಶಸ್ಥರೆಂಬುದನ್ನು ಹಿಂದೆಯೇ ನೋಡಿದ್ದೇವೆ. ಅವರಲ್ಲಿ ಅಂಬಷ್ಟ, ಭಟ್ನಗರ್, ಕರ್ಣ, ಮಧುರ್, ನಿಗಮ್, ಸಕ್ಸೇನ, ಶ್ರೀವಾಸ್ತವ ಇತ್ಯಾದಿ ಗುಂಪಿನವರು ಬಿಹಾರದಲ್ಲಿದ್ದಾರೆ, ನೇಪಾಳದಲ್ಲಿ ಇದ್ದಾರೆ. ದರ್ಭಾಂಗ ಜಿಲ್ಲೆಯಲ್ಲಿ 'ಕರ್ಣ' ಕಾಯಸ್ಥರು ಹೆಚ್ಚು ಮತ್ತು ಇವರು ನಾನ್ಯದೇವನ ಜೊತೆ ಬಂದ ಹನ್ನೆರಡು ಕರಣರಲ್ಲಿ ಹನ್ನೆರಡನೆಯವನಾದ ರತ್ನದೇವನ ವಂಶಸ್ಥರು ಮತ್ತು ಇಂದಿಗೂ "ಕರ್ಣ" (ಕರಣ) ಎಂಬ ವಂಶನಾಮವನ್ನು ಹೆಸರ ಕೊನೆಯಲ್ಲಿ ಹೊಂದಿರುವ ತಾವು ಮೂಲತಃ ಕರ್ನಾಟದವರೆಂಬುದನ್ನು ನೆನಪಿನಲ್ಲಿಟ್ಟುಕೊಂಡಿದ್ದಾರೆ. (ಆಂಧ್ರದ ನಿಯೋಗಿ ಬ್ರಾಹ್ಮಣರಲ್ಲೂ ಕರ್ಣ ಅಥವಾ ಕರಣ, ಪಟ್ವಾರಿ, ಆರ್ಯ ನಿಯೋಗಿ ಎಂಬ ಗುಂಪುಗಳುಂಟು.) ಇವರಲ್ಲಿ ಅಕ್ಷರಸ್ಥರ ಸಂಖ್ಯೆ ಉಳಿದವರಿಗಿಂತ ಹೆಚ್ಚು. ನಾನ್ಯದೇವನ ಕರಣರಲ್ಲಿ ಶ್ರೀಧರದಾಸ ಮತ್ತು ರತ್ನದೇವರು ರಾಜನಿಗೆ ಹೆಚ್ಚು ಆತ್ಮೀಯರಾಗಿದ್ದರು. ಮಿಥಿಲೆಯ ಕರ್ನಾಟರ ಬಗ್ಗೆ ಲೇಖನವೊಂದನ್ನು ಪ್ರಕಟಿಸಿರುವ ಆರ್. ಕೆ.ಚೌಧುರಿ ಎಂಬುವರ ಪ್ರಕಾರ (Annals of the Bhandarkar Oriental Research Institute, Vol. XXXV, pp. 91 – 121)ರತ್ನದೇವನ ವಂಶಸ್ಥರೇ 'ಕರ್ಣ' ಕಾಯಸ್ಥರು. ಕಾಯಸ್ಥರೂ ಕೂಡ ಬ್ರಾಹ್ಮಣರಂತೆ 'ಪಂಜಿ'ಗಳನ್ನು (Family records) ಉಳಿಸಿಕೊಂಡು ಬಂದಿದ್ದಾರೆ. ಪಂಜಿಗಳನ್ನು ನೋಡಿ ವಿವಾಹಗಳನ್ನು ನಿರ್ಧರಿಸುವ 'ಪಂಜಿಯಾರ್'ಗಳು[3] ಕಾಯಸ್ಥರಿಗೂ ಉಂಟು. ಕಾಯಸ್ಥರು ಜನಿವಾರ ಧರಿಸದಿದ್ದರೂ ಸಾಮಾಜಿಕವಾಗಿ ಬ್ರಾಹ್ಮಣರ ನಂತರದ ಸ್ಥಾನ ಅವರದು. ಅವರು ವರ್ಷದಲ್ಲಿ ಮಾಡುವ ವಿಶೇಷ ಪೂಜೆ "ದವತ್‌ಪೂಜಾ". ಅಂದು ಅವರು ಲೇಖನಿ, ಮಸಿಗಳನ್ನು ಪೂಜಿಸುತ್ತಾರೆಂಬುದು ಅರ್ಥಪೂರ್ಣವಾಗಿದೆ. (ನೋಡಿ, ಕನ್ನಡ. ದೌತಿ=ಬರೆಯುವ ಮಸಿ ಇರುವ ಕುಡಿಕೆ.)

ನಾನ್ಯದೇವನ ಜೊತೆಗೆ ಬಂದ ಶ್ರೀಧರದಾಸ ಎಂಬ ಕರಣ ಅಧಿಕಾರಿಯ ವಂಶದವರು ಇಂದಿಗೂ ಬಿಹಾರದ ಬೈರಿಯ ಎಂಬ ಊರಲ್ಲಿದ್ದಾರೆ. ಮಿಥಿಲೆಯ ಆ ಕರ್ನಾಟ ಕಾಯಸ್ಥರು ತಮ್ಮದು "ನೌರಂಗ ಬಲಿ ಮೂಲ" ಎಂದು ಹೇಳುತ್ತಾರೆ. (ಗಮನಿಸಿ – ಕನ್ನಡ. ಬಳಿ – ವಂಶ.) ಮೇಲೆ ಹೇಳಿದ ಶ್ರೀಧರದಾಸನು "ಸದುಕ್ತಿ ಕರ್ಣಾಮೃತ" ಎಂಬ ಸಂಸ್ಕೃತ ಕೃತಿಯ ಕರ್ತೃ.

ನೆವಾರಿಗಳು ಕಾಠಮಾಂಡೊ ಕಣಿವೆ ಪ್ರದೇಶದ ಪ್ರಮುಖ ಜನಾಂಗ. ಭಕ್ತಪುರ ಇವರ ಕೇಂದ್ರ ಇವರು ಆಭೀರ, ಕಿರಾತ, ಲಿಚ್ಛವಿ, ವಿಷಯ ಠಾಕೂರಿ, ಕರ್ನಾಟ ಇತ್ಯಾದಿ ಬುಡಕಟ್ಟು ಗುಂಪುಗಳಿಗೆ (ethnic groups) ಸೇರಿದವರು. "ಪ್ರಧಾನ್" ಎಂದೂ ಇವರನ್ನು ಕರೆಯುತ್ತಾರೆ. ಇವರಲ್ಲಿ ಇಪ್ಪತ್ತಾರು ಉಪಗುಂಪುಗಳಿವೆ ("ಜಾತ್") – ಬ್ರಾಹ್ಮಣ, ಶ್ರೇಷ್ಠಿ, ಉಧಸ್, ಮರ್ದಿನ್, ತಾಮ್ರಕಾರ್, ಜಯ್ಯ, ಕುರ್ಮ, ನೌ, ಕೌ, ಗಥು, ತೀಪು, ಪೂರ್ಣ್, ಮಹಿಮ್, ಬಲಮ್‌ಚಮ್‌ಇವು ಅವುಗಳಲ್ಲಿ ಕೆಲವು. ನೆವಾರಿ ಭಾಷೆಯನ್ನು ಮನೆಯಲ್ಲಿ, ಹೊರಗಡೆ ನೇಪಾಲಿ ಭಾಷೆಯನ್ನು ಮಾತನಾಡುತ್ತಾರೆ. ನೇಪಾಳಿಯು ಇಂಡೋ ಆರ್ಯನ್‌ವರ್ಗದ ಭಾಷೆಯಾದರೆ ನೆವಾರಿಯು ಟಿಬೆಟೊ ಬರ್ಮನ್‌ವರ್ಗಕ್ಕೆ ಸೇರಿದ ಭಾಷೆ. ಮೈಥಿಲಿ ಬ್ರಾಹ್ಮಣರಂತೆ ಕಾಯಸ್ಥರಂತೆ ಒಬ್ಬ ವ್ಯಕ್ತಿ ತನ್ನ ತಂದೆ ತಾಯಿಗಳ ಕಡೆಯಿಂದ ಹಿಂದಿನ ಏಳು ತಲೆಮಾರುಗಳವರೆಗೆ ಸಂಬಂಧಿಗಳಾಗಿರುವವರನ್ನು ಮದುವೆಯಾಗುವಂತಿಲ್ಲ. ಹೆಣ್ಣನ್ನು ಗಂಡು ಅಪಹರಿಸಿ ಮದುವೆ ಮಾಡಿಕೊಳ್ಳಬೇಕು ಎಂಬ ಪದ್ಧತಿಯಿತ್ತು.[4] ಅವರಲ್ಲಿ ಏಕಪತ್ನಿ ಪದ್ಧತಿಯಿದೆ. ಹುಡುಗಿ ಚಿಕ್ಕವಳಾಗಿದ್ದಾಗಲೇ ಅವಳನ್ನು ಬಿಲ್ವ ಫಲಕ್ಕೆ ಕೊಟ್ಟು ಮದುವೆ ಮಾಡುವುದರಿಂದ ಮುಂದೆ ಅವಳ ಗಂಡ ಸತ್ತರೂ ಅವಳು ನಿತ್ಯ ಮುತ್ತೈದೆಯಾಗಿ ಉಳಿಯುತ್ತಾಳೆ (ಬಿಲ್ವ ಫಲವು 'ಶ್ರವಣ ಕುಮಾರ'ನ ಸಂಕೇತವಂತೆ!). ಕುಂಕುಮ, ಬಳೆಗಳು ಮುತ್ತೈದೆ ಲಕ್ಷಣ. ಶವವನ್ನು ದಹನ ಮಾಡುತ್ತಾರೆ. ಅವರಲ್ಲಿ ವ್ಯವಸಾಯ ಉಂಟು, ವ್ಯಾಪಾರವೂ ಉಂಟು. ಅವರ ಪುರೋಹಿತರು ನೇಪಾಳಿ ಬ್ರಾಹ್ಮಣರು. ಕುಂಭ ಕಲೆ, ಮರ ಲೋಹಗಳ ಕೆತ್ತನೆ ಕಲೆ, ಎರಕ ಕಲೆ ಇವುಗಳಲ್ಲಿ ಅದ್ವಿತೀಯರು. ಸಿಕ್ಕಿಂ ನೇವಾರಿಗಳಲ್ಲಿ ದೇವಬ್ರಾಹ್ಮಣ, ಶ್ರೇಷ್ಠ, ಜಯವೂ, ಮಾಲಿ, ಪುಲು, ರಣಜಿತ್‌ಕರ್, ಸಲ್ಮಿ,

ಬಲಮಿ, ಭಾ, ಕಸ್ಸೈ, ಕುಸ್ತೆ, ಪೊರೆ, ಜ್ಯಾಮೆ, ಹರ – ಹುರು ಎಂಬ ಜಾತಿಗಳಿವೆ. ನೆವಾರಿಗಳು ಹಿಂದೂಗಳಾದರೂ ಅವರಲ್ಲಿ ಕೆಲವರು ಬೌದ್ಧರೂ ಉಂಟು.

ನೆವಾರಿಗಳು ಶೈವರು ಹಾಗೂ ಶಾಕ್ತರು. "ಕರ್ನಾಟ" ವಂಶದ ನೆವಾರಿ ಜನಾಂಗದ ಶ್ರೀದೇವ್ ಬೈದ್ಯರ ಕುಲದೇವತೆ "ಶಕ್ತಿ" ಅಥವಾ "ಕಾಳಿ"ಯೇ. ಕರ್ನಾಟಕದಿಂದ ಹೋದ "ಕರ್ನಾಟ" ವಂಶದ ನಾನ್ಯದೇವ ಮತ್ತು ಅವನ ಮುಂದಿನ ರಾಜರು ಹಾಗೂ ಇತರ ವರ್ಗಗಳು ಭಕ್ತಪುರ ಪ್ರದೇಶದ ನಾವಾರಿಗಳ ಜೊತೆ ಸಂಪೂರ್ಣವಾಗಿ ಗುರುತಿಸಿಕೊಂಡರು. ಆ ಕಾರಣವೇ ನೆವಾರಿಗಳ ಒಂದು ವರ್ಗವು ಇಂದಿಗೂ "ಕರ್ನಾಟ"ರೆಂದೇ ಕರೆದುಕೊಳ್ಳುತ್ತಾರೆ ಎಂಬ ಊಹೆಯನ್ನು ಮಾಡಲವಕಾಶವಿದೆ. ಮಲ್ಲರೂ ಕೂಡ ನೆವಾರಿಗಳೇ. "ಕುಮಾರಿ"ಯಾಗಿ ಆಯ್ಕೆಯಾಗುವ ಹುಡುಗಿ ನೆವಾರಿಗಳಲ್ಲಿ ಶಾಕ್ಯ ಕುಲದ ಬೌದ್ಧ ಧರ್ಮಕ್ಕೆ ಸೇರಿದವಳಾಗಿರಬೇಕು.

ನೇಪಾಳದ ಚರಿತ್ರೆಯಲ್ಲಿ ನಾನ್ಯದೇವನು ಕರ್ನಾಟಕದಿಂದ "Sāka – Sahkāla" ಎಂಬ ಶಕೆಯನ್ನು "Māju" ಮತ್ತು "Swékhā" ಎಂಬ ಎರಡು ದೇವತೆಗಳನ್ನೂ ತಂದನೆಂದು ಬರೆಯಲಾಗಿದೆ.[5] ಆ ಶಕೆ ಮತ್ತು ದೇವತೆಗಳನ್ನು ಗುರುತಿಸುವುದು ಕಷ್ಟವಾಗಿದೆ. ಅವನ ಸೈನ್ಯದ ಜೊತೆ ಬಂದ Nāyéra ದೇಶದ "ಬ್ರಹ್ಮಪುತ್ರ – ಛೇತ್ರಿ"ಯ ಕುಲದ ಸೈನಿಕರು ನೇಪಾಳದ ನೇವಾರರೇ ಎಂದು ಕೆಲವೆಡೆ ಬರೆದಿದೆ. ನೇವಾರರು ಮೂಲತಃ ನೇಪಾಳ ದೇಶದವರೆಂಬುದನ್ನಾಗಲೇ ನೋಡಿದ್ದೇವೆ.

ನೇಪಾಳದ ಬೌದ್ಧಧರ್ಮವು ತಾಂತ್ರಿಕಾಚರಣೆಗಳ ಮಹಾಯಾನ ಪಂಥ. ಅದಕ್ಕೆ ವಜ್ರಯಾನವೆಂದೇ ಹೆಸರು. ಆ ವಜ್ರಯಾನ ಬೌದ್ಧದ ಗುರುಗಳನ್ನು "ಬಜ್ರಾಚಾರ್ಯ"ರೆಂದು ಕರೆಯುತ್ತಾರೆ.

ಧನಗಾರ್, ಒರೋನ್, ಕುರುಖ್ (Kurukh) ಎಂಬ ನಾಮಾಂತರಗಳಿರುವ ಜನಾಂಗದವರು ಭಾರತದ ಹಲವೆಡೆ ವಾಸವಾಗಿದ್ದಾರೆ. ಬಿಹಾರ, ಬಂಗಾಳಗಳಲ್ಲಿಯೂ ಗಡಿಯಾಚೆ ನೇಪಾಳದಲ್ಲೂ ಇದ್ದಾರೆ. ಆ ಜನರ ಸಾಂಪ್ರದಾಯಿಕ ನಂಬಿಕೆ ಪ್ರಕಾರ ಅವರು ಮೂಲತಃ ಕರ್ನಾಟಕದಿಂದ ಬಂದವರು.[6] ದಕ್ಷಿಣದಿಂದ ತಾವು ಬಂದವರೆಂದು ಬಿಹಾರದ ಒರೋನರು ನಂಬುತ್ತಾರೆ.[7]

ದಕ್ಷಿಣ ನೇಪಾಳದ ತಿರೈನಲ್ಲಿ, ಜನಕಪುರ ಪ್ರದೇಶದಲ್ಲಿನ ಧನಗಾರರ ಸಂಖ್ಯೆ ಸುಮಾರು ಒಂಬತ್ತು ಸಾವಿರ. ಅವರು ಬಹುತೇಕ ಕೃಷಿಕಾರ್ಮಿಕರು ಅಥವಾ ದನ ಸಾಕುವವರು. ಬಡವರಾದ ಇವರು ಮೇಲ್ಜಾತಿ ಹಿಂದೂಗಳ ಕಣ್ಣಲ್ಲಿ ಅಸ್ಪೃಶ್ಯರು. ಊರಿನ ಮುಖ್ಯಸ್ಥರನ್ನು "Maijan" ಎನ್ನುತ್ತಾರೆ.[8]

ಮದುವೆಯಾಗಲಿರುವ ಕನ್ಯೆಯನ್ನು "ಹುಡುಗಿ" ಎನ್ನುತ್ತಾರೆ (ನೋಡಿ – ಕನ್ನಡದ 'ಹುಡುಗಿ'). ಮದುವೆ ವ್ಯವಸ್ಥೆಯಾಗಿದ್ದರೂ ಮದುವೆಗೆ ಮುನ್ನ ಮರೆಯಲ್ಲಿ ಅವಿತುಕೊಂಡ ಹುಡುಗಿಯನ್ನು ಹುಡುಗ ಹುಡುಕಬೇಕು (ಈ ಪದ್ಧತಿ ಕರ್ನಾಟಕದ ಬಣಜಾರ್ಅಥವಾ ಲಂಬಾಣಿ ಜನಾಂಗದವರಲ್ಲೂ ಉಂಟು.)"ತೆರ" ಪದ್ಧತಿ ಉಂಟು. ತಂದೆ ತಾಯಿ ಮನೆಯಲ್ಲಿ ಮದುವೆ. ಹುಡುಗಿಗೆ ಅವಳ ತಂದೆ ತಾಯಂದಿರಿಂದ ಕುಡುಗೋಲು ಉಡುಗೋರೆಯಾಗಿ ದೊರಕುತ್ತದೆ. ಅವರ ದೊಡ್ಡ ಹಬ್ಬದ ಹೆಸರು "ಕರ್ಮಧರ್ಮ" (God of Wisdom. 'ಕರ್ಮ' ಒಂದು ಬಗೆಯ ಮರದ ಹೆಸರೂ ಹೌದು.)

ಧನಗಾರ್(ಧನ್ವರ್) ಅಥವಾ ಓರೋನ್‌ಜನರ ಬುಡಕಟ್ಟುಗಳು (clans)ಬರ, ಭಕ್ಲ, ಎಕ್ಕ, ಕಜುರ್, ಬೇಕ್ಸ್, ಲಕ್ರ, ಮಿಂಗ್, ತಿಗ, ತಿರಿಕ್ಯ, ಟೋಪು. ಅಸ್ಸಾಮಿ ಒರೋನ್‌ಜನ ತಮ್ಮನ್ನು "ಕುರುಖ್" ಎಂದು ಕರೆದುಕೊಳ್ಳುತ್ತಾರೆ. ತ್ರಿಪುರದಲ್ಲಿ ಒರೋನ್‌ಎಂಬುದು ಒರಂಗ್, ಉರೋನ್‌ಆಗುತ್ತದೆ. ಇವರಲ್ಲಿ ಕೆಲವರ ಮನೆಯ ಭಾಷೆ ಹಿಂದಿ ಅಥವಾ ಮೈಥಿಲಿ. ಮಹಾರಾಷ್ಟ್ರದ ಒರೋನರ ಮಾತೃಭಾಷೆ "ಸದ್ರಿ" (Sadri). ಬಿಹಾರದ ಧನಗಾರರ ವೃತ್ತಿ ಬೊಂಬು ಸಾಮಾನು ತಯಾರಿಸುವುದು.

ಬಿಹಾರದ ಒರೋನ್‌ಮಕ್ಕಳಿಗೆ ಅವು ಹುಟ್ಟಿದ ದಿನದ ಹೆಸರನ್ನೇ ಇಡುತ್ತಾರೆ. ಸೊಮ್ರ, ಮಂಗ್ರ, ಬುಧುವ, ಬಿಪೈಯ ('ಬೃಹಸ್ಪತಿ'ಗೆ ಸಮಾನ), ಸುಕ್ರ, ಸನಿಚರ, ಎತ್ವಾರಿ (ಆದಿತ್ಯವಾರ) ಹೆಣ ಸುಟ್ಟ ಕೈ, ತೊಡೆ ಭಾಗಗಳಿಂದ ಐದು ಎಲುಬು ತುಂಡುಗಳನ್ನು ಮಡಕೆಯಲ್ಲಿ

ಸಂಗ್ರಹಿಸಿ, ಉಳಿದ ಬೂದಿಯನ್ನು ನದಿಗೆ ಚೆಲ್ಲಿ ಮಡಕೆಯನ್ನು ಮನೆಗೆ ತರುತ್ತಾರೆ. ಹನ್ನೆರಡನೇ ದಿನ ನಡೆಯುವ ಸಮಾರಾಧನೆಯೇ "ಭೋಜ್" : ಅಂದು ಎಲ್ಲರೂ ಕುಡಿಯುತ್ತಾರೆ.

ಅವರಲ್ಲಿ 'ತಿರ್ಕ್ಕಿ', 'ಎಕ್ಕ' ಎಂಬ ಬಣಗಳು ಇದ್ದು, 'ತಿರ್ಕಿ'ಯವರು ಚಿಕ್ಕ ಇಲಿಮರಿಗಳ, "ಎಕ್ಕ"ದವರು ಆಮೆಗಳ ವರ್ಗಕ್ಕೆ ಸೇರಿದವರಾದ್ದರಿಂದ ಆಯಾ ಪ್ರಾಣಿಗಳನ್ನು ಅವರು ಕೊಲ್ಲರು, ತಿನ್ನರು.

ಮಹಾರಾಷ್ಟ್ರದ ಧನಗಾರರು ಮರಾಠಿಯು ಮನೆ ಮಾತಾದರೂ ಕನ್ನಡವನ್ನೂ ಬಲ್ಲರು. ಇವರು ಕುರಿ, ಗೋ ಸಾಕುತ್ತಾರೆ. ಇವರು ಸಾಕುವ "ಧನಗಾರ್‌ಮ್ಹಸಿ", "ಧನಗಾರ್‌ಗಾಯಿ" ಪ್ರಸಿದ್ಧ ( ಮ್ಹಸಿ=ಮಹಿಷಿ, ಎಮ್ಮೆ ; ಗಾಯಿ=ಗೋವು).

ಬಂಗಾಳ, ಮಧ್ಯಪ್ರದೇಶಗಳಲ್ಲಿ ಧನಗಾರರಿಗೆ ಒರಾಓ, ಉರಾಓ, ಉರಂಗ್, ಔರಂಗ್‌ಎಂಬ ನಾಮಾಂತರಗಳುಂಟು. ಕೆರೆ ಬಾವಿ ಅಗೆವ ಕೆಲಸ ಅವರದು.

ಒರೋನ್‌ಅಥವಾ ಕುರುಖ್(ಧನಗಾರ್) ಜನ ಈ ದಿನ ಬೇರೆ ಬೇರೆ ಭಾಷೆಗಳನ್ನಾಡುತ್ತಿದ್ದರೆ ಅದಕ್ಕೆ ಕಾರಣ ಅವರು ಬಹುಹಿಂದೆಯೇ ಹೋಗಿ ನೆಲಸಿದ ಆಯಾ ಪ್ರಾಂತದ ಪ್ರಬಲ ಭಾಷೆ. ಅವರ ನಿಜವಾದ ಮೂಲ ಭಾಷೆಯು ಒಂದು ದ್ರಾವಿಡ ಭಾಷೆ. ಆ ಕುರುಖ್‌ಭಾಷೆಯನ್ನು ಭಾಷಾ ವಿಜ್ಞಾನಿಗಳು ಉತ್ತರ ದ್ರಾವಿಡ ಭಾಷೆಯೆಂದು ಗುರುತಿಸಿದ್ದಾರೆ. ಉದಾಹರಣೆಗೆ, ಕನ್ನಡವು ದಕ್ಷಿಣ ದ್ರಾವಿಡವಾದರೆ ತೆಲುಗು ಮಧ್ಯದ್ರಾವಿಡ ಭಾಷೆ. ದ್ರಾವಿಡ ಭಾಷಾವಂಶದ ಇಪ್ಪತ್ತಕ್ಕೆ ಮೇಲ್ಪಟ್ಟು ಭಾಷೆಗಳಲ್ಲಿ ಪಶ್ಚಿಮ ಪಾಕಿಸ್ತಾನದಲ್ಲಿ ಆಡುತ್ತಿರುವ ಭಾಷೆಯಾದ ಬ್ರಾಹೂಇ, ನೇಪಾಳ ಬಿಹಾರ ಉತ್ತರ ಪ್ರದೇಶದ ಭಾಗಗಳಲ್ಲಿ ಜನರಾಡುವ ಕುರುಖ್‌ಮತ್ತು ಮಾಲ್ತೊ ಈ ಮೂರು ಭಾಷೆಗಳೇ ಉತ್ತರ ದ್ರಾವಿಡ ಭಾಷೆಗಳು.[9]ಇವುಗಳಲ್ಲಿ ಭಾಷಿಕವಾಗಿ ಕುರುಖ್‌ಮಾಲ್ತೋಗಳು ಹೆಚ್ಚು ಸಮೀಪದವು.

ಕುರುಖ್‌ಜನರು ಮೂಲತಃ ದಕ್ಷಿಣ ಭಾರತದವರೆಂದು ಕರ್ನಾಟಕದವರೆಂದು ಹೇಳಲು ಅವರು ಉಳಿಸಿಕೊಂಡು ಬಂದಿರುವ ಸಾಂಪ್ರಾದಾಯಿಕ ನಂಬಿಕೆ ಕಾರಣ. ಮತ್ತು ಅಂತಹ ನಂಬಿಕೆಗಳನ್ನು ಸಾರಾಸಗಟಾಗಿ ತಿರಸ್ಕರಿಸಲಾಗದು.

ಕನ್ನಡ, ಕುರುಖ್(ಧನಗಾರ್) ಭಾಷೆಗಳ ಕೆಲವು ಹೋಲಿಕೆಗಳು ಇಂತಿವೆ:

| | **ಕನ್ನಡ** | **ಕುರುಖ್** |
|---|---|---|
| 'one' | ಒಂದು, ಒಬ್ಬ | ಒಂಟಿ, ಒರ್ಟ್ |
| 'two' | ಎರಡು, ಇಬ್ಬರು | ಎಂಡ್, ಇರ್ಬ್ |
| 'three' | ಮೂರು, ಮೂವರು | ಮೂಂಡ್, ನುಬ್ |
| 'four' | ನಾಲ್ಕು, ನಾಲ್ವರು | ನಾಖ್, ನಿಬ್ |
| 'I' | ನಾನು | ಏನ್ |
| 'you' | ನೀನು | ನೀನ್ |
| 'they' | ಅವರು | ಆರ್ |
| 'eye' | ಕಣ್ಣು | ಖಣ್ |

| | | |
|---|---|---|
| 'mouth' | ಬಾಯಿ | ಬಾಇ |
| 'teeth' | (ಪ)ಹಲ್ಲು | ಪಲ್ |
| 'man' | ಆಳ್ | ಆಲ್ |
| 'men' | ಆಳುಗಳು | ಆಲರ್ |
| 'woman' | ಹೆಂಗಸು | ಆಲೀ |
| 'cat' | ಬೆಕ್ಕು | ಬೆರ್ಖಾ |
| 'come' | ಬಾ, ಬರು | ಬರಾ |
| 'ear' | ಕಿವಿ | ಖೆಬ್ದಾ |

ಕನ್ನಡಕ್ಕೂ ಕುರುಖ್‌ಭಾಷೆಗೂ ಇರುವ ಹೋಲಿಕೆಯನ್ನು ಕುತೂಹಲಕ್ಕೆ ಮಾತ್ರ ಕೊಟ್ಟಿದೆ. ಅಂತಹುದೇ ಅಥವಾ ಸಾಮ್ಯ ತಮಿಳು, ತೆಲುಗುಗಳಿಗೂ ಉಂಟು. ಕಾರಣ, ಅವೆಲ್ಲ ದ್ರಾವಿಡ ಭಾಷೆಗಳು.[10]

ಮೇಲೆ ಸೂಚಿಸಿದಂತೆ ಕರ್ನಾಟಕದ ಭಾಷೆಯೂ ನೇಪಾಳದ ಕುರುಖ್‌ಭಾಷೆಯೂ ಉತ್ತರ ದ್ರಾವಿಡ ಭಾಷೆಯ ಸಮಾನ ವೈಲಕ್ಷಣ್ಯಗಳನ್ನು ಹೊಂದಿರುವುದು ಖಂಡಿತ ಉಪೇಕ್ಷಣೀಯವಾದುದಲ್ಲ.[11] ಕೊರಗರ ನೆರೆಯ ಭಾಷೆಯಾದ ತುಳು ದ್ರಾವಿಡ ಭಾಷೆಯಾದರೂ ಅದರಲ್ಲಿ ಮಧ್ಯ ದ್ರಾವಿಡದ ಲಕ್ಷಣಗಳಿರುವುದು ಡಾ. ಪಿ.ಎಸ್. ಸುಬ್ರಹ್ಮಣ್ಯಂ ಗುರುತಿಸಿದ್ದಾರೆ.

ಬುಟ್ಟಿ ಹೆಣೆಯುವ ವೃತ್ತಿ ಕೊರಗರು ಯಜಮಾನರ ಕೈಕೆಳಗೆ ಆಳುಗಳಾಗಿ ದುಡಿಯುವ ತೀರ ಕೇಳವರ್ಗದ ಅಸ್ಪೃಶ್ಯರು. ಅವರು ಸಾಮಾಜಿಕವಾಗಿ ಹೊಲೆಯರಿಗಿಂತ ಕೆಳಗೆ 'ಕಾಪಟ ಕೊರಗ'ರು ಚಿಂದಿಬಟ್ಟೆ ಧರಿಸಿದರೆ 'ಸೊಪ್ಪು ಕೊರಗರು' ಹೆಸರೇ ಹೇಳುವಂತೆ ಮರದ ಸೊಪ್ಪು ಸುತ್ತಿಕೊಳ್ಳುವವರು. ವಾರಗಳಲ್ಲಿ ಭಾನುವಾರ ಅವರಿಗೆ ಶ್ರೇಷ್ಠ. ಮತ್ತು ಅವರು ಸೂರ್ಯಾರಾಧಕರು. ಅವರ ಮದುವೆಗಳು ನಡೆಯುವುದು ಭಾನುವಾರ. ಮೊದಲು ಹೆಣಗಳನ್ನು ದಹನ ಮಾಡುತ್ತಿದ್ದವರು ಈಗ ಹೂಳುತ್ತಾರೆ. ಅವರ ಸಾಂಸ್ಕೃತಿಕ ನಾಯಕನಾದ 'ಕೊರಗ ತಣಿಯ'ನು ಅವರ ದೇವರು. ಮಕ್ಕಳು ಹುಟ್ಟುವ ದಿನವನ್ನು ಗಮನಿಸಿ ಹೆಸರಿಡುತ್ತಾರೆ. ಗಂಡು (ಹೆಣ್ಣು)ಮಕ್ಕಳ ಹೆಸರುಗಳು ಹೀಗಿರುತ್ತವೆ: ಐತ (ಐತು), ತೋಮ (ತೋಮು), ಅಂಗಾರೆ (ಅಂಗಾರು), ಬೂದ (ಬೂದು), ಗುರುವ (ಗುರುಬಿ), ತುಕ್ರ (ತುಕ್ರಿ), ತನಿಯ (ತನಿಯಾರು). ಹುಳ, ಪ್ರಾಣಿಗಳ ಹೆಸರುಗಳನ್ನು, ಕರಿಯ ಕಾಳ ಇತ್ಯಾದಿ ಹೆಸರುಗಳನ್ನೂ ಇಡುವುದುಂಟು.[12]

ಗಮನಿಸಬೇಕಾದ ಎರಡು ಅಂಶಗಳೆಂದರೆ ಕುರುಖ್‌ಜನರಲ್ಲಿರುವಂತೆಯೇ ಕೊರಗರಗಳಲ್ಲಿಯೂ ಮಕ್ಕಳು ಹುಟ್ಟಿದ ದಿನಗಳ ಹೆಸರಿಡುವುದು; ಶವಸಂಸ್ಕಾರದ ಬಳಿಕ ಹದಿಮೂರನೇ ದಿನ ನಡೆಯುವ ಸಾಮೂಹಿಕ ಸಮಾರಾಧನೆಗೆ ಒಂದೇ ಹೆಸರಿರುವುದು (ಕಾರುಖ್: 'ಭೋಜ್', ಕೊರಗ 'ಬೊಜ್ಜ').

'ಕುರುಖ್' ಮತ್ತು 'ಕೊರಗ' ಎರಡೂ ಪದಗಳ ಸ್ವರ ವ್ಯಂಜನಗಳ ರಚನೆ ಗಮನಿಸಿ: ಒಂದನ್ನು ಇನ್ನೊಂದರಿಂದ ಸುಲಭವಾಗಿ ನಿಷ್ಪನ್ನ ಮಾಡಬಹುದು. "ಕುರುಖ್" ಜನ ತಾವು ಕರ್ನಾಟಕದವರೆಂದು ಹೇಳಿಕೊಳ್ಳುವುದು ಗಮನಾರ್ಹ. ಕುರುಖ್‌ಮತ್ತು ಕೊರಗಗಳೆರಡೂ ಉತ್ತರ ದ್ರಾವಿಡ ಭಾಷಾ ಲಕ್ಷಣಗಳನ್ನು ಹೊಂದಿರುವುದನ್ನೂ ಗಮನಿಸಬೇಕು. ಕುರುಖ್‌ಜನ ಉತ್ತರದಿಂದ ದಕ್ಷಿಣಕ್ಕೆ ಬಂದು ಕೊರಗರಾದರೋ ಕೊರಗರೇ ಉತ್ತರಕ್ಕೆ ಹೋಗಿ ಕುರುಖ್‌ಜನ ಆದರೋ ಹೇಳುವುದು ಕಷ್ಟವಾದರೂ ಎರಡೂ ಜನಾಂಗದವರಿಗೆ ಜಾನಾಂಗಿಕ, ಭಾಷಿಕ ಸಂಬಂಧಗಳ ಸುಳುಹುಗಳಿರುವುದು ಕಾಣುತ್ತದೆ. ಈ ಬಗ್ಗೆ ಹೆಚ್ಚಿನ ಕೆಲಸ ನಡೆಯದೆ ಏನೊ ಹೇಳುವಂತಿಲ್ಲ. ಕೊರಗರು ತಾವು ಹಿಂದೆ ಹಬಾಷಿಕ ಎಂಬ ಕೊರಗ ರಾಜನ ಸೈನಿಕರಾಗಿದ್ದುದನ್ನು ಯುದ್ಧಗಳಲ್ಲಿ ಭಾಗವಹಿಸಿದ್ದನ್ನು ಹೇಳಿಕೊಳ್ಳುತ್ತಾರೆ.

ಮಹಾರಾಷ್ಟ್ರದ ಧನಗಾರರು ಶಿವಾಜಿ ಸೈನ್ಯದಲ್ಲಿ ಸೈನಿಕರಾಗಿದ್ದರು. ಇದೆಲ್ಲವೂ ಅವರ ಇತಿಹಾಸದ ಬಗ್ಗೆ, ಅವರ ಸಂಚಲನದ ಬಗ್ಗೆ ಚಿಂತಿಸಲು ಅವಕಾಶ ಕೊಡುವ ಸೂಚನೆಗಳು. ಹೆಚ್ಚಿನ ಸಂಶೋಧನೆಗೆ ಅವಕಾಶವಿರುವುಂತಿದೆಯೆಂಬ ಮಾತಿಗಿಂತ ಈ ವಿಷಯದಲ್ಲಿ ಸದ್ಯಕ್ಕೆ ಏನೂ ಹೇಳಲಾರೆ.

[1] ಉಪಾಧ್ಯಾಯ - ಪ್ರಾಕೃತ. ಉವಜ್ಝ - ಓಝು - ಮೈಥಿಲೀ ಬ್ರಾಹ್ಮಣರ ಹೆಸರುಗಳ ಕೊನೆಯಲ್ಲಿ “ - ಝು” ಸಾಮಾನ್ಯ.

[2] Ramanatha Jha : Vidyapathi, P. 42 – ”… With the advent of the Karnatas, music and dance received a great impetus in Mithila…” P.70 – “At a time when Sanskrit was the language of the cultured and in the land of Mithila where to write in any language other than Sanskrit was almost a sacrilege, he (ವಿದ್ಯಾಪತಿ)had the courage and self – confidence to write in the language actually spoken by the people of the land.”

[3] ಒಂದು ಗಂಡು – ಹೆಣ್ಣು ಜೋಡಿಯು ಮದುವೆಯಾಗಬೇಕಾದರೆ ಅವರು ಕನಿಷ್ಠ ಹಿಂದಿನ ಏಳು ತಲೆಮಾರುಗಳಲ್ಲಿ ಬಂಧುಗಳಾಗಿರಕೂಡದು. ಅದನ್ನು ಖಚಿತಪಡಿಸಿ ಹೇಳುವ ದಾಖಲೆಯೇ “ಪಂಜಿ”, ಅವುಗಳನ್ನು ಓದುವವರೇ ‘ಪಂಜಿಯಾರ್’. ಅದೇ ದರ್ಭಾಂಗ ಜಿಲ್ಲೆಯಲ್ಲಿ “ಬಂಟರ್” ಹೆಸರಿನ ಜನರಿದ್ದಾರೆ. ಅವರು ನೇಪಾಳದಿಂದ ಬಂದವರೆಂಬ ಊಹೆಯಿದ್ದರೂ ಮುಖಚರ್ಯೆ ನೇಪಾಳಿಯರನ್ನು ಹೋಲುವುದಿಲ್ಲ. ಎರಡು ಒಣಕಟ್ಟಿಗೆ ತುಂಡುಗಳನ್ನು ಮೂರು ಬಾರಿ ಉಜ್ಜಿದಾಗಲೂ ಬೆಂಕಿ ಬಾರದಿದ್ದರೆ ಗೊತ್ತಾದ ಮದುವೆಗಳು ರದ್ದಾಗುತ್ತವೆ. ತಮ್ಮನು ಅಣ್ಣನ ವಿಧೆಯನ್ನು ಮದುವೆಯಾಗಲು ಅವಕಾಶವಿದೆ. ಈ ‘ಬಂಟರ್’ ಯಾರು? ಕರ್ನಾಟಕದ ಬಂಟರು ದಕ್ಷಿಣ ಕನ್ನಡ ಜಿಲ್ಲೆಯ ಪ್ರಬಲ ಜನಾಂಗವೆಂಬುದು ಪ್ರಸಿದ್ಧ. (“ – ಆರ್” ಎಂಬುದು ದ್ರಾವಿಡ ಭಾಷೆಗಳ ಪುಂಸ್ತ್ರೀ ಬಹುವಚನ ಪ್ರತ್ಯಯವನ್ನು ನನಪಿಸುತ್ತದೆ.)

[4] ‘ವಿವಾಹ’ ಎಂದರೆ ಗಂಡು ಹೆಣ್ಣನ್ನು ಅಪಹರಿಸಿ ಹೊತ್ತೊಯ್ಯುವುದೆಂದೇ ಅರ್ಥ (ವಹ್=ಹೊರುವುದು; ವಾಹನ = a carriage). ಕರ್ನಾಟಕದ ಲಿಂಗಾಯತರಲ್ಲಿ, ಮದುವೆ ಹಿಂದಿನ ದಿನ ಹೆಣ್ಣಿನ ಕಡೆಯವರಿಗೂ ಗಂಡಿನ ಕಡೆಯವರಿಗೂ ಹೊಡೆದಾಟದ ತಮಾಷೆ ಯುದ್ಧ (ಜಗಳ) ಆಗುವುದು ಹಿಂದಿನ ಪದ್ಧತಿಯೊಂದರ ಪಳೆಯುಳಿಕೆ.

[5] Daniel Wright : of Nepal, p.167.

[6]G.A. Grierson : Linguistic Survey of India, IV, p. 406 “according to their own traditions the Kurukh tribe originally lived in the Carnatic…..”

[7] Bihar through the Ages (Ed: R.R. Diwakar), p.88. ಬಿಹಾರದಲ್ಲಿ ಹೆಂಡ ಇಳಿಸುವವರನ್ನು ‘ಕಲ್ವಾರ್’ ಎನ್ನುತ್ತಾರೆ. (ಅದೇ, ಪು. ೧೯೫) ಗಮನಿಸಿಃ ದ್ರಾವಿಡದಲ್ಲಿ (ಕನ್ನಡದಲ್ಲಿ) ಕಳ್=ಹೆಂಡ. “ವಾರ್” ಎಂಬ ಭಾಗದಲ್ಲೂ ದ್ರಾವಿಡ ಭಾಷೆಯ ಸೂಚನೆಯಿದೆ.

[8] Dor Bahadur Bista : people of Nepal, p. 146. ಇದು ಸಂಸ್ಕೃತದ ‘ಮಹಾಜನ’ ಇರಬಹುದು. ಬಿಷ್ಟ ಅವರ ಪ್ರಕಾರ ಧನಗಾರರದು ದ್ರಾವಿಡ ಭಾಷೆ.

[9] ಕನ್ನಡ, ತಮಿಳು, ಮಲಯಾಳ, ಕೊಡಗು, ಕೋತ, ತೋದ, ತುಳು, ಬಡಗ, ಕೊರಗ ಇವು ದಕ್ಷಿಣ ದ್ರಾವಿಡ ಭಾಷೆಗಳೆಂದು ತೆಲುಗು, ಕೊಂಡ, ಪೆಂಗೊ, ಮುಂಡ, ಕುಇ, ಕುವಿ, ಕೊಲಾಮಿ, ನಾಯ್ಕಿ, ಪಾರ್ಜಿ, ಗದಬ, ಒಲ್ಲಾರಿಗಳು ಮಧ್ಯದ್ರಾವಿಡವೆಂದು ಕುರುಖ್, ಮಾಲ್ತೊ, ಬ್ರಾಹೂಇಗಳನ್ನು ಉತ್ತರ ದ್ರಾವಿಡ ಭಾಷೆಗಳೆಂದು ಗುರುತಿಸಿದ್ದಾರೆ. ಇವುಗಳಲ್ಲಿ ತುಳುವು ದಕ್ಷಿಣ ದ್ರಾವಿಡವೆಂದು ಪರಿಗಣಿತವಾಗಿದ್ದರೂ ಅದರಲ್ಲಿ ಮಧ್ಯದ್ರಾವಿಡದ ಲಕ್ಷಣಗಳಿವೆ. ಕೊರಗವು ತುಳುವಿನಂತೆ ದಕ್ಷಿಣ ಕನ್ನಡದಲ್ಲಿ ಆಡುವ ಭಾಷೆಯಾಗಿದ್ದರೂ ಅದನ್ನು ಡಾ. ಡಿ.ಎನ್. ಶಂಕರಭಟ್ಟರು ಉತ್ತರ ದ್ರಾವಿಡ ಭಾಷಾ ವರ್ಗಕ್ಕೆ ಸೇರಿಸಿದ್ದಾರೆ. (The Koraga Language, p.3) ಭಾಷಿಕ ವೈಲಕ್ಷಣ್ಯಗಳಿಂದ ದಕ್ಷಿಣ, ಮಧ್ಯ. ಉತ್ತರ ಎಂದು ದ್ರಾವಿಡ ಭಾಷೆಗಳನ್ನು ವರ್ಗೀಕರಿಸಲಾಗಿದೆ.

[10] ನೀಲಗಿರಿ 'ಕುರುಬ"ರ ಉಪಭಾಷೆ ಕನ್ನಡ. ಭಾರತದ ಬೇರೆ ಕಡೆಗಳಲ್ಲೂ 'ಕುರುಬ'ರ ಭಾಷೆ ಅದೇ ಆಗಿದೆ. ಮಧ್ಯಪ್ರದೇಶದ 'ಗೋಲಾರ'ರ ಭಾಷೆ ಬಿಜಾಪುರದ ಕನ್ನಡವನ್ನು ಹೋಲುತ್ತದೆ. ನಾಗಪುರ ಪ್ರದೇಶದಲ್ಲಿ ಚಪ್ಪಲಿ ಹೊಲೆಯುವವರನ್ನು 'ಹೋಲಿಯ' ಎನ್ನುತ್ತಾರೆ. ನೀಲಗಿರಿಯ ಬಡಗ ಭಾಷೆಯಂತೂ ಕನ್ನಡದ ಉಪಭಾಷೆಯೇ G.A. Grieson: Linguistic Surey of India, IV, ಪು. ೩೬೩, ೩೮೫ ಇತ್ಯಾದಿ ಕತೆ ಪ್ರಕಾರ, 'ಗೋಲಾರ'ರು ಹೋಲಿಯ'ರು ಅಣ್ಣ - ತಮ್ಮಂದಿರು.

[11] ಈ ಬಗ್ಗೆ ಡಿ. ಎನ್. ಸಂಕರ ಭಟ್ಟ ಅವರ ಮಾತುಗಳನ್ನು ಹಾಗೇ ಉದ್ಧರಿಸುತ್ತೇನೆ - "The following are some of the conspicuous grammatical features of Koraga which clearly indicate a closer affinity for Koraga with the North Dravidian languages, Kudux ( – ಕುರುಖ್), Malto and Brahui and carry it away from the neighbouring south Dravidian languages…" ಹೀಗೆ ಹೇಳಿರುವ ಅವರು ಹಲವು ಉದಾಹರಣೆಗಳನ್ನು ನೀಡಿದ್ದಾರೆ. ಕೊರಗ ಭಾಷೆಯ ಕ್ರಿಯಾಪದಗಳ ಲಿಂಗ - ವಚನ ಸೂಚಕವು ಕುರುಖ್‌ನಲ್ಲಿರುವುದನ್ನು ಸೂಚಿಸಿ, ಏಕವಚನದಲ್ಲಿ ಸ್ತ್ರೀಲಿಂಗ ಮತ್ತು ನಪುಂಸಕಲಿಂಗ ಸೂಚಕಗಳು ಒಂದೇ ಆಗಿದ್ದು, ಬಹುವಚನವನ್ನು ಹೇಳುವಲ್ಲಿ ಸ್ತ್ರೀಲಿಂಗವು ಪುಲ್ಲಿಂಗ ಸೂಚಕವನ್ನು ಬಳಸುವುದನ್ನು ಎತ್ತಿ ಹೇಳಿದ್ದಾರೆ. (The Koraga Language, p.3)

[12] Thurston : South Indian Castes and Tribes, III;ಪುರುಷೋತ್ತಮ ಬಿಳಿಮಲೆ: ಕೊರಗರ ಸಂಸ್ಕೃತಿ -ಇಲ್ಲಿಂದ ಮಾಹಿತಿ ಸಂಗ್ರಹ.

# ಅನುಬಂಧ (೧-೨)

**ಅನುಬಂಧ – ೧ : 'ಠಾಕೂರ್', 'ತಕ್ಕರ್' (?)**

ಥಕ್ಕರ್, ಠಾಕೂರ್, ಠಕ್ಕುರ, ಠಕೋರ, ಠಕರ, ಥಕ್ರು, ಠಾಕೂರ, ಠಾಗೂರ್, ಠಕ್ರೆ ಈ ಹೆಸರುಗಳುಳ್ಳ ಜನರು ಭಾರತದಾದ್ಯಂತ ಇದ್ದಾರೆ. ಟರ್ನರ್ಅವರ ನಿಘಂಟುವಿನಲ್ಲಿ ದಾಖಲಾಗಿರುವ, ಇಂಡೋ ಆರ್ಯನ್‌ಭಾಷೆಗಳಲ್ಲಿರುವ ಆ ಹೆಸರಿನ ರೂಪಾಂತರಗಳು, ಅರ್ಥಗಳು ಹೀಗಿವೆ:

[1]

ಠಕ್ಕುರ, ತುಕುರ್, ಠಕುರ, ಠೋಕುರ್, ಠಕುರು, ಠಾಕರ್, ಠಾಕೂರ್, ಠಕುರಾಣಿ (ಸ್ತ್ರೀಲಿಂಗ), ಠಾಕುರಾಣಿ, ಠಾಕುರ, ಠಾಕುರ್, ಠಾಕೋರ್ಇವೇ ಮೊದಲಾದ ರೂಪದ ಪದಗಳು ಮರಾಠಿ, ಗುಜರಾತಿ, ಮೈಥಿಲಿ, ಭೋಜಪುರಿ ಒರಿಯ, ಬಿಹಾರಿ, ಅಸ್ಸಾಮಿ, ಬಂಗಾಳಿ, ಪ್ರಾಕೃತ ಇತ್ಯಾದಿ ಭಾಷೆಗಳಲ್ಲಿದ್ದು ರಜಪುತ, ಊರಿನ ಮುಖ್ಯಸ್ಥ, ಬ್ರಾಹ್ಮಣ, ಯಜಮಾನ, ದೇವರು, ದೇವತಾ ಮೂರ್ತಿ ಈ ಅರ್ಥಗಳಲ್ಲದೆ ಫಕೀರ, ಸೇವಕನು ಯಜಮಾನನ್ನು ಸಂಬೋಧಿಸಬೇಕಾದ ಗೌರವಪದ ಈ ಅರ್ಥಗಳೂ ಇವೆ. ಯಜಮಾನ, ಗೌರವಾರ್ಹ, ಮುಖ್ಯಸ್ಥ ಎಂಬುದು ಪ್ರಧಾನಾರ್ಥ. ಕೆಲವೆಡೆ ಅದಕ್ಕೆ ಕ್ಷೌರಿಕ, ಕಮ್ಮಾರ ಎಂಬ ಅರ್ಥದ ಬೆಳವಣಿಗೆಗಳೂ ಕಂಡುಬರುತ್ತವೆ. ಮಹಾರಾಷ್ಟ್ರದಲ್ಲಿ ಅದು ಗಿರಿಜನರ ಒಂದು ವರ್ಗಸೂಚಕ. ಈ ಪದಗಳಿಗೆ ಮೂಲವಾಗಿದ್ದ ಪದವು ಯಾವ ವರ್ಗವು ಭಾಷೆಗಳಿಗೆ ಸೇರಿದ್ದೆಂಬುದು ಸ್ಪಷ್ಟವಾಗಿಲ್ಲ.

ಮಹಾರಾಷ್ಟ್ರದ ಥಕ್ಕರ್ಅಥವಾ ಥಕರ್(ಥೊಕ್ಕರ್) ಜನ ಶಿವಾಜಿ ಕಾಲದಲ್ಲಿ ಗೂಢಚಾರರಾಗಿದ್ದರು. ಗೊಂಬೆ ಆಟ ಪ್ರದರ್ಶನ ಅವರ ಮುಖ್ಯ ವೃತ್ತಿ. ಅಲಂಕರಿಸಿದ ಎತ್ತುಗಳನ್ನು ಜೊತೆಯಲ್ಲಿಟ್ಟುಕೊಂಡು ಭಿಕ್ಷೆ ಮಾಡುತ್ತಾರೆ. ಚಿತ್ರದ ಕೆತ್ತನೆಯ ಕೆಲಸಗಳಲ್ಲಿ ಪರಿಣತರು. ಠಾಕೊರ್, ಠಕರ್ದ ಹೆಸರಿನ ಗುಜರಾತಿನ ಜನರಲ್ಲಿ ಸೋಲಂಕಿ (<ಚಾಳುಕ್ಯ), ಪರಮಾರ ಇತ್ಯಾದಿ ಒಳಪಂಗಡಗಳಿವೆ. ಗುಜರಾತಿ, ಮರಾಠಿ ಅವರ ಮನೆಮಾತು. ಲಕ್ಷ ದ್ವೀಪದ ಥಕ್ರು ಕೆಳವರ್ಗದ ಜನರ ಮುಖ್ಯನನ್ನು ಹೇಳುತ್ತದೆ. ತ್ರಿಪುರದಲ್ಲಿ ಠಾಕೂರರು

ರಜಪುತ್‌ಕ್ಷತ್ರಿಯರು; ವ್ಯವಸಾಯ ಇವರ ವೃತ್ತಿ; ಒಮ್ಮೆ ರಾಜರ ಆಸ್ಥಾನಗಳಲ್ಲಿ ಉದ್ಯೋಗಿಗಳಾಗಿದ್ದವರು. ಬಿಹಾರದ ಠಾಕೂರರೂ ರಜಪೂತರೇ. ಸಿಕ್ಕಿಮ್ಮಿನ ಠಕುರಿಗಳು ನೇಪಾಳದಿಂದ ಬಂದವರು.

ಮಹಾರಾಷ್ಟ್ರದ 'ತಕರಿ'ಗಳು ಕರ್ನಾಟಕ ಮೂಲದವರೆಂದು ಹೇಳಿಕೊಳ್ಳುತ್ತಾರೆ. 'ತಕರಿ'ಗಳು ಕಳ್ಳತನಕ್ಕೆ ಪ್ರಸಿದ್ಧರೆಂಬ ನಂಬಿಕೆಯಿದೆ (ನೋಡಿ – 'ಠಕ್ಕ'). ತಕ್ಕರಿ, ತಕ್ಕರ್, ತಿಗ್ಗರಿ ಎಂಬ ನಾಮಾಂತರಗಳೂ ಉಂಟು. ಇವರಲ್ಲಿ ಹಳಬರು ಕನ್ನಡ ಮಾತನಾಡಿದರೂ ಈಚಿನವರು ಮರಾಠಿ, ಹಿಂದಿ ಮಾತನಾಡುತ್ತಾರೆ. ಇವರಲ್ಲಿ "ಸೋಲಂಕಿ" ಮುಂತಾದ ಒಳಪಂಗಡಗಳಿವೆ. ಪವಾರ್, ಭೋಸ್ಲೆ, ದಡ್‌ಮನಿ (ದೊಡ್ಡಮನಿ), ಹಾದಿಮನಿ ಇವೇ ಮುಂತಾದ ವಂಶನಾಮಗಳು (surnames) ಇವರಲ್ಲಿರುವುದು ಗಮನಾರ್ಹ. ಎಲ್ಲಮ್ಮ, ಅಂಬಾಬಾಯಿ ಇವರ ದೈವಗಳು.[2]

ಒಂದೆರಡು ಇತಿಹಾಸ ಗ್ರಂಥಗಳಲ್ಲಿ[3] ಕರ್ನಾಟ ವಂಶದ ದೊರೆಗಳ ಹೆಸರುಗಳು "ಠಾಕೂರ್" ಎಂಬ ವಂಶನಾಮದಿಂದ ಕೊನೆಯಾಗುತ್ತವೆ. ಉದಾ.ಗೆ.

ನಾನ್ಯದೇವ ಠಾಕೂರ್
|
ಗಂಗದೇವ ಠಾಕೂರ್
|
ನರಸಿಂಹದೇವ ಠಾಕೂರ್
|
ಶಕ್ತಿಸಿಂಹದೇವ ಠಾಕೂರ್
|
ಹರಿಸಿಂಹದೇವ ಠಾಕೂರ್

"ಠಾಕೂರ್" ವಂಶನಾಮದ ಜೊತೆ ಈ ದ್ರಾವಿಡ ಪದಗಳನ್ನು ಹೋಲಿಸಿ ತಮಿಳು. ತಕ್ಕಾರ್'the noble persons'; ಮಲಯಾಳಂ. ತಕ್ಕಂ 'father'; ಕೊಡಗು. ತಕ್ಕ 'chief man, headman of a village'[4]. ಕೊಡಗಿನಲ್ಲಿ ಇಂದಿಗೂ 'ನಾಡತಕ್ಕ', 'ಊರತಕ್ಕ', 'ದೇವತಕ್ಕ' ಮಾತುಗಳು ಆಯಾ ವ್ಯವಸ್ಥೆಯ ಮುಖ್ಯನನ್ನು ಹೇಳುತ್ತವೆ. (ಈ ಸಂಗತಿಯನ್ನು ತಿಳಿಸಿದವರು ಪ್ರೊ. ಎಂ. ಜಿ. ನಾಗರಾಜ್).

ಈ ಮಾಹಿತಿ ಕೇವಲ ತೌಲನಕ್ಕೆ ಮತ್ತು ಓದುಗರ ಗಮನಕ್ಕೆ. ಈ ಮಾಹಿತಿಯಿಂದ ನಾನು ಯಾವುದೇ ನಿರ್ಧಾರಕ್ಕೂ ಬಂದಿಲ್ಲವೆಂಬುದ್ನು ಸ್ಪಷ್ಟಪಡಿಸುವುದು ಅಗತ್ಯವಾಗಿದೆ.

**ಅನುಬಂಧ – ೨ : 'ತಲೇಜು', 'ತುಳಜಾ ಭವಾನಿ'**

**ನೇಪಾಳದ 'ತಲೇಜು':**

ತಲೇಜು ನೇಪಾಳದ ದಿವ್ಯ ಮಾತೃದೇವತೆ; ರಕ್ಷಣಾದೇವತೆ; ರಾಜಮನೆತನಗಳ 'patron deity'. ಒಂದು ಕತೆಯ ಪ್ರಕಾರ, ಕೊನೆಯ ನೆವಾರಿ ರಾಜ ಜಯಪ್ರಕಾಶ ಮಲ್ಲನ ಕಾಲದಲ್ಲಿ ತಲೇಜು ಕಾಠಮಾಂಡೊದ ಒಬ್ಬ ಕಿರು ಹುಡುಗಿಯ ಮೈಮೇಲೆ ಬಂದುದನ್ನು ತಿಳಿದು ಆ ಹುಡುಗಿಯದು ಭ್ರಮೆ ಎಂದು ಅವಳನ್ನು ಆ ರಾಜ ಊರು ಬಿಟ್ಟು ಓಡಿಸಿದನು. ತಲೇಜು ಅವನ ರಾಣಿಯ ಮೇಲೆ ಬಂದಾಗ ತನ್ನ ತಪ್ಪಿನ ಅರಿವಾಗಿ ಆ ಹುಡುಗಿಯನ್ನು ವಾಪಸ್‌ಕರೆಯಿಸಿ ಅವಳನ್ನು "ಕುಮಾರಿ" ಎಂದು ಕರೆದು ಅವಳ ಪಾದಗಳಿಗೆ ನಮಸ್ಕರಿಸಿ ಅವಳಿಗಾಗಿ ಪ್ರತ್ಯೇಕ ಗೃಹ ಕಟ್ಟಿಸಿದನು. ಅದೇ ಕಾಠಮಾಂಡೊದಲ್ಲಿ ಹನುಮಾನ್‌ಧೋಕಾದ "ಕುಮಾರ್‌ಘರ್".

ಇನ್ನೊಂದು ಕತೆಯ ಪ್ರಕಾರ ಅದೇ ನೆವಾರಿ ದೊರೆ ತಲೇಜು ದೇವತೆ ಜೊತೆ ತನ್ನ ಅರಮನೆಯಲ್ಲಿ ಬಹಳ ಹೊತ್ತು ಪಗಡೆ ಆಡುತ್ತ ಅವಳನ್ನು ಕಾಮುಕ ದೃಷ್ಟಿಯಿಂದ ಕಾಣುತ್ತಲೇ ಅವಳು ಮಾಯವಾಗಿ ಮೂರು ದಿನಗಳ ಬಳಿಕ ಅವನ ಕನಸಿನಲ್ಲಿ ಬಂದು ಹೇಳಿದಳು - "ನಿನ್ನ ತಪ್ಪಿನಿಂದಾಗಿ ನಿನ್ನ ವಂಶದ ಕೊನೆಯ ದೊರೆ ನೀನೇ ಆಗುವೆ. ಇನ್ನು ನೀನು ಎಂದೂ ನನ್ನನ್ನು ನೋಡಲಾರೆ. ನೀನು ಆರಿಸಿದ ನೆವಾರ್‌ಜಾತಿ ಹುಡುಗಿಯಲ್ಲಿ ನಾನಿರುತ್ತೇನೆ. ಅವಳ ಪೂಜೆಯೇ ನನ್ನ ಪೂಜೆ". ನೆವಾರ್‌ವಂಶದವರಿಂದ ಈಗಿನ ಗೊರ್ಖಾ ವಂಶದ ದೊರೆಗಳಿಗೆ ರಾಜ್ಯಭಾರವು ವರ್ಗಾವಣೆಯಾಗಲು "ತಲೇಜು" ("ಕುಮಾರಿ") ಕಾರಣವೆಂದು ಜನ ನಂಬಿದ್ದಾರೆ.

ತಲೇಜು ಭವಾನಿಯು ಮಹಿಷಾಸುರ ಮರ್ದಿನಿಯೆಂದು ರಾಮನ ಆರಾಧ್ಯದೈವವೆಂದು ಭಾವಿಸುತ್ತಾರೆ. ವಿಜಯದರ್ಶಮಿ ದಿನ ತಲೇಜು ಮಹಿಷಾಸುರನನ್ನು ಕೊಂದರೆ ಅದೇ ದಿನ ರಾಮನು ತಲೇಜು ಅನುಗ್ರಹದಿಂದ ರಾವಣನನ್ನು ಕೊಂದನು. ಕತೆ ಪ್ರಕಾರ ಅಯೋಧ್ಯೆಯಲ್ಲಿ ರಾಮನು ತಲೇಜು ದೇವಾಲಯವನ್ನು ನಿರ್ಮಿಸಿದನು. ನೇಪಾಳದ ಸಂರಕ್ಷಕಳಾದ ತಲೇಜು ದೇವಿಯ ಗುಡಿಗಳು ಹಿಂದೆ ರಾಜಧಾನಿಗಳಾಗಿದ್ದ ಕಾಠಮಾಂಡೊ, ಭಕ್ತಪುರ, ಪಾಟಣ್‌ಗಳ ಕೇಂದ್ರ ಭಾಗದಲ್ಲಿ ಅರಮನೆಗಳ ಪಕ್ಕದಲ್ಲೇ ಇರುವುದು ಅದಕ್ಕಾಗಿ - ರಾಜನ, ಅರ್ಥಾತ್‌ದೇಸದ ರಕ್ಷಣೆಗಾಗಿ.

ನೇಪಾಳದ ದಸರಾ ಹಬ್ಬದ ಸಂಭ್ರಮವು ವರ್ಣನಾತೀತ. ಜನರು ಮನೆಗಳಿಗೆ ಸುಣ್ಣ ಬಣ್ಣ ಮಾಡಿ ಹೊಸ ಬಟ್ಟೆ ಉಟಟು ಭಕ್ಷ್ಯ ಭೋಜ್ಯಗಳನ್ನು ಮಾಡಿಸವಿಯುತ್ತಾರೆ. ಹತ್ತು ಹದಿನೈದು ದಿನ ಇಡೀ ನೇಪಾಳವೇ ರಜೆಯಲ್ಲಿರುತ್ತದೆ. ಪರಸ್ಪರ ಭೇಟಿಯಾದಾಗ ಜನರ ಬಾಯಲ್ಲಿ 'ವಿಜಯ ದಶಮಿ', 'ಸುಭ ದಸಮಿ' ಎಂಬ ಪರಸ್ಪರ ಅಭಿನಂದನೆಯ ಮಾತುಗಳು ಬರುತ್ತವೆ. ಜನರು ತರೈನಿಂದ ಸಾವಿರಾರು ಕುರಿ, ಮೇಕೆ, ಕೋಳಿ, ಎಮ್ಮೆ, ಕೋಣಗಳನ್ನು ತಂದು ಕಣಿವೆ ನಗರಗಳಲ್ಲಿ ಮಾರುತ್ತಾರೆ. ಅವುಗಳನ್ನು ದೇವತೆಗಳಿಗೆ ಬಲಿ ಕೊಡಲಾಗುತ್ತದೆ. ಹದಿನೆಂಟು ಹಸ್ತಗಳ, ತಲೆ ಬುರುಡೆ ಮಾಲೆ ಧರಿಸಿದ ಕಾಳಿ, ಭೈರವಿ, ದುರ್ಗಾ ಎಂಬ ನಾಮಾಂತರಗಳು ತಲೇಜು ದೇವಿಗೆ. ಅವಳೇ ಲಕ್ಷ್ಮೀ, ಸರಸ್ವತಿ, ಗೌರಿ ಮಾತ್ರವಲ್ಲ, ಬೌದ್ಧರ ತಾರಾ ಭಗವತಿಯೂ ಹೌದು. ಅವಳು ಕರುಣಾಮಯಿಯೂ ಹೌದು, ಘೋರಳೂ ಹೌದು. ರಾತ್ರಿ ನದಿಗಳಲ್ಲಿ ಜನರು ಸ್ನಾಮಾಡಿ ದೀಪಗಳನ್ನು ತೇಲಿಬಿಡುತ್ತಾರೆ, ಅವಳ ಮೇಲಿನ ಭಕ್ತಿಯಿಂದ.

ದಸರೆಯ ಎಂಟನೆಯ ರಾತ್ರಿ 'ಕಾಲರಾತ್ರಿ'. ಆ ದಿನ ಜನರು ಬೀದಿಗಳಲ್ಲಿ ಆವೇಶದಿಂದ ಕುಣಿಯುತ್ತಾರೆ. ಪ್ರಾಣಿಗಳ, ಅದರಲ್ಲೂ ಕೋಣಗಳ ಬಲಿ ನಡೆಯುತ್ತದೆ. ಕೆಲವೊಮ್ಮೆ ತಲೆ ಕಡಿದು ಅಥವಾ ಈಟಿಯಿಂದ ಹೃದಯಕ್ಕೆ ಚುಚ್ಚಿ ಅಥವ ಗಂಟಲು ಕತ್ತರಿಸಿ ಕೊಲ್ಲುತ್ತಾರೆ. ಹಿಂದೆ ನರಬಲಿಗಳೂ ನಡೆಯುತ್ತಿದ್ದುವೆಂದು ಹೇಳುತ್ತಾರೆ. ಈಗಲೂ ಕೆಲವು ಪ್ರದೇಶದ ಹಳ್ಳಿಗಳಲ್ಲಿ ಒಂದು ವರ್ಗದ ಜನ ಗುಟ್ಟಾಗಿ ನರಬಲಿ ನೀಡುತ್ತಾರೆ. ಹಿಂದೊಮ್ಮೆ ಫರ್ಪಂಗ್‌ನಲ್ಲಿ ನರಬಲಿ ಕೊಡಲು ಕಾನೂನಿನ ಒಪ್ಪಿಗೆಯಿತ್ತೆಂದೂ ಜನ ಜ್ಞಾಪಿಸಿಕೊಳ್ಳುತ್ತಾರೆ. ಈಗಲೂ ಜನರು 'ಮಕ್ಕಳು ಗಾಳಿಯಲ್ಲಿ ಮಾಯವಾದರು' ಎಂದು ಗೋಳಾಡುತ್ತಾರೆ, ಅವರ ಮಕ್ಕಳು ಕಾಣೆಯಾಗಿರುವ ಸಂಗತಿ ತಿಳಿದಾಗ. ಮಕ್ಕಳು ಮಾಂತ್ರಿಕರಿಂದ ಬಲಿಯಾದರು ಎಂದೇ ಅದಕ್ಕೆ ವ್ಯಾಖ್ಯಾನಿಸಲಾಗುತ್ತದೆ.

ಭಕ್ತಪುರದ ತಲೇಜು ಬಗ್ಗೆ ಇರುವ ಜನಪದ ಕತೆ ಹೀಗಿದೆ. ತ್ರೈಲೋಕ್ಯಮಲ್ಲ ದೊರೆಗಿಂತ ಹಿಂದಿನವರು ತಲೇಜುವನ್ನು ಭಕ್ತಪುರದಿಂದ ಕಾಠಮಾಂಡೊಗೆ ತೆಗೆದುಕೊಂಡು ಹೋದುದರಿಂದ ಭಕ್ತಪುರದ ಅವನಿಗೆ ಅವಳನ್ನು ದಿನವೂ ನೋಡುವುದು ಕಷ್ಟವಾಯಿತು. ಅವನ ದುಃಖವನ್ನರಿತ ದೇವಿಯು ಅವನ ಕನಸಲ್ಲಿ ಬಂದು ಹೇಳಿದಳು: "ನಾನು ನಿನ್ನ ಜೊತೆ 'ತ್ರಿಪಾಸ' ಆಡುತ್ತೇನೆ, ಯಾವ ಹೆಂಗಸನ್ನೂ ಒಳಕ್ಕೆ ಬಿಡಬೇಡ." ಅವನು ತನ್ನ ಆಚಾರ್ಯರ ಸಲಹೆಯಂತೆ ವಜ್ರಗಳಲ್ಲಿ ಮಾಂತ್ರಿಕ ಚಿತ್ರದ ಯಂತ್ರವನ್ನು ತಲೇಜುವಿನ ಹಾಗೆ ಮಾಡಿಸಿ ಪೂಜಿಸಿ ದೇವಿಯ ನಿರೀಕ್ಷೆಯಲ್ಲಿರುವಾಗ ಅವನ ಮಗಳು ಗಂಗಾದೇವಿ ಒಳಗೆ ಬಂದುಬಿಟ್ಟಳು. ದೇವಿ ಬರಲಿಲ್ಲ. ಮುಂದಿನ ಕನಸಲ್ಲಿ ಅವಳು ಕಾಣಿಸಿಕೊಂಡು - "ಇನ್ನು ಮೇಲೆ ನೀನೆಂದೂ ನನ್ನನ್ನು ನೋಡಲಾರೆ. ಮೇಲ್ಜಾತಿ ಹುಡುಗಿಯೊಬ್ಬಳಲ್ಲಿ ನಾನು ಕಾಣಿಸಿಕೊಳ್ಳುತ್ತೇನೆ" ಎಂದು ಹೇಳಿ 'ಬಂದ್ಯ' ಹುಡುಗಿ 'ಕುಮಾರಿ'ಯಲ್ಲಿ ಕಾಣಿಸಿಕೊಂಡಳು. 'ಕುಮಾರಿ' ರೂಪದಲ್ಲಿ ತಲೇಜು ಪೂಜೆ ಭಕ್ತಪುರದಲ್ಲಿ ಮುಂದುವರೆದಿದೆ.[5]

ಕಾಠಮಾಂಡೊ ನಗರಕ್ಕೆ ಪೂರ್ವದಲ್ಲಿ ಎಂಟು ಮೈಲಿ ದೂರದಲ್ಲಿರುವ ಭಕ್ತಪುರದ ದಿನ ಮೊದಲು ಬಜ್ರಾಚಾರ್ಯ ಪೂಜಾರಿಯು ನಿರ್ದಿಷ್ಟ ಗುಣಗಳುಳ್ಳ ಕುಮಾರಿಯನ್ನು ಆರಿಸುತ್ತಾನೆ. ಆಕೆಯನ್ನು ತಲೇಜು ಕೊಳಕ್ಕೆ ಕರೆತಂದು ಸ್ನಾನಮಾಡಿಸಿ ಆಕೆಗೆ ವಿಧಿವತ್ತಾದ ಪೂಜೆ ಮಾಡಿದರೆ ಅವಳು ತಲೇಜು ದೇವತೆಯ ಮಾನುಷರೂಪವೇ ಆಗುತ್ತಾಳೆ. ಜನತು ತಲೇಜುವನ್ನು ತಮ್ಮ ತಮ್ಮ ಮನೆಗಳಲ್ಲಿ 'ಘಟ' ಸ್ಥಾಪನೆ ಮಾಡಿ ಅದನ್ನು ಪೂಜಿಸುತ್ತಾರೆ. 'ಘಟ'ವು ತಲೇಜುವಿನ ಸಂಕೇತ. ಮನೆಗಳಲ್ಲಿ ತಲೇಜು ಘಟ ಸ್ಥಾಪನೆಯಿಂದ ಆ ಹಬ್ಬ ಆರಂಭ. ತಲೇಜು ಪೂಜೆ ಬಳಿಕ 'ಚಂಡೀಪಾಠ'ಉಂಟು. ಪ್ರತಿನಿತ್ಯ ತಟ್ಟೆಯಲ್ಲಿ ಅನ್ನ ಇಟ್ಟು ಕುಮಾರಿ ಪೂಜೆ ಮಾಡುತ್ತಾರೆ. ಪಂಚಮಿ ದಿನ ಮಾಂಸದ ನೈವೇದ್ಯ. ಷಷ್ಠಿ ದಿನ ತಲೇಜು ದೇವಾಲಯದಲ್ಲಿ ಮೂಲ ದೇವತೆಯ ಸಾಂಕೇತಿಕ ಪೂಜೆ ಆಗುತ್ತದೆ. ಸಪ್ತಮಿ ದಿನದ್ದು ವಿಶೇಷ ಪೂಜೆ. ನವಮಿ ದಿನ ಮೆರವಣಿಗೆ. ದಶಮಿ ದಿನ ತಲೇಜು ಸಂಕೇತದ ಘಟವನ್ನು ಗುಹ್ಯ ಪೂಜಾವಿಧಾನದಲ್ಲಿ ಅರ್ಚಿಸಿ ಅದರ ಮಂದಿರಕ್ಕೆ ಕುಮಾರಿಯನ್ನು ಕರೆತರುತ್ತಾರೆ. ರಾಜನ ಬದಲು 'ರಾಜೋಪಾಧ್ಯಾಯ'ನು (ಮುಖ್ಯ ಪೂಜಾರಿ) ಗೌರವ ಸಲ್ಲಿಸುತ್ತಾನೆ. ಆ ದಿನ 'ಕುಮಾರಿ'ಯ ಬಾಯಲ್ಲಿ ಭವಿಷ್ಯವಾಣಿ ಬರುತ್ತದೆ. ಮುಂದಾಗಲಿರುವ ಶುಭ, ಅಶುಭಗಳನ್ನು ಅವಳು ಹೇಳುತ್ತಾಳೆ. ಅಲ್ಲಿಗೆ ನವರಾತ್ರಿಯು ಘಟ ವಿಸರ್ಜನೆ ಮೂಲಕ ಮುಕ್ತಾಯಗೊಳ್ಳುತ್ತದೆ.[6]

ತಲೇಜು ದೇವಾಲಯಗಳ ಮುಂದೆ ಬಲಿಗಳ ಸಂಖ್ಯೆ ಹೆಚ್ಚು. ಬಲಿ ರಕ್ತ ಕೊನೆಯ ಪಕ್ಷ ಗುಡಿಯೊಳಕ್ಕೆ ನುಗ್ಗಬೇಕು ಎಂದು ಜನ ಅಪೇಕ್ಷಿಸುವುದುಂಟು. ಒಂಬತ್ತನೇ ದಿನ 'ವಿಶ್ವಕರ್ಮ' ದಿನ. ಆ ದಿನ ಆಯುಧ, ವಾಹನ, ಪುಸ್ತಕ ಇವುಗಳ ಪೂಜೆ ನಡೆಯುತ್ತದೆ.

ವಿಜಯದಶಮಿಯು ರಾಕ್ಷಸರ ಸಂಹಾರವಾದ ದಿನ. ನಂಟರಿಸ್ಟರು ಆ ದಿನ ಭೇಟಿಯಾಗುತ್ತಾರೆ; ಮನೆ ಮನೆಗಳಿಗೆ ಹೋಗಿ ಶುಭ ಹೇಳಿ ಹಿರಿಯರ ಆಶೀರ್ವಾದ ಪಡೆಯುತ್ತಾರೆ. ಅರಮನೆಯಲ್ಲಿ ಬ್ರಾಹ್ಮಣ ಪುರೋಹಿತರು ರಾಜನಿಗೆ "ಟಿಕ" (ಕುಂಕುಮ) ಇಡುತ್ತಾರೆ. ಆ ದಿನ ಸಂಜೆ ವಿಚಿತ್ರ ಮೆರವಣಿಗೆಗಳು ಆಗುತ್ತವೆ. ಖಡ್ಗಗಳ ಮೆರವಣಿಗೆಯೇ 'ಖರ್ಗ ಜಾತ್ರ'. ಬೌದ್ಧ ತಾಂತ್ರಿಕರು ('ಬಜ್ರಾಚಾರಿಗಳು') ಕುಮಾರಿ, ಅಜಿಮ, ಗಣೇಶ ಇತ್ಯಾದಿ ವೇಷ ಹಾಕಿಕೊಂಡು ಕೈಯಲ್ಲಿ ಖಡ್ಗಹಿಡಿದು ಆವೇಶದಿಂದ ಕುಣಿಯುತ್ತಿದ್ದರೆ ಜನರು ಅವರ ಬಳಿ ಹೋಗಲು ಹೆದರುತ್ತಾರೆ.

ದಸರದ ಕೊನೆಯ ದಿನ, ಕಾರ್ತಿಕ ಪೂರ್ಣಿಮ ದಿನದಿಂದ ಒಂದು ತಿಂಗಳು ಹೆಂಗಸರು ಉಪವಾಸ ಆರಂಭಿಸಿ, ದಿನದಿಂದ ದಿನಕ್ಕೆ ಆಹಾರ ಕಡಿಮೆ ಮಾಡುತ್ತ ಬಂದು ಒಂದು ತಿಂಗಳ ಬಳಿಕ ಹುಣ್ಣಿಮೆ ದಿನ ಅದನ್ನು ನಿಲ್ಲಿಸುತ್ತಾರೆ. ಆ ದಿನ ಪಶುಪತಿ ದೇವಾಲಯದಲ್ಲಿ ದೀಪೋತ್ಸವ, ರಾತ್ರಿಯೆಲ್ಲ ಹಾಡು, ಕುಣಿತ.[7]

**ತುಳಜಾ ಭವಾನಿ:**

ಮಹಾರಾಷ್ಟ್ರದ ರಾಷ್ಟ್ರೀಯ – ದೈವಗಳೆಂದೇ ಮರಾಠಿ ಜನರು ಗೌರವಿಸುವ ಕೊಲ್ಲಾಪುರದ ಮಹಾಲಕ್ಷ್ಮೀ, ಪಂಡರಪುರದ ವಿಠೋಬ, ಜೆಜೂರಿಯ ಖಂಡೋಬ, ತುಳಜಾಪುರದ ತುಳಜಾಭವಾನಿ ಈ ನಾಲ್ಕೂ, ಸ್ವಾರಸ್ಯದ ವಿಷಯವೆಂದರೆ, ಕರ್ನಾಟಕದ ದೇವತೆಗಳು. ಕೊಲ್ಲಾಪುರದ ಮಹಾಲಕ್ಷ್ಮಿ ದೇವಾಲಯದ ಶಾಸನಗಳೆಲ್ಲವೂ ಕನ್ನಡದಲ್ಲಿವೆ ಮತ್ತು ಆ ಜಿಲ್ಲೆ ಹಿಂದೆ ಅಪ್ಪಟ ಕನ್ನಡ ಪ್ರದೇಶವಾಗಿತ್ತು. ಶಿವಾಜಿಯು ಅದನ್ನು "ಕರ್ನಾಟ"ವೆಂದೇ ಭಾವಿಸಿದ್ದನು.[8] ಪಂಡರಾಪುರದ ಹಳೆಯ ಹೆಸರು 'ಪಂಡರಗೆ' (ನೋಡಿ : ಜೇವರ್ಗಿ, ಮುಂಡರಗೆ); ವಿಠೋಬನನ್ನು ಸಂತಜ್ಞಾನೇಶ್ವರನು 'ಕಾನಡಾ' (ಕನ್ನಡ ದೇವತೆ) ಎಂದೇ ಕರೆದಿದ್ದಾರೆ. ಖಂಡೋಬ ಯಾರೂ ಅಲ್ಲ, ಕರ್ನಾಟಕದ ಮೈಲಾರ; ಅವನ ಹೆಂಡತಿ ಮಾಲ್ಧಸಾ ಕರ್ನಾಟಕದ ಮಾಳಚಿಯೇ. ತುಳಜಾಪುರದ ತುಳಜಾಭವಾನಿಯೂ ಮೂಲತಃ ಕರ್ನಾಟಕದ ದೇವತೆ. ಹಿಂದೊಮ್ಮೆ ಅಚ್ಚಗನ್ನಡ ಪ್ರದೇಶವಾಗಿದ್ದ ಮಹಾರಾಷ್ಟ್ರದ ಒಸ್ಮಾನ್‌ಬಾದ್‌ಜಿಲ್ಲೆಯ ತುಳಜಾಪುರವು ಸೊಲ್ಲಾಪುರಕ್ಕೆ ನಲವತ್ತು ಕಿಲೋ ಮೀಟರ್‌ದೂರದಲ್ಲಿರುವ ಅದೇ ಹೆಸರಿನ ತಾಲೂಕಿನ ಕೇಂದ್ರ (ಒಸ್ಮಾನಾಬಾದಿನ ಹಿಂದಿನ ಹೆಸರು 'ಧಾರಾಶಿವ'). ಊರಿನ ಪೂರ್ವಕ್ಕೆ ಇರುವ ಹಳೇ ತುಳಜಾಪುರದಲ್ಲಿ ನೇಕಾರರು, ಕುಂಬಾರರು, ತೋಟಿಗರು ಇದ್ದಾರೆ. ತುಳಜಾಪುರ ಪಕ್ಕದ ಗುಡ್ಡದ ಓರೆಯಲ್ಲಿ, ಸ್ವಲ್ಪ ಕೆಳಗೆ ಒಂದು ಹಳ್ಳದ ದಂಡೆ ಮೇಲೆ ಇರುವ ತುಳಜಾಭವಾನಿಯ ಗುಡಿಯಲ್ಲಿ ಪೂರ್ವಾಭಿಮುಖವಾಗಿ ತುಳಜಾಭವಾನಿ ವಿಗ್ರಹವಿದೆ. ಕಲ್ಲಿನಲ್ಲಿ ಸುಂದರವಾಗಿ ಕೆತ್ತಿರುವ ಅಷ್ಟಭುಜ ವಿಗ್ರಹದ ಕಿರೀಟದಲ್ಲಿ ಶಿವಲಿಂಗ ಮತ್ತು ಯೋನಿಗಳನ್ನು

ಬಿಡಿಸಿದೆ. ಕಾಲಕೆಳಗೆ ಕತ್ತರಿಸಿದ ಕೋಣನ ತಲೆ ಇದೆ. (ಚಿತ್ರ ೧೦) ದೇವಾಲಯದ ಸಮೀಪ "ಕಲ್ಲೋಳ್‌ತೀರ್ಥ"[9] ಎಂಬ ಕಲ್ಲಿನ ಸುಂದರ ಕೊಳವಿದೆ. ಈ ತೀರ್ಥದ ನೀರನ್ನು ಅತ್ಯಂತ ಪವಿತ್ರವೆಂದು ಭಾವಿಸುತ್ತಾರೆ. ಇನ್ನೂ ಕೆಳಗೆ ಗೋವಿನ ಬಾಯಲ್ಲಿ ನೀರು ಬರುವ ಗೋಮುಖ ತೀರ್ಥವಿದೆ.

ಶಿವಾಜಿಗೆ ಆರಾಧ್ಯದೈವವೂ ಸ್ಫೂರ್ತಿ ಕೇಂದ್ರವೂ ಆಗಿದ್ದ ತುಳಜಾಭವಾನಿ ವಿಗ್ರಹವನ್ನು ಕ್ರಿ.ಶ. ೧೬೫೯ರ ಸುಮಾರಿನಲ್ಲಿ ಅಫಜಲಖಾನನು ಕೊಂಡೊಯ್ದು ಭಗ್ನ ಮಾಡಿದನು. (ದೇವಾಲಯವು ಇನ್ನೂ ಹಿಂದಿನದು.) ಶಿವಾಜಿಯು ನೇಪಾಳದ ಗಂಡಕಿ ನದಿಯಿಂದ ಶಿಲೆಯನ್ನು ತರಿಸಿ ಈಗಿನ ಮೂರ್ತಿಯನ್ನು ಮಾಡಿಸಿದನಂತೆ!

ಮಹಿಷಾಸುರ ಮರ್ದಿನಿಯಾದ ತುಳಜಾಭವಾನಿಗೆ ತುರಜಾ, ತ್ವರಜಾ, ತ್ವರಿತಾ, ತುಕಾಇ ಎಂಬ ನಾಮಾಂತರಗಳೂ ಇವೆ.[10] ವಿಶೇಷವಾಗಿ ದಸರಾ ಸಮುಯದಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ವಿಜಯದಶಮಿಯ ದಿನ ದೇವಾಲಯದ ತನ್ನ ಗಡಿ ದಾಟಿ 'ಸೀಮೋಲ್ಲಂಘನ' ಮಾಡುತ್ತಾಳೆ (ಇದು ಸಾಂಕೇತಿಕ). ಅಕ್ಟೋಬರ್‌ತಿಂಗಳಲ್ಲಿ ಈ ಜಾತ್ರೆ, ಏಪ್ರಿಲ್‌ತಿಂಗಳಲ್ಲಿ ಇನ್ನೊಂದು ಜಾತ್ರೆ ನಡೆಯುತ್ತವೆ. ಪೂರ್ಣಿಮೆ ದಿನ ಸಾವಿರಾರು ಜನರು ಸೇರುತ್ತಾರೆ. ಹಿಂದೆ ದೇವಿಗೆ ಪೂಜೆ, ನೈವೇದ್ಯ ನೆಪದಲ್ಲಿ ಮದ್ಯಪಾನ ಮಾಡುವ ರೂಢಿಯಿದ್ದು, ಈಗ ನೈವೇದ್ಯದ ಸಮಯದಲ್ಲಿ ಸಾಂಕೇತಿಕವಾಗಿ ಮದ್ಯವನ್ನು ಅರ್ಪಿಸಿದರೂ ಕುಡಿಯಲು ಅವಕಾಶವಿಲ್ಲ. ಹಿಂದೊಮ್ಮೆ ದೇವಿಯು ಆಟವಾಡುತ್ತ ಊಟವನ್ನೇ ಮರೆತು ದೇವಾಯಲದ ಹೊರಗೆ ಉಳಿದುದರಿಂದ, ಈಗಲೂ ಪೂಜಾರಿಯು ಪೂಜಾ ಸಮಯದಲ್ಲಿ ದೇವಿಯನ್ನು ಕೂಗಿ ಕರೆಯುತ್ತಾನೆ.

ಪಾರ್ವತಿ ಅವತಾರವಾದ ಅವಳು ಸೀತಾನ್ವೇಷಣೆ ವಿಷಯದಲ್ಲಿ ರಾಮನಿಗೆ ಮಾಡಿದ ಸಹಾಯದಿಂದಾಗಿ 'ರಾಮವರದಾಯಿನೀ' ಕೂಡ ಆಗಿದ್ದಾಳೆ.[11] ಶುಕ್ರವಾರ ವಿಶೇಷ ಪೂಜೆ ಇರುವುದರಿಂದ ಅವಳು 'ತುಕಾಯಿ' ಎಂದೂ (ಶುಕ್ರ – ತುಕ್ಕ) ಹೆಸರಾಗಿದ್ದಾಳೆ. ಸನಿಹದಲ್ಲಿ ಭವಾನೀಶಂಕರ, ಖಂಡೋಬ ದೇವಾಲಯಗಳಲ್ಲದೆ ತೋಳ ಭೈರವ, ಕಾಳಭೈರವ ಗುಡಿಗಳೂ ಇವೆ. ನಾಗಝರಿ ಎಂಬ ಹಳ್ಳದ ದಂಡೆಯ ಮೇಲೆ ಸ್ವಲ್ಪ ದೂರದಲ್ಲಿ ಮುದ್ಗಲೇಶ್ವರ ಗುಡಿ ಇದೆ. ರಾಮದರೀ ಎಂಬುದು[12] ಕಣಿವೆ ಪ್ರದೇಶವಾಗಿದ್ದು ಪ್ರಕೃತಿಯ ನಯನ ಮನೋಹರ ದೃಶ್ಯವನ್ನು ಅಲ್ಲಿ ಕಾಣಬಹುದು.

'ತುಳಜಾ' ಪದ ಹೇಗೆ ನಿಷ್ಪನ್ನಗೊಂಡಿದೆಯೋ ತಿಳಿಯದು (ಬಹುಶಃ ಅಚ್ಚಗನ್ನಡ ಪದ ಇದು. ೮೧ನೇ ಟಿಪ್ಪಣಿ ನೋಡಿ). ಆದರೆ ಹನ್ನೊಂದನೆ ಶತಮಾನದ ಅಂತ್ಯದಲ್ಲಿ ಕರ್ನಾಟಕದಿಂದ ನೇಪಾಳಕ್ಕೆ ಹೋದ ಕರ್ನಾಟ ವಂಶದ ಅರಸರ ಕುಲದೇವತೆಯಾಗಿದ್ದ ಅವಳು ತಲೇಜು ಹೆಸರಲ್ಲಿ ನೇಪಾದಲ್ಲಿ ಪ್ರಸಿದ್ಧವಾಗಿದ್ದು ತಲೇಜು ದೇವತೆಗೂ ಈಗಿನ ತುಳಜಾಭವಾನಿಗೂ ಸಾಮ್ಯ ಎದ್ದು ಕಾಣುತ್ತದೆ. ಇಬ್ಬರೂ ಮಹಿಷಾಸುರ ಮರ್ದಿನಿಯರು; ಎರಡು ಕಡೆಯೂ ಆ ದೇವಿಯ ಹೆಸರಲ್ಲಿ ನಡೆಯುವ ಉತ್ಸವ ಅತ್ಯಂತ ಜನಪ್ರಿಯ; ಎರಡೂ ಪ್ರಾಣಿ ಬಲಿ, ಮದ್ಯಪಾನಗಳಿಗೆ ಅವಕಾಶವಿರುವ ತಾಂತ್ರಿಕ ಪೂಜೆ ಕೈಗೊಳ್ಳುವ ದೇವತೆಗಳು. ಎರಡೂ ಕಡೆ ಭೈರವನ ದೇವಾಲಯಗಳಿವೆ. ಎರಡೂ ರಾಜರ ಕುಲದೇವತೆಗಳೇ.__

[1] A Comparative Dictionary of Indo – Aryan Languaes, P. 306.

[2] Singh : India's Communities, VI, P. 3419, 3480, 3481, 3482, 3485 ಇತ್ಯಾದಿ ನೋಡಿ.

[3] ಪಂ. ರಾಘವೇಂದ್ರರಾವ್‌ಪಗಡೀ : ಮೈಥಿಲೀ ಕವಿ ವಿದ್ಯಾಪತಿ (ಮರಾಠಿ), ಪು. ೯.

[4] T. Burrow and M. B. Emeneau : A Dravidian Etymological Dictionary, P. 193.

[5] Bikram Jit Hasrat : History of Nepal, P.59.

[6] ಪುರುಷೋತ್ತಮ ಲೋಚನ ಶ್ರೇಷ್ಠ : 'ಐತಿಹಾಸಿಕ್‌ಏವಂ ಸಾಂಸ್ಕೃತಿಕ ಸಂದರ್ಭಮಾ ಭಕ್ತಪುರ ತಲೇಜುಮಾ ಗರಿನೇ ದರ್ಶಪೂಜಾ ವಿಧಾನ್ - ಏಕ್‌ಚರ್ಚಾ'. Rolamba II, No. 3, (1991), P. 1 – 8.

[7]Mary M. Anderson: Festivals of Nepal ಕೃತಿಯಿಂದ ವಿವರಗಳು.

[8] ಅವನು ಹಂಪಿಗೆ ಹೋಗಿದ್ದಾಗ ಅಲ್ಲಿಯ ಜನಕ್ಕೆ ತನ್ನ ಮಗ ರಾಜಾರಾಮನನ್ನು 'ಕರ್ನಾಟಕ'ದಲ್ಲಿ ಸ್ಥಾಪಿಸಿ (ಎಂದರೆ ಕೊಲ್ಲಾಪುರದಲ್ಲಿ) ತನ್ನ ಇಳಿವಯಸ್ಸಿನಲ್ಲಿ ಹಂಪಿಯಲ್ಲಿ ನೆಲಸುವುದಾಗಿ ಮಾತು ಕೊಟ್ಟಂತೆ ಅವನ ಸೊಸೆ, ರಾಜಾರಾಮನ ಪತ್ನಿ ತಾರಾಬಾಯಿ ಬರೆಯಿಸಿದ "ಶಿವಾಜಿ ಮಲ್ಲಮ್ಮಾಜಿ ಸಮರೋತ್ಸವ" ಕೃತಿಯಲ್ಲಿದೆ.

[9] ಈ ಹೆಸರಲ್ಲಿ ಕಲ್ಲು, ಒಳ ('ಒಳಗೆ' ಎಂಬರ್ಥವೂ ಇರಬಹುದು. ಶ್ರೇಷ್ಠ ಎಂಬರ್ಥವೂ ಇರಬಹುದು ಈ ಪದಕ್ಕೆ) ಎಂಬ ಎರಡು ಅಚ್ಚಗನ್ನದ ಹೆಸರುಗಳು ಸ್ಪಷ್ಟ. ಇದನ್ನು ಮರಾಠಿ ವಿದ್ವಾಂಸರು "ಕಲ್ಲೋಳ" (ಗಲಾಟೆ. ನೋಡಿ – ಅಲ್ಲೋಲ ಕಲ್ಲೋಲ' ನೋಡಿ) ಎಂಬ ಪದದಿಂದ ನಿಷ್ಪನ್ನ ಮಾಡುತ್ತಾರೆ, ಕತೆಯೊಂದನ್ನು ಆಧರಿಸಿ. ಆದರೆ ಅದು ಬಹುಶಃ ಅಚ್ಚಗನ್ನಡವೇ.

[10] ತುರಜಾ - ಇದು ಕನ್ನಡದ 'ತೊಱೆ' (=ಹಳ್ಳ) ಪದದಿಂದ ಬಂದಿರುವಂತಿದೆ: ಇದು 'ತುಳಜಾ' ಎಂದು ಮಾರ್ಪಾಟಾಗಿರುವ ಸಾಧ್ಯತೆ ಇದೆ. (ನೋಡಿ -ತಮಿಳು. ತುಱೈ'ಜಾಗ, ಮಾರ್ಗ, ನದಿ, ಸಮುದ್ರ', ಮಲಯಾಳ. ತುಱ 'ಬಂದರು, ಬಟ್ಟೆ ಒಗೆಯುವ ಜಾಗ, ಸಹಜ ಕೊಳ', ಕನ್ನಡ. ತೊಱೆ; ತುಳು. ತುದೆ 'ಹಳ್ಳ). ತುಳಜಾ ಭವಾನಿ ಗುಡಿ ಪಕ್ಕದಲ್ಲಿ ಕೊಳವೂ ಇದೆ, ನದಿಯೂ ಇದೆ.

[11] ಇಂತಹುದೇ ಕತೆ ತಲೇಜು ನೇಪಾಳದಲ್ಲಿ ಹಿಂದೆ ನೋಡಿದ್ದೇವೆ.

[12] 'ತೋಳು' ಪದ ಕನ್ನಡವೆಂಬಲ್ಲಿ ಅನುಮಾನವಿಲ್ಲ. 'ಮುದ್ಗಲೇಶ್ವರ'ವು ಮುದುಗಲೇಶ್ವರ ಆಗಿದ್ದರೂ ಆಶ್ಚರ್ಯಪಡಬೇಕಾಗಿಲ್ಲ. ('ಮುದ್', 'ಮುತ್ - ಎಂದರೆ ಪ್ರಾಚೀನ, ಪವಿತ್ರ) "ಜರಿ" "ದರಿ" (=ಇಳಿಜಾರು) ಎಂಬುವೂ ಅಚ್ಚಗನ್ನಡ ಪದಗಳೆಂಬುದು ಗಮನಾರ್ಹ. ತುಳಜಾಭವಾನಿ ದೈವದ ಬಗ್ಗೆ ವಿವರಗಳನ್ನು ಈ ಕೆಳ ಆಕರಗಳಿಂದ ಪಡೆದಿದ್ದೇನೆ - Maharashtra State Gazetteer (Osmanabad District); Imperial Gazetteer of India, Vol. XXIV; D. R. Amladi : Tulajapur Bhavani; ಮಹಾದೇವ ಶಾಸ್ತ್ರೀ ಜೋಶಿ : ಭಾರತೀಯ ಸಂಸ್ಕೃತಿ ಕೋಶ (ಮರಾಠಿ). ಇದರ ಕೆಲವು ಭಾಗಗಳನ್ನು ಓದಿ ವಿವರಿಸಿದವರು ಡಾ. ಸೂರ್ಯನಾಥ ಕಾಮತ್. ಅಮ್ಲಾದಿಯವರ ಕೃತಿಯತ್ತ ಗಮನ ಸೆಳೆದರು ಆದ್ಯ ರಾಮಾಚಾರ್ಯರು.

# ಅನುಬಂಧ (೩-೪)

**ಅನುಬಂಧ – ೩ : ನೇಪಾಳದ ಸಾಮಾಜಿಕ ಜೀವನ**

[1]

೧. ನೇಪಾಳದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ಸಾಂಪ್ರದಾಯಿಕ ಭೇದವಿದ್ದರೂ ಅವುಗಳಲ್ಲಿ ಬ್ರಾಹ್ಮಣ, ಕ್ಷತ್ರಿಯ ವರ್ಗಗಳನ್ನು ಮಾತ್ರ ಗುರುತಿಸಬಹುದು.[2] ಬ್ರಾಹ್ಮಣರು ಮೇಲ್ಜಾತಿಯವರು, ಮದುವೆ ಸಾವು ಇತ್ಯಾದಿ ಸಂದರ್ಭಗಳಲ್ಲಿ ಪೌರೋಹಿತ್ಯ ವಹಿಸುವವರು, ಕೆಲವು ದೇವಾಲಯಗಳಲ್ಲಿ ಅರ್ಚಕರು. ಬ್ರಾಹ್ಮಣರಲ್ಲಿ ಉಪಾಧ್ಯೆ, ಅರಿಯಾಲು, ಆಚಾರ್ಯ, ಪೌಡೇಲ್‌ಎಂಬಿತ್ಯಾದಿ

ವರ್ಗಗಳುಂಟು. ಕ್ಷತ್ರಿಯರನ್ನು 'ಛೇತ್ರಿ'ಗಳೆಂದು 'ಜಜಮಾನ್' ಎಂದು ಕರೆಯುತ್ತಾರೆ. ಇವರು ದೇವಾಲಯಗಳ ಪೂಜಾ ಉಸ್ತುವಾರಿ, ಆರ್ಥಿಕ ವ್ಯವಹಾರಗಳನ್ನು ನೋಡಿಕೊಳ್ಳುವವರು.

ಅಸ್ಪೃಶ್ಯರು ದೇವಾಲಯಗಳ ಒಳಕ್ಕೆ ಬಂದು ಬ್ರಾಹ್ಮಣ ಅರ್ಚಕರಿಂದ ಆರತಿ ಸ್ವೀಕರಿಸಬಹುದು. ಪಶುಪತಿ ದೇವಾಲಯದಿಂದ ಒಂದು ಕಿಲೋ ಮೀಟರ್‌ದೂರದಲ್ಲಿರುವ ಗುಹ್ಯೇಶ್ವರಿ ದೇವಾಲಯದ ಅರ್ಚಕರು ಅಸ್ಪೃಶ್ಯರು. 'ಪೋಡೆ' ಚಿಯಾಮಿಗಳು ಕಸಗುಡಿಸುವವರ, ದಮೈಗಳು ವಾದ್ಯ ನುಡಿಸುವವರು - ಇವರು ಕೆಳವರ್ಗದವರು. ಎಲ್ಲರಿಗಿಂತ 'ಪೋಡೆ'ಗಳು ಕೆಳಗಿನವರು. ಇವರು ಅಸ್ಪೃಶ್ಯರು. ಕಸೈಗಳು ಕುಸುಳಿಗಳು ತಮಂಗ್‌ಗಳು ಇವರು ಕಟುಕರು, ಅಸ್ಪೃಶ್ಯರು. ಅಸ್ಪೃಶ್ಯರನ್ನು ಮನೆಯೊಳಕ್ಕೆ ಬಿಡಿಸಿಕೊಳ್ಳುವುದಿಲ್ಲ; ಅವರು ಕರೆದರೂ ಒಳಗೆ ಹೋಗರು. ಕ್ಷೌರಿಕರು ಕ್ಷೌರಿಕ ಗಂಡಸರಿಗೆ ಹೆಂಗಸರಿಗೆ ಹೊಸ ವಸ್ತ್ರ ನೀಡುತ್ತಾರೆ.

೧. ಹಿಂದೆ ದೇವತೆಗಳಿಗೆ ನರಬಲಿಗಳನ್ನು ನೀಡುತ್ತಿದ್ದರು, ವಿಶೇಷವಾಗಿ ಕಾಳಿಗೆ. ಬದುಕಿರುವ ಮಗುವನ್ನು ಕೊಂದು ಮಾಂಸವನ್ನು ಹಾಗೇ ಹುಗಿದು, ಹನ್ನೆರಡು ವರ್ಷದ ಬಳಿಕ ಸುಡುತ್ತಿದ್ದರು. ನಿರ್ದಿಷ್ಟವಾಗಿ ಮೂವತ್ತೆರಡು ಲಕ್ಷಣಗಳನ್ನು ಹೊಂದಿರುವವರನ್ನು ಹುಡುಕಿ ಕದ್ದು ಕೊಲ್ಲುತ್ತಿದ್ದರು. ಅದರಲ್ಲೂ "ಧಾರ್ಮಿ" ಹೆಸರಿನ ಮಂತ್ರ ತಂತ್ರ ತಿಳಿದಿದ್ದ ಜನ. ಇವರು ಜುಟ್ಟು ಬಿಟ್ಟು ಬಿಳಿ ಬಟ್ಟೆ ಧರಿಸುತ್ತಿದ್ದರು.

ಹಿಂದೆ ಭಾರತದಲ್ಲಿ ಬಹುವಾಗಿ ಜನ ಹೆದರುತ್ತಿದ್ದದು ಕಾಪಾಲಿಕರಿಗೆ. ಅವರು ಶಿವನಿಗೆ (ಕಾಳಿಗೆ) ನರಬಲಿಯನ್ನು ಕೊಡುತ್ತಿದ್ದರು. ಈಗಲೂ ನೇಪಾಳದಲ್ಲಿ ಕಾಪಾಲಿಕ ಎಂನ ಹೆಸರಿನ ಭಿಕ್ಷುಕರು ಕೊರಳಲ್ಲಿ ತಲೆ ಬುರುಡೆ (ಮನುಷ್ಯರ ತಲೆ ರೀತಿಯ ಬೊಂಬೆಗಳು) ಧರಿಸಿ, ಕೈಯಲ್ಲಿ ತ್ರಿಶೂಲ, ಡಮರು ಹಿಡಿದು ಮನೆ ಮನೆಗೆ ಹೋಗಿ ಭಿಕ್ಷೆ ಬೇಡುತ್ತಾರೆ. ಅವರನ್ನು ಜೋಗಿ (ಜುಗಿ) ಎಂದು ಕರೆಯುತ್ತಾರೆ. ಅವರು ತಮ್ಮ ಹೆಸರುಗಳ ಹಿಂದೆ "ಕಪಲಿ" ಎಂದು ಸೇರಿಸಿಕೊಳ್ಳುತ್ತಾರೆ. ಅವರು ಭಿಕ್ಷೆ ಬೇಡುವುದರ ಜೊತೆ ಮುಂದಿನ ಭವಿಷ್ಯ ಕೂಡ ಹೇಳುತ್ತಾರೆ. ಅವರು ಈಗ ಅಸ್ಪೃಶ್ಯ ವರ್ಗಕ್ಕೆ ಸೇರಿದವರಾಗಿದ್ದಾರೆ.[3] ಇವರು ನರಬಲಿ ಕೈಬಿಟ್ಟಿದ್ದಾರಾದರೂ, ಗುಟ್ಟಾಗಿ ನರಬಲಿ ಕೊಡುತ್ತಾರೆ ಎಂಬ ಗುಮಾನಿ ಜನರಿಂದ ತೊಲಗಿಲ್ಲ.

೩. ಸಹಗಮನ ಪದ್ಧತಿ ಈಗ ಸಂಪೂರ್ಣ ಮರೆಯಾಗಿದೆ. ಗುಡ್ಡ ಪ್ರದೇಶಗಳಲ್ಲಿ ಕೆಲವರು ನಾಲ್ವರು ಹೆಂಡಿರನ್ನು, ಅದು ಕಾನೂನು ಬಾಹಿರವಾಗಿದ್ದರೂ ಮದುವೆಯಾಗುತ್ತಾರೆ. ಅಕ್ಕನ ಮಗಳನ್ನು ಅಥವಾ ಬಂಧುಗಳನ್ನು ಮದುವೆಯಾಗುವಂತಿಲ್ಲ. ಹಿಂದಿನ ಏಳು ತಲೆಮಾರು ಯಾವುದೇ ಬಾಂಧವ್ಯವಿರದ ಕುಟುಂಬಗಳ ಮಧ್ಯೆ ಮಾತ್ರ ವಿವಾಹಗಳು ಸಾಧ್ಯ. ಮನೆಯ ಮಗಳಿಗೆ ಆಸ್ತಿಯಲ್ಲಿ ಹಕ್ಕು ಇಲ್ಲದಿದ್ದರೂ ಅವಳ ತಾಯಿಗೆ ಸ್ವಾಭಾವಿಕವಾಗಿ ಬಂದದ್ದು ಅವಳಿಗೂ ದೊರೆಯುತ್ತದೆ. ವರದಕ್ಷಿಣೆ ಪದ್ಧತಿ ಇಲ್ಲ. ಹೆಣ್ಣಿನ ತಂದೆ ಅಳಿಯನಿಗೆ ಮನೆ ಸಾಮಾನು ('ಡೈಜು' 'ದಹೇಜ್') ಕೊಡಿಸುವ ಪದ್ಧತಿಯಿದೆ.

೪. ರಾಜ ಬಂಶಿ ಜಾತಿಯ ಜನರಲ್ಲಿ ತೆರೆ (ವಧುದಕ್ಷಿಣೆ) ಕೊಡದ ಹುಡುಗನು ಹುಡುಗಿಯ ಮನೆಯಲ್ಲಿ ದುಡಿದು ಅದನ್ನು ತೀರಿಸಬೇಕು.[4] ಹಳ್ಳಿಗಳ ಕಡೆ ಹುಡುಗಿ ಜೊತೆ ಹುಡುಗ ಮನೆಬಿಟ್ಟು ತಪ್ಪಿಸಿಕೊಂಡು ಹೋಗಿ ಅವಳನ್ನು ಮದುವೆಯಾಗುವ ಪದ್ಧತಿ ಇದೆ. ಹುಡುಗಿ ಏಳು ವರ್ಷದವಳಾಗಿದ್ದಾಗಲೇ ಬಿಲ್ವ ಫಲದ ಜೊತೆ ಅವಳ ಮದುವೆ ಆಗುತ್ತದೆ. ಮದುವೆ ಆದಮೇಲೆ ಮುಂದೆ ಅವಳು ಮದುವೆಗೆ ಮುನ್ನ ಹುಡುಗ ಕೊಟ್ಟಿದ್ದ ಅಡಕೆ ವಾಪಸ್‌ಕೊಟ್ಟು ಮತ್ತೆ ಇನ್ನೊಬ್ಬನ ಜೊತೆ ಮದುವೆಯಾಗಬಹುದು. ಬಿಲ್ವ ಫಲದ ಜೊತೆ ಮದುವೆ ಆದ ಹುಡುಗಿಯಾದ್ದರಿಂದ ಅವಳು ಎಂದೂ ವಿಧವೆ ಅಥವಾ ಪರಿತ್ಯಕ್ತೆ ಎನ್ನಿಸಿಕೊಳ್ಳುವುದಿಲ್ಲ.

೫. ನೇಪಾಳದ ಶೈವಧರ್ಮವೇ ಪ್ರಧಾನ. ಅವರ ಕುಲದೇವತೆ 'ಕಾಲಿ' (ಅಥವಾ ಶಕ್ತಿ). ವಿಷ್ಣು ದೇವಾಲಯಗಳು ಅಲ್ಲಿ ಕಡಮೆ. ನಾಮಧಾರಿಗಳಾದ ವೈಷ್ಣವರು, ಅದರಲ್ಲೂ ನೇಪಾಳಿ ವೈಷ್ಣವರು ಪ್ರಾಮಾಣಿಕರಲ್ಲವೆಂಬ ಒಂದು ಸಾಮಾನ್ಯ ನಂಬಿಕೆಯಿದೆ. ಇದ್ದುದರಲ್ಲಿ ಭಾರತದಿಂದ ಹೋದ ವೈಷ್ಣವರು ನಂಬಲರ್ಹರೆನ್ನುತ್ತಾರೆ.

೬. ಗರ್ಭಗುಡಿ ಸೇರಿದಂತೆ ಇಡೀ ದೇವಾಲಯದ ಪ್ರಾಕಾರದೊಳಕ್ಕೆ ವಿದ್ಯುಚ್ಛಕ್ತಿ ಪ್ರವೇಶವಿಲ್ಲ. ಅಲ್ಲಿ ಅಖಂಡ ಜ್ಯೋತಿಯಾಗಿ ದೀಪ ಉರಿಯಬೇಕು. ಈರುಳ್ಳು, ವಿದೇಶಿ ತರಕಾರಿಗಳು ಮೈಲಿಗೆಯೆಂದೇ ಪರಿಗಣಿತ. ಅಗ್ನಿಯು ಪವಿತ್ರವಾದ್ದರಿಂದ ಅಡುಗೆ ಮನೆಯ ಒಲೆಗೆ ಅನೇಕರು ತ್ಯಾಜ್ಯವಸ್ತುಗಳನ್ನು (ಉದಾ. ಕಾಗದ, ರಟ್ಟು) ಹಾಕುವುದಿಲ್ಲ.

೭. ಗೋಮಾಂಸವನ್ನುಳಿದ ಮಾಂಸಾಹಾರವು ನೇಪಾಳದಲ್ಲಿ ಸರ್ವೇಸಾಮಾನ್ಯ ಬ್ರಾಹ್ಮಣರೂ ಕೂಡ ಬಹುತೇಕ ಮಾಂಸಾಹಾರಿಗಳು. ವೈಷ್ಣವರು ಮಾತ್ರ ಶಾಕಾಹಾರಿಗಳು. ಅಸ್ಪೃಶ್ಯರು ಸತ್ತ ಗೋಗಳ ಮಾಂಸ ತಿನ್ನುತ್ತಾರೆ. ವಿಧವೆಯರು ಮಾಂಸ ಬೆಳ್ಳುಳ್ಳಿ ಈರುಳ್ಳಿಗಳನ್ನು ಅವು 'ರಾಜಸಿಕ' ಎಂದು ವರ್ಜಿಸುತ್ತಾರೆ.

೮. ನೇಪಾಳದಲ್ಲಿ ರಾಜತ್ವ, ಧರ್ಮ ಇವು ಅಲ್ಲಿನ ಜನಜೀವನವನ್ನು ನಡೆಯಿಸುವ ಚೈತನ್ಯ ಶಕ್ತಿಗಳು. ರಾಜ, ಅವರಿಗೆ ಇಂದಿಗೂ ಪ್ರತ್ಯಕ್ಷ ದೇವತೆ (ಆ ಕಾರಣವಾಗಿಯೇ ಅದಕ್ಕೆ ಪ್ರತಿಕ್ರಿಯಾತ್ಮಕವಾಗಿ ಮಾವೋ ವಾದವು ಹುಟ್ಟಿಕೊಂಡಿರುವುದು). ರಾಜನು ಸತ್ತ ಮೇಲೆ ಅವನ ದಹನ ಇತ್ಯಾದಿಗಳು ನಡೆದು ಕೆಲದಿನಗಳ ಬಳಿಕ ಅವನ ಶ್ರಾದ್ಧ ಸಮಾರಾಧನೆ ನಡೆದ ದಿನವೇ ಅರಮನೆಯಲ್ಲಿ ರಾಜಾನ್ನವನ್ನು ಸ್ವೀಕರಿಸಿದ ಬ್ರಾಹ್ಮಣನಿಗೆ ಹಣವನ್ನು ಕೊಟ್ಟು ನಗರದಿಂದ (ನೇಪಾಳದಿಂದ) ಹೊರಕ್ಕೆ ಕಳುಹಿಸುತ್ತಾರೆ. ಅವನು ಒಂದು ವರ್ಷ ಎಲ್ಲರಿಂದ ಕಣ್ಮರೆಯಾಗಿ ಹೋಗಬೇಕು. ರಾಜನ ಪ್ರೇತವು ಅವನ ಮೂಲಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಪವಿತ್ರಾತ್ಮಕವಾಗಿ ಮೋಕ್ಷವನ್ನು ಪಡೆಯಲಿ ಎಂಬ ಆಶಯ ಅದರ ಹಿಂದಿರುವಂತಿದೆ. ಹಿಂದೆ ಆ ಬ್ರಾಹ್ಮಣ ನೇಪಾಳವನ್ನು ಬಿಟ್ಟು ಹೊರಗೆ ಹೋಗುತ್ತಿದ್ದನು. ಈಗ ನೇಪಾಳದ ದಕ್ಷಿಣಕ್ಕಿರುವ ತಿರ್ಯೆನಂತಹ ಭಾಗಕ್ಕೆ ಹೋಗುತ್ತಾನೆ. ಕಾಲವು ಆಧುನಿಕಗೊಂಡಂತೆ ಅಂತಹ ಆಚರಣೆಗಳು ಸಡಿಲಗೊಳ್ಳುವುದನ್ನು ಯಾರೂ ಊಹಿಸಿಕೊಳ್ಳಬಹುದು.

೯. ಪಶುಪತಿ ದೇವಾಲಯಕ್ಕೆ ಒಂದು ಕಿಲೋ ಮೀಟರ್‌ದೂರದ ಗುಹ್ಯೇಶ್ವರಿಯಲ್ಲಿ ಪೂಜೆ ನಡೆಯುವುದು ನೆಲದ ಮೇಲೆ ಕೆತ್ತಿರುವ ಸ್ತ್ರೀ ಯೋನಿಗೆ ಅದು 'ಸತಿ' ಪಾರ್ವತಿಯ ಗುಹ್ಯಾಂಗ. ಪಶುಪತಿ ಮಹಾದೇವಾಲಯದ ಪರಿಸರದಲ್ಲಿರುವ ಕೆಲವು ಪ್ರಮುಖ ದೇವಾಲಯ ಅಥವಾ ಮೂರ್ತಿಗಳು ಇಂತಿವೆ: ಶ್ರೀ ಕಿರಾತೇಶ್ವರ್, ಶ್ರೀಗೋರಕನಾಥ ಮಂದಿರ್, ಶ್ರೀ ರಾಜರಾಜೇಶ್ವರಿ ನವದುರ್ಗಾ ಮಂದಿರ್, ಶ್ರೀ ಭಸ್ಮೇಶ್ವರ್‌ಶಿವಲಿಂಗ, ಶ್ರೀ ನೀಲ ಸರಸ್ವತಿ, ಶ್ರೀ ವತ್ಸಲೇಶ್ವರಿ ಮಂದಿರ್, ಶ್ರೀ ಮೃಗೇಶ್ವರ್, ಶ್ರೀ ವಿರೂಪಾಕ್ಷ, ಶ್ರೀ ಗಂಗಾಮಾಯೀ ಮಂದಿರ್, ಶ್ರೀರಾಮ ಮಂದಿರ್, ಶ್ರೀ ಲಕ್ಷ್ಮೀನಾರಾಯಣ ಮಂದಿರ್, ಶ್ರೀ ವಿಶ್ವರೂಪು ಮಂದಿರ್. ನದಿ ದಾಟಿ ಗುಹೇಶ್ವರಿ ಮಂದಿರಕ್ಕೆ ಹೋಗುವ ದಾರಿಯ ಎಡಗಡೆಯ ಗುಡ್ಡವೇ ಮೃಗಸ್ಥಲೀ. ಅಲ್ಲಿ ಸಾಧುಸಂತರು ಇರಲು ಚಿಕ್ಕ ಮನೆಗಳಿವೆ. ಅರ್ಧ ಹೂತು ಹೋಗಿರುವ ಬುದ್ಧ ವಿಗ್ರಹವಿದೆ. ಗುಡ್ಡದ ಕೆಳಗೆ ನಗರಕ್ಕೆ ಅಂಟಿಕೊಂಡಂತೆ ದೊಡ್ಡ ಗೋಶಾಲೆ ಇದೆ. ನೇಪಾಳವು ೧೯೫೦ ರವರೆಗೆ ಹೊರಗಿನವರಿಗೆ ನಿಷೇಧಿತವಾಗಿದ್ದರೂ ಪಶುಪತಿನಾಥ ದರ್ಶನಕ್ಕೆ ಬರುವ ಭಾರತದ ಸಾಧುಸಂತರಿಗೆ ಪ್ರವೇಶವಿದ್ದು ಅವರಿಗೆ ಸರ್ಕಾರವೇ ಸ್ವಲ್ಪ ಹಣ, ಬೆಚ್ಚನೆಯ ಕಂಬಳಿ ನೀಡುತ್ತಿತ್ತೆಂದು ತಿಳಿದುಬಂದಿದೆ.

೧೦. ನೇಪಾಳಿಗಳು ಸಾಮಾನ್ಯವಾಗಿ ಶವಗಳ ದಹನ ಮಾಡಿದರೂ '- ಪುರಿ', 'ಭಾರತ', '- ಗಿರಿ' ವರ್ಗಗಳ ಸನ್ಯಾಸಿಗಳನ್ನು ಮಾತ್ರ ಕೂರಿಸಿ ಹುಗಿಯುತ್ತಾರೆ.

೧೧. ಕಾಠಮಾಂಡೊಕ್ಕೆ ಐದು ಕಿಲೋ ಮೀಟರ್‌ದೂರದಲ್ಲಿರುವ ಗೋಕರ್ಣದಲ್ಲಿ ನದಿಯು ಉತ್ತರ ವಾಹಿನಿಯಾಗಿದ್ದು, ಅದು ಶ್ರಾದ್ಧ ಕರ್ಮಗಳಿಗೆ ಪ್ರಶಸ್ತವೆಂದು ಪರಿಗಣಿತವಾಗಿದೆ. ಹುಣ್ಣಿಮೆ ದಿನಗಳಂದು ಜನ ಸ್ನಾನಕ್ಕೆ ಅಲ್ಲಿಗೆ ಧಾವಿಸುತ್ತಾರೆ. ಗೋಕರ್ಣವನ್ನು 'ಸ್ವಸ್ಥಾನಿ'ಯೆಂದು ಕರೆಯಲು ಕಾರಣ, ಜನರು ಪರಲೋಕಕ್ಕೆ, ತಮ್ಮ ಮೂಲ ಸ್ಥಾನಕ್ಕೆ ತೆರಳುವ ಜಾಗ ಅದು ಎಂಬ ನಂಬಿಕೆ ಇರಬಹುದು.

೧೨. ಮತಾಂತರ ಕಾರ್ಯಕ್ಕೆ ಅವಕಾಶವಿಲ್ಲವಾದರೂ ಕೆಲವೆಡೆ ಆಸೆ ಆಮಿಷ ತೋರಿಸಿ ಹಿಂದೂಗಳನ್ನು ಕ್ರಿಶ್ಚಿಯನ್‌ಧರ್ಮಕ್ಕೆ ಸೇರಿಸಿಕೊಳ್ಳುತ್ತಿರುವುದಂತೂ ನಡೆದಿದೆ. ಅಂತಹ ಕೆಲವರು ವಿರಳವಾಗಿ ಗೋದಾನ ಮಾಡಿ, ಪ್ರಾಯಶ್ಚಿತ್ತ ವಿಧಿಗಳ ಮೂಲಕ ಹಿಂದೂ ಧರ್ಮಕ್ಕೆ ವಾಪಾಸಾಗಿದ್ದಾರೆ. ಅಂತವರು 'ಸಪ್ತಸಾಗರ'ದ ಆಚೆಯಿಂದ ಬಂದವರೆಂದೇ ಪರಿಗಣಿತರಾಗುತ್ತಾರೆ. ಹಿಂದೂ ಹುಡುಗ ಒಬ್ಬ

ಮುಸ್ಲಿಮ್‌ಹುಡುಗಿಯನ್ನು ಮದುವೆಯಾದರೆ ಅವನು ಮುಸ್ಲಿಂ ಆದಂತೆಯೇ. ಇಂಥವರ ಸಂಖ್ಯೆ ಜಾಸ್ತಿ ಇಲ್ಲ. ಆದರೆ ಹೊರಗಿನಿಂದ ನಿರಾಶ್ರಿತರ ಹೆಸರಲ್ಲಿ ಮುಸ್ಲಿಮರು ಹೆಚ್ಚಾಗಿ ಬರುತ್ತಿದ್ದಾರೆ. ಹಿಂದಿಗಿಂತ ಈಗೀಗ ಮಸೀದಿಯು ನೇಪಾಳದಲ್ಲಿ ಎದ್ದು ಕಾಣಿಸುವ ವ್ಯವಸ್ಥೆಯಾಗಿದೆ. ಮುಸ್ಲಿಮರು ಹೆಚ್ಚು ಹೆಚ್ಚಾಗಿ ಮಸೀದಿಗಳಿಗೆ ಹೋಗುವುದು ಎಲ್ಲ ಕಡೆ ಕಂಡುಬರುತ್ತದೆ.

**ಅನುಬಂಧ – ೪ : ವಾರಣಾಸಿ (ಕಾಶಿ) – ಕರ್ನಾಟಕ**

ಹಿಂದೆ ಉತ್ತರ ಭಾರತದ ಹದಿನಾರು ರಾಜ್ಯಗಳಲ್ಲಿ ('ಜನಪದ') ಕಾಶಿಯೂ ಒಂದಾಗಿದ್ದು, ಒಂದು ಆಡಳಿತ ಭಾಗದ ಹೆಸರಾಗಿದ್ದು ಅದರ ರಾಜಧಾನಿ 'ವಾರಣಾಸಿ' ಎಂದು ಕರೆಯಿಸಿಕೊಳ್ಳುತ್ತಿತ್ತು. ಕ್ರಮೇಣ 'ಕಾಶಿ', 'ವಾರಣಾಸಿ' ಹೆಸರುಗಳು ಸಮಾನಾರ್ಥಕಗಳಾದುವು. ಕಾಶಿಯು ಆರಂಭದಲ್ಲಿ ರಾಜಕೀಯ ಪ್ರಾಮುಖ್ಯವನ್ನು ಪಡೆದಿದ್ದು ಕ್ರಮೇಣ ಅದೊಂದು ಪುಣ್ಯಕ್ಷೇತ್ರ, ಆಧ್ಯಾತ್ಮಿಕ ಕೇಂದ್ರವೆಂದು ಪ್ರಸಿದ್ಧವಾಯ್ತು. ಹನ್ನೊಂದನೇ ಶತಮಾನದ ಕಲ್ಹಣನ ರಾಜತರಂಗಿಣಿ ಪ್ರಕಾರ, ಸಾವನ್ನಪ್ಪಲು ಕಾಶ್ಮೀರದ ಜನ ಕಾಶಿಗೆ ಧಾವಿಸುತ್ತಿದ್ದರು.[5] 'ಕಾಶೀಖಂಡ' ಹೇಳುವಂತೆ ಶಿವನ ಗಣಗಳು ಸ್ಥಾಪಿಸಿದ ನಲವತ್ತು ಲಿಂಗಗಳಲ್ಲಿ ಈಗ ಹನ್ನೆರಡು ಉಳಿದಿವೆ.[6]

ವಾರಣಾಸಿಯು ನೇಪಾಳಿಗಳೂ ಸೇರಿದಂತೆ ಎಲ್ಲ ಹಿಂದೂಗಳಿಗೂ ಪವಿತ್ರ ಕ್ಷೇತ್ರವೆಂಬುದನ್ನು ವಿವರಿಸಬೇಕಾಗಿಲ್ಲ. ಅಷ್ಟೇ ಅದು ಜೈನರಿಗೂ ಬೌದ್ಧರಿಗೂ ಪವಿತ್ರ ಸ್ಥಳ. ಕಾಶಿಗೆ ಸಂಬಂಧಿಸಿದ ಕೆಳಗಿನ ತೇದಿಗಳನ್ನು ಆ ದೃಷ್ಟಿಯಿಂದಲೂ ಗಮನಿಸಿ.

| | |
|---|---|
| ಕ್ರಿ. ಪೂ. ೮ನೇ ಶ. | ಜೈನ ಇಪ್ಪತ್ತಮೂರನೇ ತೀರ್ಥಂಕರ ಪಾರ್ಶ್ವನಾಥನ ಜನನ. |
| ಕ್ರಿ. ಪೂ. ೬ನೇ ಶ. | ಬುದ್ಧನು ಕಾಶಿ ಪಕ್ಕದ ಸಾರನಾಥದಲ್ಲಿ ಬೋಧಿಸಿದನು. |
| ಕ್ರಿ. ಪೂ. ೨೪೦ನೇ | ಅಶೋಕ ಕಾಶಿಬೆ ಭೇಟಿ ನೀಡಿದ್ದನು. |
| ಕ್ರಿ. ಶ. ೪೯೦ | ವಿಶ್ವನಾಥ ಮಹಾದೇವನಿಗೆ ಮೊದಲ ದೇವಸ್ಥಾನ ನಿರ್ಮಾಣ. ಮುಂದೆ ಚೀನಿ ಪ್ರವಾಸಿ ಹ್ಯುಯೆನ್‌ತ್ಸಾಂಗ್‌ಕಾಶಿಯಲ್ಲಿ ಎಪ್ಪತ್ತು ವಿಹಾರ, ನೂರು ದೇವಾಲಯಗಳನ್ನು ಕಂಡನು. |
| ಕ್ರಿ. ಶ. ೧೦೧೩ | ಅಹಮದ್‌ನಿಯಲ್ತಗೀನನಿಂದ ನಗರ ನಾಶ; ಹಲವು ಗುಡಿಗಳ ನಾಶ. |
| ಕ್ರಿ. ಶ. ೧೧೯೪ | ಕುತುಬ್‌ಉದ್ದೀನ್‌ಐಬರ್ಕನಿಂದ ವಿಶ್ವನಾಥ ದೇವಾಲಯ ನಾಶ. ಹಲವು ದೇವಾಲಯಗಳ ಜಾಗದಲ್ಲಿ ಮಸೀದಿ ಕಟ್ಟಿಸಿದನು. |
| ಕ್ರಿ. ಶ. ೧೩ನೇ ಶ. | ಅಲ್ಲಾವುದೀನನಿಂದ ಒಂದು ಸಾವಿರ ದೇವಾಲಯ ನಶ. |
| ಕ್ರಿ. ಶ. ೧೪೯೪ | ಸಿಕಂದರ್‌ಲೋದಿಯಿಂದ ಒಂದು ಸಾವಿರ ಗುಡಿ ನಾಶ. ಪ್ರಯಾಗ ಕೂಡ ನಾಶ. |
| ಕ್ರಿ. ಶ. ೧೫೮೫ | ತೋದರ ಮಲ್‌ನಿಂದ ವಿಶ್ವನಾಥ ಮಂದಿರದ ಪುನರ್ನಿರ್ಮಾಣ. |
| ಕ್ರಿ. ಶ. ೧೬೬೪ | ವಿಶ್ವನಾಥನ ದೇವಾಲಯದ ಪಕ್ಕದಲ್ಲಿ ದಶನಾಮಿನಾಗ ಸನ್ಯಾಸಿಗಳಿಗೂ ಔರಂಗಜೇಬನ ಸೈನ್ಯಕ್ಕೂ ಕಾದಾಟ ದೇವಾಲಯ ನಾಶ - ವಿಶ್ವನಾಥನ ಮೂರ್ತಿ ಭಗ್ನ. ಅಲ್ಲಿ ಮತ್ತು ಬಿಂದುಮಾಧವ ಮಂದಿರದಲ್ಲಿ ಮಸೀದಿ ನಿರ್ಮಾಣ. ಕಾಶಿಗೆ 'ಮುಹಮ್ಮದಾಬಾದ್' ನಾಮಕರಣ. |
| ಕ್ರಿ. ಶ. ೧೭ನೇ ಶ. | ಶಹಜಹಾನ್‌ನಿಂದ ಎಪ್ಪತ್ತಾರು ಗುಡಿ ನಾಶ. ೧೬೩೨ ರಲ್ಲಿ ಅರವತ್ತೇಳು ದೇವಾಲಯಗಳನ್ನು ನಿರ್ಮಿಸಿದ್ದನ್ನು ಕೇಳಿ ತಕ್ಷಣ ಅದನ್ನು ಕೆಡವಿಸಿದನು. |

| | |
|---|---|
| ಕ್ರಿ. ಶ. ೧೭೭೭ | ವಿಶ್ವನಾಥ ದೇವಾಲಯ ಪುನರುದ್ಧಾರ - ಹೊಸ ಶಿವಲಿಂಗ ಮೂರ್ತಿ ಪ್ರತಿಷ್ಠಾಪನೆ, [7] ಅಹಲ್ಯಾಬಾಯಿ ಹೋಳ್ಕರ್‌ಮೂಲಕ. |

ಮೇಲೆ ಸೂಚಿಸಿರುವಂತೆ, ಸಿಕಂದರ್‌ಲೋದಿಯಿಂದ ಹದಿನೈದನೇ ಶತಮಾನದಲ್ಲಿ ಕಿತ್ತು ಹಾಕಲ್ಪಟ್ಟ ವಿಶ್ವನಾಥನ ಶಿವಲಿಂಗವನ್ನು ನೇಪಾಳದ ಭಕ್ತಪುರಕ್ಕೆ ಒಯ್ದು ಅಲ್ಲಿ ಸ್ಥಾಪಿಸಿರುವಂತೆ ತೋರುತ್ತದೆ. (ಅನುಬಂಧ – ೬ ನೋಡಿ).

ಸಂಗತಿಯ ಸ್ವಾರಸ್ಯಕ್ಕಾಗಿ ಈ ಎರಡು ವಿಷಯಗಳನ್ನು ದಾಖಲಿಸಲಾಗಿದೆ. ವೈಕುಂಠ ಚತುರ್ದಶಿ ದಿನ ಕಾಶಿಯಲ್ಲಿ ವಿಶ್ವನಾಥನಿಗೆ ತುಲಸಿ ಪತ್ರವನ್ನು ವಿಷ್ಣುವಿಗೆ ಬಿಲ್ವ ಪತ್ರವನ್ನು ಏರಿಸಲಾಗುತ್ತದೆ.

ನೇಪಾಳದಿಂದ ಗಿಳಿಗಳನ್ನು ಅಲ್ಲಿನ ಭಕ್ತರು ಕಾಶಿಗೆ ತಂದು ಶಿವನ ಹೆಸರಲ್ಲಿ ಅವುಗಳಲ್ಲಿ ಹಾರಿ ಬಿಡುತ್ತಾರೆ.[8]

ಕಾಶಿಯಲ್ಲಿ ಗಂಗಾನದಿಗೆ ಅನೇಕ ಸ್ನಾನ ಘಟ್ಟಗಳಿವೆ. ಮಣಿ ಕರ್ಣಿಕಾ, ಹರಿಶ್ಚಂದ್ರ ಇತ್ಯಾದಿ. ಅವುಗಳಲ್ಲಿ ಹನುಮಾನ್‌ಘಾಟ್‌ಭಾಗವಾಗಿ "ಕರ್ನಾಟಕ ಘಾಟ್" ಎಂಬುದೂ ಒಂದು. ಅದನ್ನು ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಮೈಸೂರರಸರು ಜೀರ್ಣೋದ್ಧಾರ ಮಾಡಿ ಗಂಗೆಯ ದಂಡೆಯ ಮೇಲೆ ಧರ್ಮಶಾಲೆಯನ್ನು ಕಟ್ಟಿಸಿದ್ದು ಕಾರಣವಾಗಿ ಅದು "ಮೈಸೂರ್‌ಘಾಟ್" ಎಂದು ಕೆಲಕಾಲ ಪ್ರಸಿದ್ಧವಾಗಿ ಮತ್ತೆ "ಕರ್ನಾಟಕ ಘಾಟ್" ಎಂದೇ ಹೆಸರಾಗಿದೆ.[9]

ಕಾಶಿ ಎಲ್ಲ ಭಾರತೀಯರ ಪವಿತ್ರ ಕ್ಷೇತ್ರವಾದುದರಿಂದ ಅದು ಮೊದಲಿನಿಂದ ಸಮಸ್ತ ಭಾರತದ ಜೊತೆ ಜೀವಂತ ಸಂಪರ್ಕವನ್ನು ಪಡೆದಿತ್ತೆಂಬುದು ಪ್ರಸಿದ್ಧ ವಿಷಯವೇ. ಕಾಶಿಗೂ ಕರ್ನಾಟಕಕ್ಕೂ ಇರುವ ಸಂಬಂಧವು ಎಷ್ಟು ಪ್ರಾಚೀನವೆಂಬುದನ್ನು ಹೇಳಬೇಕಾಗಿಲ್ಲ. ಭಾರತದ ಉಳಿದ ಭಾಗಗಳಿಗೆ ಇರುವ ಸಂಬಂಧವು ಅದರಿಂದ ಭಿನ್ನವಾಗಿಲ್ಲ. ಚಾಲುಕ್ಯ ದೊರೆ ಚಾಮುಂಡರಾಜನೆಂಬುವವನು ವಾರಣಾಸಿಗೆ ತೀರ್ಥಯಾತ್ರೆ ಹೋಗಿದ್ದುದರ ವಿಷಯ ದಾಖಲಾಗಿದೆ.[10] (ಈತ ಯಾರು, ತಿಳಿಯದು). ಇದು ಕೇವಲ ಒಂದು ಉದಾಹರಣೆ. ಕಾಶಿಗೂ ವೀರಶೈವ ಧರ್ಮಕ್ಕೂ ಇರುವ ಸಂಬಂಧದ ಚರಿತ್ರೆ ಇನ್ನೂ ಸ್ಪಷ್ಟವಾಗಬೇಕಾಗಿದೆ. ಕಾಶಿಯ ವಿಶ್ವೇಶ್ವರ ಲಿಂಗದಿಂದ ಪಂಚಾಚಾರ್ಯರಲ್ಲಿ ಐದನೆಯವರಾದ ವಿಶ್ವಾರಾಧ್ಯರು ಮೂಡಿಬಂದರು ಎಂದು ವೀರಶೈವರು ನಂಬುತ್ತಾರೆ. (ತೋಂಟದ ಸಿದ್ಧಲಿಂಗಯತಿಗಳ ಶಿಷ್ಯ ಪರಂಪರೆಗೆ ಸೇರಿದ ಕವಿ, ಕ್ರಿ. ಶ. ೧೮೯೬ರ ಸಂಪಾದನೆಯ ಪರ್ವತೇಶನ ಚತುರಾಚಾರ್ಯ ಚಾರಿತ್ರ ಕೃತಿಯ ಪ್ರಕಾರ, ಕಾಶಿಯ ವಿಶ್ವೇಶ್ವರ ಲಿಂಗದಿಂದ ಮೂಡಿಬಂದವನು ಪಂಡಿತಾರಾಧ್ಯ ಈತ, ಆ ಕೃತಿಯ ಪ್ರಕಾರ 'ಕನಕ ಯಜ್ಞೋಪವೀತ ಧಾರಿ). ಅದು ಶ್ರದ್ಧೆಯ ವಿಷಯವಾದ್ದರಿಂದ ಅದರಲ್ಲಿ ಚರಿತ್ರೆಯನ್ನು ಹುಡುಕುವುದು ವ್ಯರ್ಥವಾದರೂ, ಪಂಚಾಚಾರ್ಯರ ಪಟ್ಟಿಗೆ ವಿಶ್ವಾರಾಧ್ಯರು ಸೇರಿದ್ದು ಹದಿಮೂರೇ ಶತಮಾನದ ನಂತರವೇ. ಮೊದಲು ಇದ್ದುದು ನಾಲ್ವರು ಆಚಾರ್ಯರು: ರೇವಣಾರಾಧ್ಯ, ಮರುಳಾರಾಧ್ಯ, ಪಂಡಿತಾರಾಧ್ಯ ಮತ್ತು ಏಕೋರಾಮಾರಾಧ್ಯ - ಇವರು ಹನ್ನೆರಡನೆಯ ಶತಮಾನದ ವಚನಕಾರರಿಂದ ಉಲ್ಲೇಖಗೊಂಡಿದ್ದಾರೆ. ಇವರಲ್ಲಿ ರೇವಣಾರಾಧ್ಯ ಬಸವಣ್ಣನವರ ಹಿರಿಯ ಸಮಕಾಲೀನರು. ಉಳಿದವರೂ ಅದೇ ಹನ್ನೆರಡನೆಯ ಶತಮಾನದವರಿರಬೇಕು.[11]

ಅದೇ ಹನ್ನೆರಡನೇ ಶತಮಾನದ ಶಿವಭಕ್ತ, ವಚನಕಾರ ಶಿವಲೆಂಕ ಮಂಚಣ್ಣನ ಜನ್ಮಸ್ಥಳ ಕಾಶಿ. ಇವನು 'ಪಂಡಿತತ್ರಯ'ರೆಂದು ಪ್ರಸಿದ್ಧರಾದವರಲ್ಲಿ ಒಬ್ಬ (ಉಳಿದ ಇಬ್ಬರು – ಶ್ರೀಪತಿ ಪಂಡಿತ ಮತ್ತು ಮಲ್ಲಿಕಾರ್ಜುನ ಪಂಡಿತ). 'ಮಂಚಣ್ಣ' ಹೆಸರೇ ಹೇಳುವಂತೆ ಅವನ ಪೂರ್ವಜರು ದಕ್ಷಿಣ ಭಾರತದಿಂದ, ಕರ್ನಾಟಕದಿಂದ ಕಾಶಿಗೆ ಹೋಗಿ ನೆಲಸಿದರವರೆಂದು ಸುಲಭವಾಗಿ ಊಹಿಸಬಹುದು. ಅವನ ಅಜ್ಜ ಸೋಮಶಂಭು ದೇಶಿಕನು ಮಹಾವಿದ್ವಾಸನಾಗಿದ್ದು ಕಾಮಿಕಾಗಮ ಮೊದಲಾದ ಆಗಮಗಳಿಗೆ ವ್ಯಾಖ್ಯಾನಗಳನ್ನು ಬರೆದನೆಂದು ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿ ಹೇಳಿದೆ.[12] ಅವನ ಮಗ ಶಂಭುಭಟ್ಟನ ಮಗನೇ ಶಿವಲೆಂಕ ಮಂಚಣ್ಣ.[13] ಅವನ ಹೆಸರೇ ಹೇಳುವಂತೆ ಕಾಶಿಯ ವಿಶ್ವೇಶ್ವರನಿಗೆ ಏಕೈಕ ನಿಷ್ಠೆಯ ಭಕ್ತನಾಗಿದ್ದು ಅವನು ವಿಶ್ವೇಶ್ವರನಿಗೆ ತನ್ನ ಹತ್ತು ಬೆರಳುಗಳನ್ನು ಸಮರ್ಪಿಸಿ ಮತ್ತೆ ಹಿಂದಕ್ಕೆ ಪಡೆಯುತ್ತಿದ್ದನೆಂಬ ಕತೆ ಪಾಲ್ಕುರಿಕೆ ಸೋಮನಾಥನ ತೆಲುಗು ಬಸವಪುರಾಣಮು ಕೃತಿಯಲ್ಲಿ ನಿರೂಪಿತವಾಗಿದೆ.[14] "ಜಗತ್ತಿಗೆ ಈಶ್ವರನೊಬ್ಬನೇ ಕರ್ತ, ವೀರಮಾಹೇಶ್ವರ (ವೀರಶೈವ) ಧರ್ಮವೇ ಶ್ರೇಷ್ಠ" ಎಂದು ಘೋಷಿಸುವ

ಧ್ವಜವನ್ನು, ಕಾಶಿಯಲ್ಲಿ ಸ್ಥಾಪಿಸಿದ್ದನು. ಪರಧರ್ಮದವರು ಅದಕ್ಕೆ ಸವಾಲು ಒಡ್ಡಿದಾಗ, ಅವನು ವಿಷ್ಣುವನ್ನು ಅವನ ದೇವಾಲಯದಿಂದ ಹೊರಡಿಸಿ, ಬೀದಿಯಲ್ಲಿ ನಡೆಯಿಸಿಕೊಂಡು ಬಂದು ಕಾಶಿ ವಿಶ್ವೇಶ್ವರನಿಗೆ ಬಾಗುವಂತೆ ಮಾಡುವ ಪವಾಡವನ್ನೇ ಮಾಡಿದವನು.[15] ಲಕ್ಕಣ್ಣ ದಂಡೇಶನ (೧೪೩೦) ಪ್ರಕಾರ, ವಿಷ್ಣುವು (ಬಿಂದುಮಾಧವನು) ಶಿವನಿಗೆ ಬಾಗಿರುವುದನ್ನು ಈಗಲೂ ನೋಡಬಹುದು ("ಈಗ ಕಾಶಿಪುರದೊಳೊಪ್ಪುತ್ತದೆ").[16] ಅವನೇ "ಕಾಶಿಯ ಶಿಲೆಯ ಕಾಯಕ"ದ ಭಕ್ತನೊಬ್ಬನ ವಿಷಯವನ್ನು ಪ್ರಸ್ತಾಪಿಸುತ್ತಾನೆ.[17] ಈ ಶಿವಭಕ್ತನು ಕಾಶಿಯಿಂದ ಶಿಲೆಯನ್ನು ತಂದು ಲಿಂಗಗಳನ್ನು ಮಾಡುತ್ತಿದ್ದ ಕಾಯಕದವನೋ ಏನೋ ತಿಳಿಯದು.

ಶಿವಲೆಂಕ ಮಂಚಣ್ಣನು ಕಲ್ಯಾಣದ ಬಸವಣ್ಣನವರ ಭಕ್ತಿಯನ್ನು ಕೇಳಿ ಅಲ್ಲಿಗೆ ಬಂದು, "ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ" ಎಂಬ ಅಂಕಿತದಲ್ಲಿ ವಚನಗಳನ್ನು ಬರೆದನು. ಅವನ ನೂರ ಮೂವತ್ತೆರಡು ವಚನಗಳು ಸಿಕ್ಕು ಅಚ್ಚಾಗಿವೆ.[18]

ಹರಿಹರ ರಾಘವಾಂಕರ ಸಮಕಾಲೀನನಾಗಿದ್ದ ಕೆರೆಯ ಪದ್ಮರಸನೂ ಅವನ ವಂಶಸ್ಥರೂ ಕಾಶಿ ವಿಶ್ವೇಶ್ವರನ ಅವಿಚ್ಛಿನ್ನ ಭಕ್ತರು. ಅವನ ವಂಶದ ಮೂಲಪುರುಷ ಮಲ್ಲರಸ ಅಥವಾ ಮಲ್ಲಿಕಾರ್ಜುನ ಪಂಡಿತನು ಕಲ್ಲುಕುರಿಕೆಯ ದೊರೆಯಾಗಿದ್ದು 'ವಿಶ್ವಪತಿ'ಯ (ಕಾಶಿಯ ವಿಶ್ವೇಶ್ವರ) ಅವತಾರದಂತಿದ್ದವನು. ಅವನ - ಮಗನೇ ಬಸವಣ್ಣನವರ ಸಮಕಾಲೀನ, ವೈಣಿಕ, ಶ್ರೇಷ್ಠ ವಚನಕಾರ ಸಕಲೇಶ ಮಾದರಸ (ಕ್ರಿ. ಶ. ೧೧೯೦). ಇವನ ಮಗ ಮಾಯಿದೇವನಿಗೆ ಹೊಯ್ಸಳ ದೊರೆ ನರಸಿಂಹ ಬಲ್ಲಾಳನ ದಂಡನಾಯಕನಾಗಿದ್ದ 'ಕಮ್ಮೆಕುಲ'ದ ಗೌರಪನ ಅಕ್ಕ ಮಂಗಲೆಯನ್ನು ಕೊಟ್ಟು ಮದುವೆ ಮಾಡಲಾಗಿತ್ತು.[19] ಮಾಯಿದೇವನ ಪತ್ನಿ ಗರ್ಭಿಣಿಯಾದಾಗ ಕಾಶಿಯ ವಿಶ್ವೇಶ್ವರನು ಯತಿವೇಷದಲ್ಲಿ ಅವನ ಕನಸಿನಲ್ಲಿ ಕಾಣಿಸಿಕೊಂಡು ಒಂದು ಲಿಂಗವನ್ನು ಕೊಟ್ಟು ಹುಟ್ಟುವ ಮಗುವಿಗೆ ಇದನ್ನು ಕಟ್ಟಿ ಆ ಮಗು ಪ್ರಾಪ್ತವಯಸ್ಕನಾದ ಮೇಲೆ ತನ್ನಲ್ಲಿಗೆ ಬರಬೇಕು ಎಂಬ ಸೂಚನೆಯನ್ನು ಕೊಟ್ಟನು. ಅದರಂತೆ ಪದ್ಮರಸ ಪ್ರಾಪ್ತವಯಸ್ಕನಾದ ಬಳಿಕ ತನ್ನ ಕೊನೆಯ ದಿನಗಳನ್ನು ಕಾಶಿಯಲ್ಲಿ ಕಳೆಯುತ್ತಾನೆ.

ಮಾಯಿದೇವನ ಮಗನೇ ಕೆರೆಯ ಪದ್ಮರಸ. ಅವನು ನೂರೆಂಟು ರುದ್ರಾಕ್ಷಿಗಳನ್ನು ಯಜ್ಞೋಪವೀತ ರೂಪದಲ್ಲಿ, ಜೊತೆಗೆ ಇಷ್ಟಲಿಂಗ ಹಾಗೂ ಯಜ್ಞ ಸೂತ್ರಗಳನ್ನು ಧರಿಸಿದ್ದನು. 'ಆರಾಧ್ಯ ಚಕ್ರವರ್ತಿ', 'ದೇಶಿಕಚಿಂತಾಮಣಿ' ಎಂದೂ ಕರೆಯಲಾಗಿರುವ ಅವನು ತನ್ನ ಹಿಂದಿನವರಂತೆ 'ಆಚಾರ್ಯ ಪಟ್ಟ'ವನ್ನು ಅಲಂಕರಿಸಿದ್ದ 'ಬ್ರಾಹ್ಮಣೋತ್ತಮಂ ವೀರಶೈವಾಚಾರ್ಯ'.[20]ಅವನು ದೋರ ಸಮುದ್ರದಲ್ಲಿ ತನ್ನ ಮಾವನ ಸ್ಥಾನವನ್ನು ('ದಂಡನಾಯಕ') ಪಡೆದು, ಅಲ್ಲಿ ಕೆರೆ ಕಟ್ಟಿಸಿ, ತಂದೆಯಂತೆ ತನ್ನ ಕೊನೆಯ ದಿನಗಳನ್ನು ಕಾಶಿಯಲ್ಲಿ ಕಳೆಯಲು ಹೊರಟು, ದಾರಿಯಲ್ಲಿ ಹಂಪೆಗೆ ಬಂದು ಹರಿಹರನಿಗೆ ಇನ್ನೆಂಟು ದಿನಗಳಲ್ಲಿ ನೀನು ವಿರೂಪಾಕ್ಷನಲ್ಲಿ ಲಿಂಗೈಕ್ಯನಾಗಲಿರುವೆ ಎಂಬ ಸುದ್ದಿಯನ್ನು ತಿಳಿಸಿ ಅಷ್ಟರಲ್ಲಿ ನಿನ್ನ ಅಪೂರ್ಣ ಕಾವ್ಯವನ್ನು ಮುಗಿಸು ಎಂದು ಸೂಚಿಸಿ ತೆರಳುತ್ತಾನೆ. ಪದ್ಮರಸನು ಗಂಗೆಯನ್ನು ದಾಟಿ ಕಾಶಿಗೆ ಬಂದು ವಿಶ್ವನಾಥನನ್ನು ದರ್ಶನ ಮಾಡಿ ಮಣಿಕರ್ಣಿಕಾ ಘಾಟ್‌ನಲ್ಲಿ ಶಿವಲೆಂಕ ಪಂಡಿತನು ವಿಶ್ವನಾಥನಿಗೆ ಎರಗಿಸಿದ ವಿಷ್ಣು ವಿಗ್ರಹವನ್ನು ನೋಡಿದನು. ಕೆಲವು ಕಾಲಾನಂತರ ಅವನು ಲಿಂಗೈಕ್ಯನಾದ ವಿಷಯ ತಿಳಿದ ಅವನ ಮಗ ಕುಮಾರ ಪದ್ಮರಸನು ಅದನ್ನು ಉತ್ಸವರೂಪದಲ್ಲಿ ಆಚರಿಸಿದನು.

ಕೆರೆಯ ಪದ್ಮರಸನು ತನ್ನ 'ದೀಕ್ಷಾ ಬೋಧೆ'ಯ ಆದಿ, ಅಂತ್ಯಗಳಲ್ಲಿ ಮತ್ತು ಮಧ್ಯೆ ಹಲವೆಡೆ ವಿಶ್ವನಾಥನನ್ನು ಸ್ಮರಿಸಿದ್ದಾನೆ.

*ಕಾಯಯ್ಯ ಸದ್ಗುರುಗೆ ಈಯಯ್ಯ ಸದ್ಗುರುವೆ*
*ನೋಯದಂತಿರಿಸು ಲಿಂಗಾಯತದಿ ಸದ್ಗುರುವೆ*

ಇದು ಅಲ್ಲಿಯ ಸ್ತೋತ್ರದ ಒಂದು ಮಾದರಿ. "ಅಂಗದೊಳು ಲಿಂಗಧಾರಣವಾಗಬೇಕು" ಎಂಬುದು ಒಂದು ಕಡೆ ಇರುವ ಅವನ ಬೋಧನೆ.

ಅವನ ಮಗ ಕುಮಾರ ಪದ್ಮರಸನ 'ಸಾನಂಥ ಚರಿತೆ'ಯಲ್ಲಿ ಸಂಸ್ಕೃತದ ಕಾಶೀ ಖಂಡ ಕೃತಿಯು ಕರ, ಉರ, ಕೊರಲು, ಕಕ್ಷ, ಶಿರ ಎಲ್ಲಿಯಾದರೂ ಸರಿಯೇ ಲಿಂಗವನ್ನು ಧರಿಸುವ ವಿಷಯವಿರುವ ಸಂಗತಿಯನ್ನು ಉಲ್ಲೇಖಿಸುವ ಸಂಸ್ಕೃತ ಶ್ಲೋಕವನ್ನು

ಕೊಡಲಾಗಿದೆ.[21] ಶೂದ್ರ, ಶ್ವಪಚರು ಶಿವಭಕ್ತರಾದರೆ ಅವರು ದ್ವಿಜರಿಗಿಂತ ಶ್ರೇಷ್ಠ ಎನ್ನುತ್ತಾನೆ ಕುಮಾರ ಪದ್ಮರಸ.[22] 'ಶಿವಾರ್ಚನ'ದಿಂದ ಮಾತ್ರ ಒಬ್ಬ ದಿಕ್ಕಿಗೆ 'ಬ್ರಾಹ್ಮಣಿಕೆ' ಸಂಪ್ರಾಪ್ತವಾಗುತ್ತದೆ.[23] ಕುಮಾರ ಪದ್ಮರಸನ (ಸು. ೧೨೪೦)ಮಗನ ಹೆಸರು ವಿಶ್ವರಾಧ್ಯ.[24]

ಇಂದು ಕಾಶಿಯ ಪ್ರಮುಖ ಮಠಗಳಲ್ಲಿ ಜಂಗಮವಾಡಿ ಮಠವೂ ಒಂದಾಗಿದೆ. ವಿಶ್ವೇಶ್ವರ ಲಿಂಗದಿಂದ ಮೂಡಿಬಂದರೆನ್ನಲಾದ ವಿಶ್ವಾರಾಧ್ಯರಿಂದ ಅದು ಸ್ಥಾಪನೆಗೊಂಡುದೆಂಬ ಪರಂಪರಾಗತ ನಂಬಿಕೆ ಇದೆ. ಆ ಮಠಕ್ಕೆ ಇಕ್ಕೇರಿ, ಮೈಸೂರು, ಕೊಡಗು ರಾಜರು ದತ್ತಿಗಳನ್ನು ಬರೆಯಿಸಿ ಶಾಸನಗಳನ್ನು ಹಾಕಿಸಿದ್ದಾರೆ. ಅದು ಚರಿತ್ರೆಯ ಈಚಿನ ಅಧ್ಯಾಯ. (ಅನುಬಂಧ - ೬ ನೋಡಿ).

ಮೇಲಿನ ಮಾಹಿತಿ ಒಂದು ತೋರ್ಬೆರಳು ಮಾತ್ರ. ಕಾಶಿಗೂ ಕರ್ನಾಟಕದ ವೀರಶೈವರಿಗೂ ಇರುವ ಸಂಬಂಧ ಹನ್ನೆರಡನೆಯ ಶತಮಾನಕ್ಕಿಂತ ಹಿಂದಕ್ಕೆ ಹೋಗುತ್ತದೆ. ಕಾಶಿಯಲ್ಲಿ ಹದಿನೈದನೇ ಶತಮಾನದ ಉತ್ತರಾರ್ಧದಲ್ಲಿ ವಿಶ್ವೇಶ್ವರನ ದೇವಾಲಯ ಭಗ್ನಗೊಂಡಾಗ ಅಲ್ಲಿದ್ದ ವಿಶ್ವನಾಥ ಲಿಂಗವನ್ನು ನೇಪಾಳಕ್ಕೆ ಸಾಗಿಸಿ ಅಲ್ಲಿ ಭಕ್ತಪುರದ ಜಂಗಂ ಮಠದ ಆವರಣದಲ್ಲಿ ಅದನ್ನು ಪುನಃ ಪ್ರತಿಷ್ಠಾಪಿಸುವಲ್ಲಿ ವೀರಶೈವರ (ಜಂಗಮರ) ಪ್ರಮುಖ ಪಾತ್ರವಿರುವಂತಿದೆ. (ಅನುಬಂಧ - ೬ ನೋಡಿ). ಹದಿನಾಲ್ಕನೇ ಶತಮಾನದ ಮಧ್ಯಭಾಗದಲ್ಲಿ ಭಕ್ತಪುರದ ಸಮೀಪ ಬನೆಪ ಊರಲ್ಲಿ ಶ್ರೀಪತಿ ಆರಾಧ್ಯಶರ್ಮನೆಂಬುವವನ ಮಗನಾದ ನಾರಾಯಣಪತಿ ಆರಾಧ್ಯ ಶರ್ಮನು ಕ್ರಿ. ಶ. ೧೩೬೦ರಲ್ಲಿ ಕಾಠಮಾಂಡೊದ ಪಶುಪತಿ ದೇವಾಲಯದಲ್ಲಿ ಶಿವಲಿಂಗದ ಪುನಃ ಪ್ರತಿಷ್ಠಾಪನೆಯಲ್ಲಿ ಭಾಗಿಯಾಗಿದ್ದ ಸಂಗತಿಯನ್ನಾಗಲೇ ನೋಡಿದ್ದೇವೆ. ಈಗಿನ ಜಂಗಂ ಮಠದ ಉಸ್ತುವಾರಿ ನೋಡಿಕೊಳ್ಳುತ್ತಿರುವ ಜಂಗಂ ಜನರು ಕೆರೆಯ ಪದ್ಮರಸನಂತೆ ಲಿಂಗ ಜನಿವಾರಗಳೆರಡನ್ನೂ ಧರಿಸುವ ಸಂಗತಿಯನ್ನೂ ಗಮನಿಸಿದ್ದೇವೆ. ಕಾಶಿಯಿಂದ ನೇಪಾಳಕ್ಕೆ ಹೋದ ಆರಾಧ್ಯ ಜಂಗಮರು ಕೆರೆಯ ಪದ್ಮರಸನ ವಂಶಸ್ಥರೇ ಸರಿ ಎಂದು ಹೇಳುವುದು ಅತಿ ದುಡುಕಿನ ಮಾತಾದರೂ, ಆ ವರ್ಗದ ಜನ ಕಾಶಿಯಿಂದ ನೇಪಾಳಕ್ಕೆ ಹೋಗಿ ಅಲ್ಲಿ ನೆಲಸಿದರು ಎಂದು ಹೇಳಲು ಯಾವುದೇ ಅನುಮಾನವೂ ಕಾಣಿಸುವುದಿಲ್ಲ. ಈ ಬಗ್ಗೆ ನನ್ನ ಹೊಳಹುಗಳನ್ನು ನೀಡಿದ್ದೇನೆ. ಹೆಚ್ಚಿನ ವಿಚಾರಕ್ಕೂ ಅವಕಾಶವಿದೆಯೆಂಬುದು ತೀರ ಸ್ಪಷ್ಟ.

[1] ನಾನ್ಯದೇವನ ವಂಶಸ್ಥರಾದ ಶ್ರೀದೇವ್‌ಬೈದ್ಯ ಮತ್ತು ಅವರ ಪತ್ನಿ ಬೆಂಗಳೂರಿನ ಪದ್ಮನಿ ಬೈದ್ಯ ಇವರಿಂದ ಬೆಂಗಳೂರಿನಲ್ಲಿ ಮಾಹಿತಿ ಸಂಗ್ರಹ. ಅವರ ಬಾಯಿಂದ ಕೇಳಿದ್ದನ್ನು, ಬೇರೆಡೆ ಸಿಕ್ಕ ಒಂದೆರಡು ಭಿನ್ನ ಭಿನ್ನ ವಿಷಯಕ ಸಂಗತಿಗಳನ್ನು ಅವುಗಳ ಮಾಹಿತಿ ಮೌಲ್ಯಕ್ಕಾಗಿ ಹಾಗೇ ಕೊಡುತ್ತಿದ್ದೇನೆ.

[2] ಭಾರತದಲ್ಲಿ ಬ್ರಾಹ್ಮಣನನ್ನು ಮಾತ್ರ ಗುರುತಿಸಬಹುದು.

[3] ನೆಲಮಂಗಲ ತಾಲೂಕು ಆದಿಚುಂಚನಗಿರಿ ಆಸುಪಾಸಿನಲ್ಲಿ 'ಕಾಪಾಲಿಕ' ಎಂಬ ಹೆಸರಿನ ಜನಾಂಗದವರಿದ್ದಾರೆ. ಅವರಲ್ಲಿ ಯಾವುದೇ ಕಾಪಾಲಿಕಾಚರಣೆಗಳೂ ಉಳಿದಿಲ್ಲ. ಆದಿಚುಂಚನಗಿರಿಯು ಅಲ್ಲಿನ ಸ್ಥಳಪುರಾಣದ ಪ್ರಕಾರ ಹಿಂದೊಮ್ಮೆ ಕಾಪಾಲಿಕ ಕೇಂದ್ರವಾಗಿತ್ತು. 'ಆದಿಚುಂಚನಗಿರಿ ಮಹಾತ್ಮ್ಯ' ಕೃತಿಯಲ್ಲಿ ಅದನ್ನು 'ಕಾಪಾಲಿ ಪೀಠ' ವೆಂದೇ ಕರೆದಿದೆ. ಅಲ್ಲಿಯ ಬೆಟ್ಟದ ಮೇಲೆ, ಭೈರವನ ಗುಡಿ ಮುಂಭಾಗದಲ್ಲಿ ರುಂಡದಿಂದ ಮುಂಡ ಬೇರೆಯಾಗಿರುವ ಮನುಷ್ಯರ ಶಿಲ್ಪಗಳಿವೆ. (ನೋಡಿ ಎಂ.ಚಿದಾನಂದಮೂರ್ತಿ : 'ಮಧ್ಯಕಾಲೀನ ಕರ್ನಾಟಕದ ಕೆಲವು ರಹಸ್ಯ ತಾಂತ್ರಿಕ ಪಂಥಗಳು'. ಸಂಶೋಧನ ತರಂಗ - ೧. ಪು.೧೦೩ - ೪)

[4] Dor Bahadur Bista : People of Nepal, p. 136. ಮೂರನೇ ಪ್ಯಾರಾದ ವಿಷಯ ಮಾತ್ರ ಈ ಕೃತಿಯಿಂದ.

[5] Varanasi through the Ages (Ed: T. P. Verma, D. P. Singh, J. S. Mishra), P. 36 – 47.

[6] P. B. Singh : Shiva's Universe in Varanasi, P. 303 – 11. ವಾರಣಾಸಿಯಲ್ಲಿ ಈಗ ಸುಮಾರು ಎರಡು ಸಾವಿರ ಮಂದಿರಗಳು ಐದು ಲಕ್ಷ ದೇವತಾ ವಿಗ್ರಹಗಳಿವೆಯೆಂದು ಒಂದು ಅಂದಾಜು.

[7] Baidyanath Saraswathi : Kashi (Myth and Reality of a Classical Cultural Tradition), P. 7 – 9.

[8] ೮೮. ಅದೇ, ಪು. ೩೬.

[9] ೮೯. ಹರಿಶಂಕರ್: ಕಾಶಿ ಕೆ. ಘಾಟ್ – ಕಲಾತ್ಮಕ ಏವಂ ಸಾಂಸ್ಕೃತಿಕ್‌ಅಧ್ಯಯನ್(ಹಿಂದಿ), ಪು. ೪೭.

[10] ೮೯ಅ. Om Prakash Gupta : "The Iconoclasts and Varanasi in Medieval times' (VaranAsi through the Ages, P.೫೧ – ೪). ಕಾಶಿಯಲ್ಲಿ ದೇವಸ್ಥಾನಗಳ ನಾಶದ ಹಲವು ವಿವರಗಳು ಇದರಲ್ಲಿವೆ. ಡಾ. ಗುಪ್ತರ ಪ್ರಕಾರ, ಮುಸ್ಲಿಮರಿಗೆ ಕಾಶಿಯಲ್ಲಿ ಎರಡು ಆಕರ್ಷಣೆಗಳು ಕಾಣಿಸಿದವು. ಒಂದು, ಆ ಪವಿತ್ರ ಕ್ಷೇತ್ರದ ಅಪವಿತ್ರೀಕರಣ ಮತ್ತು ವಿಶ್ವನಾಥ ದೇವಾಲಯದ, ಕಾಶಿಯ ಶ್ರೀಮಂತರ ಐಶ್ವರ್ಯದ ಲೂಟಿ.

[11] ಎಂ. ಚಿದಾನಂದಮೂರ್ತಿ : 'ಪಂಚಾಚಾರ್ಯರ ಬಗೆಗಿನ ವಿವಾದಕ್ಕೆ ಅಂತಿಮ ತೆರೆ'. ವಚನಶೋಧ, ಭಾಗ – ೨, ಪು. ೧೨ – ೫೩.

[12] ಸಂಪುಟ -II ಸಂ. ಆರ್. ಸಿ. ಹಿರೇಮಠ ಮತ್ತು ಎಂ. ಎಸ್. ಸುಂಕಾಪುರ, ಪು. ೨೦೭ – ೮.

[13] "ಲೆಂಕ" ಎಂದರೆ ಕನ್ನಡದಲ್ಲಿ ನೆಚ್ಚಿನ ಸೇವಕ, ಅನುಯಾಯಿ ಎಂದರ್ಥ. ರಾಜರ ಬಳಿ 'ಲೆಂಕವಾಳಿ'ಗಳೆಂಬ ಹೆಸರಿನ ನಿಷ್ಠಾವಂತ ಅಂಗರಕ್ಷಕರಿದ್ದು ಅವರು ಸದಾ ಅವರ ಬೆಂಗಾವಲಿಗೆ ಇರುತ್ತಿದ್ದರು.

[14] ಅನು : ಪಿ. ವಿ. ನಾರಾಯಣ, ಪು. ೩೮೩.

[15] ಅದೇ.

[16] ಶಿವತತ್ವ ಚಿಂತಾಮಣಿ (ಸಂ: ಎಸ್. ಬಸಪ್ಪ) , ೩೭.೧೧೬. ಕಾಶಿಯ ಬಿಂದು ಮಾಧವ ದೇವಾಲಯ ಪ್ರಸಿದ್ಧವಾದುದು. ಅವನು ಕಾಶಿಯ ರಕ್ಷಣಾ ದೇವತೆಗಳನ್ನು ಒಬ್ಬ.

[17] ಅದೇ, ಪು. ೩೯೦.

[18] ಸಮಗ್ರ ವಚನ ಸಂಪುಟ – ೯ (ಸಂ : ಬಿ. ಆರ್. ಹಿರೇಮಠ), ಪು. ೫೭ – ೮೯.

[19] ಬಸವಣ್ಣನವರ ತಂದೆಯದೂ ಕಮ್ಮೆಕುಲ.

[20] ಪದ್ಮಣಾಂಕನ ಪದ್ಮರಾಜಪುರಾಣ (ಸಂ: ಆರ್. ಸಿ. ಹಿರೇಮಠ), ಕುಮಾರ ಪದ್ಮರಸನ ಸಾನಂದ ಚರಿತೆ (ಸಂ: ಎಸ್. ಬಸಪ್ಪ), ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣ (ಸಂ: ಶಿ. ಶಿ. ಬಸವನಾಳ) ಇತ್ಯಾದಿ ಕೃತಿಗಳನ್ನು ನೋಡಿ.

[21] ಸಾನಂದ ಚರಿತೆ (ಸಂ: ಎಸ್. ಬಸಪ್ಪ), ಪು. ೧೭೮.

[22] ಅದೇ, ಪು. ೧೫೬ – ೭.

[23] ಅದೇ, ಪು. ೬೧

[24] ಮೈಸೂರು ಸರ್ಕಾರದಲ್ಲಿ ಉನ್ನತ ಅಧಿಕಾರಿಗಳಾಗಿದ್ದ ಮೈಸೂರಿನ (ಲಿಂ) ಜೆ. ಬಿ. ಮಲ್ಲಾರಾಧ್ಯರು ಕೆರೆಯ ಪದ್ಮರಸನ ವಂಶಸ್ಥರು.

# ಅನುಬಂಧ (೫-೬)

**ಅನುಬಂದ – ೫: "ಜಂಗಮ"ರು, ಭಾರತದಲ್ಲಿ**

''ಜಂಗಮ''ದ ಮೂಲ ಪರಿಕಲ್ಪನೆಗೆ ಪು. ೧೦ಳ ನೋಡಿ. ಮೊದಲು ನನಗೆ ಲಭ್ಯವಿರುವ ಮಾಹಿತಿಯನ್ನು ನೀಡುತ್ತೇನೆ. ಈ ಲೇಖನದಲ್ಲಿ ಭಾರತಾದ್ಯಂತ ಇರುವ ಜಂಗಮರ ಬಗ್ಗೆ ಬರೆದಿದ್ದೇನೆ. (ಹೆಚ್ಚಿನ ವಿವರಗಳನ್ನು ತಿಳಿಯಬಯಸುವವರು ನನ್ನ "ಜಂಗಮ ಜಾತಿಯಲ್ಲಿ ಅನುಶ್ರೇಣಿ" ಎಂಬ ಲೇಖನವನ್ನು ನೋಡಬಹುದು. ಆ ಲೇಖನವು ನನ್ನ ಸಂಪ್ರಬಂಧ ಸಂಕಲನ "ಸ್ಥಾವರ : ಜಂಗಮ" ಸಂಪುಟದಲ್ಲಿ ಪ್ರಕಟವಾಗಿದೆ.)

**ಜಂಗಮ್[1] :** ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ, ಪಂಜಾಬ್, ತಮಿಳುನಾಡು, ಆಂಧ್ರಪ್ರದೇಶ, ಜಮ್ಮು – ಕಾಶ್ಮೀರಗಳಲ್ಲಿರುವ ಜಂಗಮರು ("ಝಂಗಮ"ರು) ಶೈವರಾದ ಸನ್ಯಾಸಿಗಳು ಅಥವಾ ಪುರೋಹಿತ ವರ್ಗದವರು. ಆಂಧ್ರ, ತಮಿಳುನಾಡು ಬಿಟ್ಟರೆ ಉಳಿದ ಕಡೆ ಜಂಗಮರೆಲ್ಲ ಸಸ್ಯಾಹಾರಿಗಳು ಮತ್ತು ಶೈವಪುರೋಹಿತರಾದ ಅವರು ತಮ್ಮನ್ನು ಬ್ರಾಹ್ಮಣರಿಗೆ ಸಮನೆಂದು ಭಾವಿಸುತ್ತಾರೆ.

ಆಂಧ್ರದಲ್ಲಿ ಜಂಗಮರನ್ನು "ದೇವೇರ", "ಜಂಗಲು" ಎಂದೂ ಕರೆಯುತ್ತಾರೆ. ತೆಲುಗು ಮಾತನಾಡುವ ಅವರು ಸಾಧುಗಳಂತೆ ಬಟ್ಟೆ ಧರಿಸಿ, ನಂದಿ ಸಮೇತ ಶಿವಲಿಂಗವನ್ನು ಹಿಡಿದು ಸಂಚರಿಸುತ್ತಾರೆ. ತಲೆಗೆ ಪೇಟ, ಕಿವಿಗೆ ಉಂಗುರ, ರುದ್ರಾಕ್ಷ ಧರಿಸಿರುತ್ತಾರೆ. ಅವರಲ್ಲಿ ಗಣಾಯತಮ್‌ವರ್ಗದವರು ಸರಳ ಗಂಟೆಯನ್ನು ಹಿಡಿದಿದ್ದರೆ, ಲಿಂಗಾಯತಮ್‌ವರ್ಗದವರು ಲಿಂಗ ಸಮೇತ ಗಂಟೆಯನ್ನು ("ಲಿಂಗ ಗಂಟ") ಹಿಡಿದಿರುತ್ತಾರೆ. ತಿರುಪತಿಯಲ್ಲಿರುವ ಜಂಗಂ ಕ್ಷೇಮಾಭಿವೃದ್ಧಿ ಸಂಸ್ಥೆ ಪ್ರಕಾರ ಅವರಲ್ಲಿ ಬೇಡ ಜಂಗಮ, ಬುಡಗ, ಜಂಗ, ಪುಸಲ ಅಥವಾ ಪಗಡ ಜಂಗಮ, ಚುರುಕೆ ಜಂಗಮ, ಉಂಪುಡು ಜಂಗಮ, ಮಾಲಾ ಜಂಗಮ ಮತ್ತು ಸವರ ಜಂಗಮ ಎಂಬ ಭೇದಗಳಿವೆ. ಅವರಲ್ಲಿ ಕೆಲವರು ಲಿಂಗಾಯತರಾಗಿ ಜನಿವಾರವನ್ನೂ ಧರಿಸುತ್ತಾರೆ.[2] ಜಂಗಮರೆಲ್ಲ ಕುಳಿತ ಭಂಗಿಯಲ್ಲಿ ಶವವನ್ನು ಹೂಳುತ್ತಾರೆ.

ಜಂಗಮರ ವೃತ್ತಿಯೆಂದರೆ ಭಿಕ್ಷಾಟನೆ ಮತ್ತು ಕೆಳವರ್ಗದವರ ಮನೆಗಳಲ್ಲಿ ಪೌರೋಹಿತ್ಯ. ಕೆಲವರು ಲಾವಣಿ ("ಬುರ್ರ ಕಥಾ") ಹೇಳುತ್ತಾರೆ; ಕೆಲವರು 'ಹಗಲು ವೇಷ'ದವರೂ ಉಂಟು ("ಪಗಟಿ ವೇಷಗಾಳ್ಳು").

**ತಮಿಳುನಾಡಲ್ಲಿ[3]** ಜಂಗಮರನ್ನು ವೀರಶೈವ, ತಂಬಿರನ್, ದೇವರ್, ಆಂಡಿ, ವೀರಶೈವ ಜಂಗಂ ಎನ್ನುತ್ತಾರೆ. ಅವರಿಗೆ ಶೆಟ್ಟಿ, ಲಿಂಗಂ, ಪಂಡಾರಂ, ಅಯ್ಯರ್, ಚೆಟ್ಟಿ ಎಂಬ ವಂಶನಾಮಗಳುಂಟು. ಅವರಲ್ಲಿ "ಉಪ್ಪು". "ಪಪ್ಪು" (=ಬೇಳೆ) ಎಂಬ ಎರಡು ವರ್ಗಗಳುಂಟು. (ಇಬ್ಬರಿಗೂ ವಿವಾಹ ಸಂಬಂಧಗಳು ನಿಷಿದ್ಧವಲ್ಲ). ನಂದೀಶ್ವರ, ಭೃಂಗೀಶ್ವರ ಸೇರಿದಂತೆ ಐದು ಗೋತ್ರಗಳಿವೆ. ಇವರು ಮಾಂಸಾಹಾರಿಗಳು. ಮುಖ್ಯ ವೃತ್ತಿ ವ್ಯವಸಾಯ (ಹೆಚ್ಚಿನ ವಿವರಗಳಿಗೆ, ಮುಂದೆ ನೋಡಿ).

**ಮಧ್ಯಪ್ರದೇಶ[4]** ಜಂಗಮರು ಮೈಮೇಲೆ ಶಿವಲಿಂಗವನ್ನು ಧರಿಸುತ್ತಾರೆ. ಇಂದೋರ್, ದೇವಸ್, ಖಾಂಡ್ವಾ, ಜಬಲ್‌ಪುರ ಜಿಲ್ಲೆಗಳಲ್ಲಿರುವ ಇವರು ಅಹಲ್ಯಾಬಾಯಿ ಹೋಳ್ಕರ್‌ಕಾಲದಲ್ಲಿ ಮಹಾರಾಷ್ಟ್ರದಿಂದ ವಲಸೆ ಬಂದವರೆಂದು ಹೇಳಲಾಗಿದೆ. ಅವರ ಮಾತೃಭಾಷೆ ಮರಾಠಿ. ಶುದ್ಧ ಸಸ್ಯಹಾರಿಗಳಾದ ಅವರು ತಾವು ಬ್ರಾಹ್ಮಣರಿಗೆ ಸಮಾನರೆಂದು ಭಾವಿಸುತ್ತಾರೆ. ಮಗುವಿಗೆ ಹುಟ್ಟಿದ ಐದನೇ ದಿನಕ್ಕೆ ಲಿಂಗಧಾರಣೆ ನಡೆಯುತ್ತದೆ. ಶವದ ಕೈಯಲ್ಲಿ ಇಷ್ಟಲಿಂಗವನ್ನು ನೀಡಿ, ಬಳಿಕ ಹೂಳಲಾಗುತ್ತದೆ.

ಮಹಾರಾಷ್ಟ್ರದ ಜಂಗಮರು ಲಿಂಗಾಯತರ ಗುರುಗಳು. ರುದ್ರಾಕ್ಷ, ವಿಭೂತಿ, ಕರಡಗೆಯಲ್ಲಿ ಇಷ್ಟಲಿಂಗ ಧರಿಸುತ್ತಾರೆ. ಕಂಕುಳಲ್ಲಿನ ಜೋಳಿಗೆಯಲ್ಲಿ ಭಿಕ್ಷೆ ಹಾಕಿಸಿಕೊಳ್ಳುತ್ತಾರೆ. ಶುದ್ಧ ಸಸ್ಯಾಹಾರಿಗಳು. ಅವರಲ್ಲಿ ಮಠಪತಿ, ಮಠವಾಳ್‌ಎಂಬ ಎರಡು ವರ್ಗಗಳಿವೆ. ಮಠಪತಿಯು ಇತರ ಲಿಂಗಾಯತರ ಜೊತೆ ಸಂಬಂಧ ಬೆಳಸಿ ಅವರ ಗುರುಗಳಂತೆ ನಡೆದುಕೊಂಡರೆ, ಮಠವಾಳನು ಬ್ರಹ್ಮಚಾರಿಯಾಗಿ ಉಳಿದು ಧರ್ಮೋಪದೇಶ ಮಾಡುತ್ತಾನೆ. ಗೋದ್ರಾಳ್, ರಥ್ರಾಳ್, ಬೂಕಾಳ್, ಕೊಂತಾಳ್‌ಇವು ಅವರ ಕೆಲವು ವಂಶನಾಮಗಳು.

ಕಾಶಿಯ ಪೀಠವು ಅವರಿಗೆ ಅತಿದೊಡ್ಡ ಧಾರ್ಮಿಕ ಸಂಸ್ಥೆ. ಹುಟ್ಟು, ಮದುವೆ, ಸಾವು, ಇತರ ಹಬ್ಬಗಳು ಇಂತಹ ಸಂದರ್ಭಗಳಲ್ಲಿ ಭಕ್ತರು ನೀಡುವ ಕಾಣಿಕೆ ಅವರ ಮುಖ್ಯ ಆದಾಯ. ಕೆಲವರು ಶಿವದೇವಾಲಯಗಳ ಅರ್ಚಕರೂ ಹೌದು.

**ಜಮ್ಮು – ಕಾಶ್ಮೀರದಲ್ಲಿ[5]** ಜಂಗಮರು ತಮ್ಮನ್ನು "ಶಿವ - ಪಾರ್ವತಿ ವಿವಾಹ ಕಥಾ ವಾಚಕ್" ಎಂದು ಕರೆದುಕೊಳ್ಳುತ್ತಾರೆ. ಶಿವ - ಪಾರ್ವತಿಯರ ವಿವಾಹದ ಹಾಡುಗಳನ್ನು ಭಿಕ್ಷೆ ಸಮಯದಲ್ಲಿ ಹೇಳುವುದರಲ್ಲಿ ಅವರು ನಿಪುಣರು. ಉರ್ದು ಅಥವಾ ಹರ್ಯಾಣಿ ಅವರ ಭಾಷೆಯಾದರೆ ಅವರು ಬಳಸುವ ಲಿಪಿ ದೇವನಾಗರಿ, ಅಪ್ಪಟ ಸಸ್ಯಾಹಾರಿಗಳು ಅವರು. ಕಾವಿ, ತಲೆಗೆ ಸುತ್ತಿದ ವಿಶೇಷ ರುಮಾಲು, ಕಿವಿಯುಂಗುರ ಮತ್ತು ಕೈಯಲ್ಲಿ ಹಿಡಿದ ಚಿಕ್ಕ ಚರ್ಮವಾದ್ಯ ಇವುಗಳಿಂದ ಅವರನ್ನು ಸುಲಭವಾಗಿ ಗುರುತಿಸಬಹುದು. ಸತ್ತವರನ್ನು ಅವರು ದಹನ ಮಾಡುತ್ತಾರೆ. ಅವರ "ಜಂಗಮ್‌ಸಭಾ" ಸಂಘಟನೆಯು ಆ ವರ್ಗದ ಸಮಸ್ಯೆಗಳನ್ನು ಕುರಿತು ಪರಿಶೀಲಿಸುವ ವ್ಯವಸ್ಥೆಯಾಗಿದೆ. ಹಿಂದೂ ಪುರಾಣಗಳನ್ನು ಚೆನ್ನಾಗಿ ಬಲ್ಲ ಅವರು ತಮ್ಮನ್ನು ಹಿಂದೂಗಳೆಂದೇ ಭಾವಿಸುತ್ತಾರೆ. ಅವರು ವೈಷ್ಣೋ ದೇವಿ, ಭಾನುಪೊರ್ತೆ, ಅಮರನಾಥ್‌ಇತ್ಯಾದಿ ದೇವಾಲಯಗಳ ದರ್ಶನ ಮಾಡುತ್ತಾರೆ. ಅವರ ಮದುವೆಗಳಲ್ಲಿ ಬ್ರಾಹ್ಮಣರು ಪುರೋಹಿತರು. ಇತರ ಎಲ್ಲ ಹಿಂದೂ ವರ್ಗಗಳೊಡನೆ ಸಂಬಂಧ ಬೆಳೆಸುತ್ತಾರೆ.[6] ಅಂತಹ ಲಿಂಗಧಾರಿ, ಶಿವದೇವಾಲಯ ಪೂಜಾರಿ ವೀರಶೈವನನ್ನು ತಾವು ಕಾಶ್ಮೀರದಲ್ಲಿ ಭೇಟಿಯಾದುದಾಗಿ ಜಿ. ಆರ್. ಗುರುಮೂರ್ತಿಯವರು ತಿಳಿಸಿದ್ದಾರೆ.

**"ಮಾಲಾ ಜಂಗಂ":** ಆಂಧ್ರ ಪ್ರದೇಶದ "ಮಾಲಾ" ಹೆಸರಿನ ಜನರಲ್ಲಿ ಶೈವರಾದವರಿಗೆ ಪುರೋಹಿತರಾದ "ಮಾಲಾ ಜಂಗಂ" ಜನರು ವಿಭೂತಿಧಾರಿಗಳು.[7] ಮೆಹಬೂಬ್‌ನಗರ, ಮೇದಕ್, ನಲ್ಗೊಂಡ, ಹೈದರಾಬಾದ್‌ಜಿಲ್ಲೆಗಳಲ್ಲದೆ ಪಕ್ಕದ ಮಹಾರಾಷ್ಟ್ರ, ಕರ್ನಾಟಕದ ಜಿಲ್ಲೆಗಳಲ್ಲೂ ಇರುವ ಮಾಲಾ ಜಂಗಮರು ಶಿವನಾಗಮಯ್ಯನ[8] ಅನುಯಾಯಿಗಳೆಂದು ಕರೆದುಕೊಂಡು ಅಲ್ಲಮಪ್ರಭುವನ್ನು ಆರಾಧಿಸುತ್ತಾರೆ. (ಅವರಿಗೆ 'ಶಿವನಾಗ್ಮೈಯ'ರೆಂದೇ ಹೆಸರು). ಇವರ ಮಾತೃಭಾಷೆ ತೆಲಗು. ಮಾಲಾಜನರಲ್ಲಿ ಭಿಕ್ಷೆ ಮಾಡುವ ಅವರಿಗೆ ಮಾಂಸಾಹಾರ ನಿಷಿದ್ಧವಲ್ಲ. ಮಹಾರಾಷ್ಟ್ರದಲ್ಲಿ ೧೯೭೧ರಲ್ಲಿ ಅವರ ಜನಸಂಖ್ಯೆ ೯೮೬ ಇದ್ದುದು ೧೯೮೧ರಲ್ಲಿ ೧೯೩೫೫ ರಷ್ಟು ಏರಲು ಕಾರಣ, ಪರಿಶಿಷ್ಟ ವರ್ಗದವರ ಸವಲತ್ತು ಪಡೆಯಲು ವೀರಶೈವ ಜಂಗಮರು ತಮ್ಮನ್ನು "ಮಾಲಾ ಜಂಗಮ"ರೆಂದು ಕರೆದುಕೊಂಡುದು.[9] ಅವರು ಪೋಚಮ್ಮ, ಎಲ್ಲಮ್ಮ, ಮಹಿಷಮ್ಮ ದೇವತೆಗಳನ್ನು ಪೂಜಿಸುತ್ತಾರೆ.

**"ಬೇಡ ಜಂಗಮ" / "ಬುಡ್ಗ ಜಂಗಮ":[10]**

ಇವರು ಆಂಧ್ರದ ರಾಯಲ ಸೀಮೆ, ತೇಲಂಗಾಣ ಜಿಲ್ಲೆಗಳಲ್ಲಲ್ಲದೆ ಕರ್ನಾಟಕದ ಬೀದರ್, ಗುಲ್ಬರ್ಗಾ, ರಾಯಚೂರ್, ಬಳ್ಳಾರಿ ಜಿಲ್ಲೆಗಳಲ್ಲಿಯೂ ಇದ್ದಾರೆ. ಹೊಲೆಯ, ಮಾದಿಗರಿಗೆ ಇವರು ಪುರೋಹಿತರು ಮತ್ತು ಅವರಿಗೆ ಭವಿಷ್ಯ ಹೇಳುತ್ತಾರೆ. ಇವರು ವೀರಶೈವರಿಂದ ಭಿನ್ನ; ಮತ್ತು ಪರಿಶಿಷ್ಟ ಜಾತಿ ವರ್ಗಗಳಿಗೆ ಸೇರಿದ್ದಾರೆ. ಇವರ ಜಾತಿ ಹೆಸರು ಹೇಳಿಕೊಂಡು ಕೆಲ ವೀರಶೈವ ಜಂಗಮರು ಹುದ್ದೆಗಳನ್ನು ಪಡೆದಿರುವುದುಂಟು. ಬೇಡ ಜಂಗಮ, ಬುಡ್ಗ ಜಂಗಮರು ಬೇಟೆಗಾರರು ಮತ್ತು ಚಾಪೆ ಹೆಣೆಯುವ ಕೆಲಸ ಕೂಡ ಮಾಡುತ್ತಾರೆ. ಇವರು ಮಾಂಸಾಹಾರಿಗಳು. (ಬೇಡ ಜಂಗಮ, ಬುಡ್ಗ ಜಂಗಮರ ಬಗೆಗಿನ ಮೇಲಿನ ಮಾಹಿತಿ K. S. Singh ಅವರ India's Communities, IV, P. 346 ಇಲ್ಲಿಂದ. ಅವರ ಬಗ್ಗೆ ಹೆಚ್ಚಿನ ಮಾಹಿತಿಗೆ ದಾಸನೂರ ಕೂಸಣ್ಣ ಅವರ "ಶೋಷಿತ ಜಂಗಮರ ಮೀಸಲಾತಿ" ಎಂಬ ಕನ್ನಡ ಕೃತಿಯನ್ನೂ ನೋಡಬಹುದು.)

**ನಕ್ಕ ಜಂಗಮ[11]:** "ಸರದ ಜಂಗುವಾಳ್ಳು" ಎಂದೂ ಕರೆಯಲಾಗುವ ಇವರು ಆಂಧ್ರ ಶ್ರೀಕಾಕುಲಂ ಜಿಲ್ಲೆಯಲ್ಲಿದ್ದಾರೆ. ಲಿಂಗಾಯತರೆಂದು ಕರೆದುಕೊಳ್ಳುವುದರಿಂದ ಅವರನ್ನು "ಜಂಗಲು" ಎಂದೂ ಕರೆಯುತ್ತಾರೆ. ಅವರು ಶಿವಾರಾಧಕರು ಮತ್ತು ನಂದಿಯ ಭಕ್ತರು. ಅವರು ತಂಬೂರಿ ಹಿಡಿದು "ಸರ್ದ ರಾಮಾಯಣ"ವನ್ನು ಹಾಡುವುದರಿಂದ 'ಸರದ ಜಂಗಮ'ರೆಂದೂ ಪ್ರಸಿದ್ಧರಾಗಿದ್ದಾರೆ. ಅವರ ಮನೆ ಮಾತು ತೆಲುಗು. ಅವರು ಮದುವೆ ಸಮಯದಲ್ಲಿ ಯಜ್ಞೋಪವೀತವನ್ನು ಧರಿಸಿ ಪ್ರತಿವರ್ಷ ಜಂಗಲ ಹುಣ್ಣಿಮೆ ದಿನ ಅದನ್ನು ಬದಲಾಯಿಸುತ್ತಾರೆ. ಶವವನ್ನು ಕುಳಿತಿರುವ ಭಂಗಿಯಲ್ಲಿ ಹೂಳುತ್ತಾರೆ. ಭಿಕ್ಷೆ ಬೇಡುವುದು ಅವರ ಸಾಂಪ್ರದಾಯಕ ವೃತ್ತಿ. ("ನಕ್ಕ" ಎಂದರೆ ತೆಲುಗಲ್ಲಿ ನರಿ ಎಂದರ್ಥ.)

**ಮುಲಕ ಜಂಗಮ್[12]:** "ಜಂಗಂ", "ಜಂಗಮ", "ಜಂಗಲು", "ಜಂಗಮೊಲ್ಲು" ಈ ನಾಮಾಂತರಗಳಿರುವ ಇವರು ಮೈಮೇಲೆ ಲಿಂಗವನ್ನು ಹಣೆಗೆ ಭಸ್ಮವನ್ನು ಧರಿಸುತ್ತಾರೆ. ಅವರಲ್ಲಿ ಮಾಂಸಾಹಾರ ಮದ್ಯಪಾನ ಉಂಟು. ತೆಲುಗು ಮಾತೃಭಾಷೆಯ ಅವರು ತಾವು ಬಸವಣ್ಣನವರ ನಿಷ್ಠಾವಂತ ಅನುಯಾಯಿಗಳೆಂದು ಭಾವಿಸುವುದಿಲ್ಲ. (ಆಂಧ್ರದಲ್ಲಿ "ಜಂಗಮ" ಎಂಬುದು ಕೆಲವೆಡೆ ಬಸವಣ್ಣನವರಿಗೆ ನಿಷ್ಠೆ ತೋರುವ ಲಿಂಗಾಯತರ ಸೂಚಕವೂ ಹೌದು.)ಆಂಧ್ರದ ಚಿತ್ತೂರು, ನೆಲ್ಲೂರು, ಕರ್ನೂಲು, ಕಡಪ, ಅನಂತಪುರ, ಕರ್ನಾಟಕದ ಬಳ್ಳಾರಿ ಇತ್ಯಾದಿ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ (ತಮಿಳುನಾಡಲ್ಲೂ ಉಂಟು). ಲಿಂಗ, ವಿಭೂತಿಗಳಲ್ಲದೆ ಅವರ ಮೈಮೇಲೆ ರುದ್ರಾಕ್ಷಿ ಮಾಲೆ, ದೊಡ್ಡ ನಿಲುವಂಗಿ, ಮುಂಗೈ ಬಳೆ, ಕಾಲಿಗೆ ಗೆಜ್ಜೆ, ಜೋಳಿಗೆ ಇವೂ ಇರುತ್ತವೆ. ಅವರು ಮಾಂಸಾಹಾರಿಗಳು. 'ಜೆಮ್ಮಿ', 'ಶಿವ' ಎಂಬುವು ಅವರ ಗೋತ್ರ ನಾಮಗಳು. ತಮ್ಮನ್ನು ಶೂದ್ರರೆಂದು ಅವರು ಕರೆದುಕೊಳ್ಳುತ್ತಾರೆ. ಹಲವರು ಯಜ್ಞೋಪವೀತಧಾರಿಗಳೂ ಹೌದು. ಕುಳಿತ ಭಂಗಿಯಲ್ಲಿ ಅವರು ಶವಗಳನ್ನು ಹೂಳುತ್ತಾರೆ. ಹಾಡುತ್ತ ಭಿಕ್ಷೆ ಬೇಡುವುದು, ಪ್ರಾಣಿಗಳ ಹಕ್ಕಿಗಳ ಬೇಟೆ ಆಡುವುದು ಅವರ ವೃತ್ತಿ. ಈಶ್ವರ ಪ್ರಧಾನ ದೈವವಾದರೂ ಭೈರವ, ವೀರಭದ್ರ, ಅಂಕಲಮ್ಮ, ಗಂಗಮ್ಮ ಪೋಲೇರಮ್ಮ; ಭದ್ರಕಾಳಿ ಅವರ ಇತರ ಮುಖ್ಯ ದೈವಗಳಲ್ಲಿ ಕೆಲವು. ಮಲ್ಲಿಕಾರ್ಜುನಸ್ವಾಮಿ, ಕಾಳಹಸ್ತೇಶ್ವರ, ಕಪಿಲೇಶ್ವರ ಇತ್ಯಾದಿ ಪ್ರಾದೇಶಿಕ ದೈವಗಳ ಭಕ್ತರೂ ಹೌದು. ಶಿವರಾತ್ರಿ, ದಸರಾ, ಗೌರಿ – ಗಣಪತಿ ಪೂಜೆ, ಸಂಕ್ರಾಂತಿ, ಉಗಾದಿ, ಬಸವ ಜಯಂತಿ ಇವು ಅವರ ಕೆಲವು ಹಬ್ಬಗಳು. ಬ್ರಾಹ್ಮಣ, ವೈಶ್ಯ, ಬಲಿಜ, ಕಾಪು ಮತ್ತು ಇತರ ಜಂಗಂ ಜಾತಿಗಳಿಂದ ಅನ್ನ; ನೀರು ಸ್ವೀಕರಿಸುತ್ತಾರೆ. ಗಂಟಾ ಬುಡಿಗಿ, ಬೇಡ ಚುರುಕು ಜಂಗಮ ಉಪಜಾತಿಗಳ ಜೊತೆ ಸಂಬಂಧವನ್ನು ಬೆಳೆಸುತ್ತಾರೆ. ಆರಾಧ್ಯರು, ಜಂಗಮರು, ಪಂಡಾರಂ (ಇವರೂ ಲಿಂಗಧಾರಿಗಳೇ), ವೀರಶೈವರು ಇವರ ಗುರುಗಳು. ದಲಿತ ವರ್ಗದವರನ್ನು ಬಿಟ್ಟರೆ ಇತರರ ಜೊತೆ ಬಾವಿ ನೀರನ್ನು ಬಳಸುತ್ತಾರೆ.[13]

**"ತೆಲುಗು ಜಂಗಮುಲು":** ತುಮಕೂರು ಜಿಲ್ಲೆ ತಿಪಟೂರು ತಾಲೂಕಿನಲ್ಲಿ "ತೆಲುಗು ಜಂಗಮುಲು" ಜಾತಿ ಜನರಿದ್ದಾರೆ. ಅವರ ಮನೆ ಮಾತು ತೆಲುಗಾದರೂ ಅವರು ಹಾಡುವ ಹಾಡುಗಳೆಲ್ಲ ಕನ್ನಡದಲ್ಲಿರುತ್ತವೆ (ಬಾಲನಾಗಮ್ಮ, ಗಂಗೆ ಗೌರಿ ಜಗಳ ಇತ್ಯಾದಿ). ವೀರಭದ್ರ ಅವರ ಕುಲದೈವ. ಅವರ ಹುಡುಗ ಹುಡುಗಿಯರಿಗೆ ಮದುವೆ ಸಮಯದಲ್ಲಿ ಲಿಂಗಧಾರಣೆಯಾಗುತ್ತದೆ. ಅವರ ಮುಖ್ಯಸ್ಥನನ್ನು "ಗಣಾಚಾರಿ"ಯೆನ್ನುತ್ತಾರೆ. ಅವರಲ್ಲಿ ಕೆಲವರು ಏಕತಾರಿ ವಾದ್ಯ ಹಿಡಿದು ಹಾಡುಗಳನ್ನು ಹಾಡುತ್ತ ಭಿಕ್ಷೆ ಎತ್ತಿ ಜೀವನ ಸಾಗಿಸುತ್ತಾರೆ. ಶವಗಳನ್ನು ಹೂಳುತ್ತಾರೆ.[14]

**"ಜಂಗಂ" ಬಗ್ಗೆ ಇನ್ನಷ್ಟು ಮಾಹಿತಿ:**

'ಜಂಗಮ'ರ ಬಗ್ಗೆ ಔತ್ತರೇಯ ಹಿಂದಿ, ಸಂಸ್ಕೃತ ಸಾಹಿತ್ಯದಲ್ಲಿ ದೊರಕುವ ಮಾಹಿತಿ ಹೀಗಿದೆ: ಸಂಸ್ಕೃತದ ಶಂಕರ ವಿಜಯದ 'ಶೈವಮತ ನಿರಾಕರಣಂ' ಭಾಗದಲ್ಲಿ ಜಂಗಮನನ್ನು ಎದೆಯ ಮೇಲೆ ತ್ರಿಶೂಲ, ತಲೆಯಲ್ಲಿ ಶಿಲೆಯ ಶಿವಲಿಂಗ ಧರಿಸುವಾತ ಎಂದಿದೆ ("ಹೃದಿ ತ್ರಿಶೂಲಂ, ಶಿರಸಿ ಪಾಷಾಣಲಿಂಗಂ ಚ ಧಾರಯಂತೋ ಜಂಗಮಾಃ") ಚಿದಂಬರ ದಾಯಿಯ (೧೨೦೦?) ಹಿಂದಿ "ಪೃಥ್ವಿರಾಜ ರಾಸೋ"ದಲ್ಲಿ ಒಬ್ಬ ಜಂಗಮನ ಉಲ್ಲೇಖವಿದೆ. ೧೪೦೦ಕ್ಕಿಂತ ಹಿಂದಿನ ಚರ್ಪಟನಾಥನ ಬರಹದಲ್ಲಿ – ನವನಾಥರಲ್ಲಿ ಒಬ್ಬ ಈತ – ಜಂಗಮರ ಉಲ್ಲೇಖವಿದೆ. ಕಬೀರನು (೧೫ನೇ ಶ.) ಜಟಾಧಾರಿ ಭಸ್ಮಧಾರಿ ಶಿವಶಕ್ತಿ ಆರಾಧಕ 'ಜಂಗಮ'ನನ್ನು ಹೆಸರಿಸಿದ್ದಾರೆ. ದೇವಗಿರಿಯ ರಾಜಕುಮಾರಿಯೊಬ್ಬಳಿಗೆ ಒಬ್ಬ ಜಂಗಮನು ವೀಣಾವಾದನ ಹೇಳಿಕೊಟ್ಟಂತೆ ೧೪೭೫ರ ಒಂದು ಕೃತಿಯಲ್ಲಿದೆ. ಜಂಗಮರು ವೀಣಾವಾದನ ಪುಟಗಳೂ ಯೋಗ ನಿಷ್ಣಾತರೂ ಆಗಿದ್ದಂತೆ ಹಿಂದೆ ಸಾಹಿತ್ಯದಲ್ಲಿದೆ. ರಾಜಸ್ಥಾನದ ಪ್ರಸಿದ್ಧ ಶಿವಮಂದಿರ ಏಕಲಿಂಗಜೀ ದೇವಾಲಯದ ಅರ್ಚಕರು ಲಿಂಗಾಯತರು. ರಾಜಸ್ಥಾನದ ರಜಪೂತರು ಮೂಲತಃ ಶೈವರು. ಅವರು ಯುದ್ಧರಂಗಕ್ಕೆ ತಮ್ಮೊಡನೆ ಶಿವಲಿಂಗವನ್ನೂ ಒಯ್ಯುತ್ತಿದ್ದರೆಂದು ಜೇಮ್ಸ್‌ಟಾಡ್‌ತನ್ನ "Annals and Antiquities of Rajasthan" ಕೃತಿಯಲ್ಲಿ ಉಲ್ಲೇಖಿಸಿದ್ದಾನೆ.[15] ಮಧ್ಯಭಾರತದ ಭಾರಶಿವ ದೊರೆಗಳು (೭ – ೮ಶ.) ಹೆಗಲ ಮೇಲೆ ಶಿವಲಿಂಗವನ್ನು ಒಯ್ಯುತ್ತಿದ್ದರೆಂಬುದು ಪ್ರಸಿದ್ಧ ವಿಷಯ. ಪಲ್ಲವರ (೬ – ೭ಶ.)ಶಾಸನಗಳಲ್ಲಿ ಅವರು ತಲೆಯಲ್ಲಿ ಶಿವಲಿಂಗವನ್ನು ಧರಿಸುತ್ತಿದ್ದರು ಎಂದು ದಾಖಲಾಗಿದೆ. (South Indian Inscriptions. I. No.21 – 22).

**ಆಂಧ್ರದ "ಜಂಗಂ" ವರ್ಗ:**

ಆಂಧ್ರದ "ಜಂಗಂ" ಜನ ತಲೆಕೂದಲು ತೆಗೆಯಿಸಿ ಕೊರಳಲ್ಲಿ ಅಥವಾ ತೋಳಿಗೆ ಲಿಂಗ ಕಟ್ಟಿಕೊಂಡು ವಿಭೂತಿ ಧರಿಸುತ್ತಾರೆ. ಕೋಲಿನ ತುದಿಗೆ ತ್ರಿಶೂಲ ಸಿಕ್ಕಿಸಿ ಕೊರಳಲ್ಲಿ ರುದ್ರಾಕ್ಷಿ ಮಾಲೆ ಧರಿಸಿ, ಎಡಬಗಲಿಗೆ ಗಂಟೆ ಶಂಖ ನೇತು ಹಾಕಿ ಬಲಗೈಯಲ್ಲಿ ಭಿಕ್ಷಾಪಾತ್ರೆ ಹಿಡಿದು ಭಿಕ್ಷೆ ಮಾಡುತ್ತಾರೆ. ಮನೆಗಳ ಮುಂದೆ ನಿಂತು ಗಂಟೆ ಸದ್ದು ಮಾಡಿ, ಶಂಖ ಊದಿ 'ಮಹಾಶಂಭೋ' ಎಂದು ಕೂಗಿ, ತ್ರಿಶೂಲ ಎತ್ತಿಹಿಡಿದು ಹಾಡುತ್ತಾರೆ. ಕೆಳವರ್ಗಕ್ಕೆ ಸೇರಿದ ಅವರಲ್ಲಿ ಇನ್ನಾವುದೇ ಜಾತಿಭೇದ ಇಲ್ಲವೆಂಬುದು ಗಮನಾರ್ಹ (ಇವರೂ ಮೇಲೆ ಹೇಳಿದ "ತೆಲುಗುಂ ಜಂಗಂ" ವರ್ಗದವರೂ ಒಂದೇ ಆಗಿರಬಹುದು.)ಅದೇ ಆಂಧ್ರದಲ್ಲಿ "ಕರ್ಣ (ರ್ಣಾ)ಭಕ್ತುಲು" ಎಂಬ ಹೆಸರಿನ ವೀರಶೈವರು ತಾವು ಬಸವಣ್ಣನ ಅನುಯಾಯಿಗಳೆಂದು ಭಾವಿಸುತ್ತಾರೆ. (ಕೆ. ಎಸ್. ಸಿಂಗ್‌ಅವರ ಕೃತಿಯಲ್ಲಿ ಆ ಬಗ್ಗೆ ವಿವರಗಳಿವೆ).

**ತಮಿಳು "ಜಂಗಂ" – ಹೆಚ್ಚಿನ ವಿವರಗಳು:**

ತಮಿಳುನಾಡಿನ "ಜಂಗಮ್‌ಪಂಡಾರ"ರ ಮನೆ ಮಾತು ತೆಲುಗು ಹಾಗೂ ತಮಿಳು. 'ಪಂಡಾರ' ಎನ್ನುವುದು ಅವರು ದೇವಾಲಯದ ಐಶ್ವರ್ಯ, ಆಸ್ತಿ, ಆಗುಹೋಗುಗಳ ಮೇಲ್ವಿಚಾರಕರು ಎಂಬುದರ ಸಂಕೇತ. ಅಲ್ಲಿನ ಹಲವು ಶಿವದೇವಾಲಯಗಳಲ್ಲಿ ಈ ಲಿಂಗಧಾರಿ ಜಂಗಮರು ಅರ್ಚಕರಾಗಿದ್ದು ತೇವಾರಂ, ತಿರುವಾಚಗಂ ಮತ್ತು ಇತರ ಸ್ತೋತ್ರಗಳನ್ನು ಹಾಡುತ್ತಾರೆ. ಅವರ ಹೆಸರುಗಳ ಮುಂದೆ 'ಪಂಡಾರಂ' ಎಂಬ ವಂಶನಾಮವಿರುತ್ತದೆ (ಇದೇ ಆಂಧ್ರದಲ್ಲಿ "ಭಂಡಾರಂ"). ಇವರಿಗೆ ತಮಿಳುನಾಡಲ್ಲಿ ಬ್ರಾಹ್ಮಣರಿಗೆ ಸಮಸಮನಾದ ಸಾಮಾಜಿಕ ಸ್ಥಾನವಿದೆ. (ಬೆಂಗಳೂರಲ್ಲಿ ತಮಿಳು ಜಂಗಂ ಸಮುದಾಯದ ಎರಡು ಸಾವಿರ ಕುಟುಂಬಗಳಿವೆ.[16]) ತಮಿಳುನಾಡಲ್ಲಿ (ಮತ್ತು ಇತರ ಕಡೆಯೂ ಕೂಡ)ಜಂಗಂ ಮೈಮೇಲೆ ಧರಿಸುವ ಅಥವಾ ಪುಟ್ಟ ಪೆಟ್ಟಿಗೆಯಲ್ಲಿಟ್ಟು ಪೂಜಿಸುವ ಇಷ್ಟಲಿಂಗವು ದೇವಾಲಯಗಳ ಲಿಂಗದ ಸಂಕ್ಷಿಪ್ತ ಆಕೃತಿಯದ್ದಾಗಿರುತ್ತಾರೆ: ಇದೇ ನಿಜವಾದ 'ಇಷ್ಟಲಿಂಗ' (ಕರ್ನಾಟಕದಲ್ಲಿ ಅನುಕೂಲಕ್ಕಾಗಿ ಅದರ ಮೇಲೆ ಗೋಳಾಕಾರದಲ್ಲಿ 'ಕಂತೆ' ಕಟ್ಟಿರುತ್ತಾರೆ).

"ಜಂಗಂ ಪಂಡಾರರು ವಿವಾಹ ಸಮಯದಲ್ಲಿ ಕಡ್ಡಾಯವಾಗಿ ವಧೂ - ವರರಿಗೆ ಲಿಂಗಧಾರಣೆ ಮಾಡಿಸಿ ಇಷ್ಟಲಿಂಗ ಪೂಜಾ ವಿಧಾನ ಹೇಳಿಕೊಡುತ್ತಾರೆ."[17] ಆದರೂ, ದಿನವೂ ಇಷ್ಟಲಿಂಗ ಪೂಜೆಯನ್ನು ಮುಂದುವರಿಸುವವರು ಕಡಿಮೆ. ಮುಟ್ಟು ಮೈಲಿಗೆ ಇರುವುದರಿಂದ ಸ್ತ್ರೀಯರು ಇಷ್ಟಲಿಂಗ ಧರಿಸಬಾರದು ಎನ್ನುವವರೂ ಇದ್ದಾರೆ. ಲಿಂಗವನ್ನು ಕಟ್ಟುವ ಪದ್ಧತಿ ಇದ್ದರೂ, ಒಂದು ವಂಶದಲ್ಲಿ ಒಬ್ಬ ಹಿರಿಯನು ಲಿಂಗವನ್ನು ಸದಾ ಧರಿಸಿದ್ದು ("ಸಜ್ಜೆ" - ಕರಡಿಗೆ), ಆ ಹಿರಿಯ ಗತಿಸಿದ ನಂತರ ಅದೇ ಕುಟುಂಬದ ಇನ್ನೊಬ್ಬ ಹಿರಿಯನು ಲಿಂಗ ಧರಿಸಿ "ಅಂದಿನಿಂದ ಪತ್ನಿಯ ಸಂಪರ್ಕ ತೊರೆಯುವ ವಾಡಿಕೆಯೂ ಉಂಟು."[18] ಅವರ ಬಗ್ಗೆ ಜನಕ್ಕೆ ತುಂಬು ಗೌರವ. ಕೆಲವರು ಇಷ್ಟಲಿಂಗವನ್ನು ಒಂದು ಲೋಹದ ಚಿಕ್ಕ ಪೆಟ್ಟಿಗೆಯಲ್ಲಿಟ್ಟು ಅದನ್ನು ತಾವು ಹೋದ ಕಡೆಗೆಲ್ಲ ಕೊಂಡೊಯ್ಯುವ ಪದ್ಧತಿಯನ್ನೂ ಅನುಸರಿಸುತ್ತಾರೆ.[19] ತಮಿಳು ಜಂಗಂ ಅಥವಾ ಪಂಡಾರರು ಮಾಂಸಾಹಾರಿಗಳಾದರೂ, ಮೈಮೇಲೆ ಲಿಂಗವನ್ನು ಧರಿಸಿದವರು ಸಸ್ಯಹಾರಿಗಳಾಗಿ ಪರಿವರ್ತನೆ ಹೊಂದುತ್ತಾರೆ.

ವಚನಕಾರರ "ಗುರು - ಲಿಂಗ - ಜಂಗಮ" ಮೂಲ ಪರಿಕಲ್ಪನೆಯ "ಜಂಗಮ"ವು ಇಂದಿನ ಹುಟ್ಟು ಜಂಗಮರನ್ನು ಸೂಚಿಸುವುದಿಲ್ಲ. ಯಾವುದೇ ಜಾತಿಯಲ್ಲಿ ಹುಟ್ಟಿದ್ದರೂ, ಲಿಂಗದೀಕ್ಷೆ ಪಡೆದು ನಿತ್ಯ ಸಂಚಾರಿಯಾಗಿ ಶಿವಧ್ಯಾನದಲ್ಲಿ ತೊಡಗಿರುತ್ತಿದ್ದ ವ್ಯಕ್ತಿಯೇ ಜಂಗಮನೆನ್ನಿಸಿಕೊಳ್ಳುತ್ತಿದ್ದನೆಂಬ ಊಹೆಗೆ[20] ಮೇಲಿನ ಮಾಹಿತಿ ಬಹು ಪುಷ್ಟಿಯನ್ನು ನೀಡುತ್ತದೆ. 'ಜಂಗಮ' ಒಂದು ಬಗೆಯ ಅರೆ ಸನ್ಯಾಸಿ; ಸದಾ ಸಂಚಾರಿ; ಸದಾ ಶಿವಪೂಜೆ ಶಿವಧ್ಯಾನದಲ್ಲಿರುವ ವ್ಯಕ್ತಿ. ಅವನು ಜನರ ಕಣ್ಣಲ್ಲಿ ಓಡಾಡುವ ಶಿವ (ಅಥವಾ ಶಿವಲಿಂಗ).

ಅಖಿಲ ಭಾರತ ವ್ಯಾಪ್ತಿಯುಳ್ಳ 'ಜಂಗಂ' ಜಾತಿಯ ಜನರ ಸಮಗ್ರ ಸಮೀಕ್ಷೆ, ವಚನ ವಙ್ಮಯ ಸೇರಿದಂತೆ ಇಡೀ ವೀರಶೈವ ಸಾಹಿತ್ಯ, ಇಂದಿನ ಜಂಗಮರ ಜೀವನ ವಿಧಾನ ಇವುಗಳ ಸಮಗ್ರ ಅಧ್ಯಯನವು ವೀರಶೈವ ಧರ್ಮದ ಮೂಲದ ಬಗ್ಗೆ ಬಹು ಒಳ್ಳೆಯ ಬೆಳಕನ್ನು ಬೀರುವ ಸಾಧ್ಯತೆ ಇದೆ. 'ಜಂಗಂ' ಜನರ ತೌಲನಿಕ ಅಧ್ಯಯನವು ಮೂಲ ವೀರಶೈವದ (Proto – Virashaivism) ಪುನಾರಚನೆಗೆ ಸಹಾಯಕ. ಆದರೆ ಆ ಅಧ್ಯಯನವು ಶ್ರಮಪೂರ್ಣವೂ ಅಷ್ಟೇ ಕಠೋರ ವಸ್ತುನಿಷ್ಠವೂ ಆಗಿರುವ ಅಗತ್ಯವೂ ಇದೆ.

**ಕರ್ನಾಟಕದ ಜಂಗಮರು:**

ಕರ್ನಾಟಕದ ಜಂಗಮರನ್ನು ಮಧ್ಯ ಮತ್ತು ಉತ್ತರ ಕರ್ನಾಟಕಗಳಲ್ಲಿ “ಅಯ್ನೋರು” (ಐನೋರು, ಅಯ್ಯನವರು) ಎಂದು ಕರೆಯುತ್ತಾರೆ. ಅವರು ವೀರಶೈವ (ಲಿಂಗಾಯತ) ಸಮಾಜದ ಪುರೋಹಿತರು. ಅವರ ಹೆಸರುಗಳು ಸಾಮಾನ್ಯವಾಗಿ ಅಯ್ಯ ಎಂದು ಕೊನೆಯಾಗುತ್ತವೆ (ಕೊಟ್ರಯ್ಯ, ಬಸಯ್ಯ, ಸಿದ್ಧಯ್ಯ, ವೀರಯ್ಯ ಇತ್ಯಾದಿ). ಮಠ ಎಂಬ ವಂಶನಾಮವಿರುವವರೂ ಜಂಗಮರೇ (ಉದಾಃ ಹಿರೇಮಠ, ಸವದತ್ತಿಮಠ, ಭೂಸನೂರಮಠ ಇತ್ಯಾದಿ).

ಜಂಗಮರು ವೀರಶೈವರಲ್ಲಿ ಪ್ರತ್ಯೇಕಿಸಬಹುದಾದ ಒಂದು ಸ್ಪಷ್ಟ ಜಾತಿ. ಜಂಗಮ ತಂದೆ ತಾಯಿಗಳ ಮಗ ಸ್ವಾಭಾವಿಕವಾಗಿ ಜಂಗಮನೆನ್ನಿಸಿಕೊಳ್ಳುತ್ತಾನೆ. ಮಗು ಹುಟ್ಟಿದಾಗ ಒಬ್ಬ ಜಂಗಮನ ಕೈಯಲ್ಲಿ ಆ ಮಗುವಿಗೆ ಲಿಂಗವೊಂದನ್ನು ಕಟ್ಟಿಸಲಾಗುತ್ತದೆ. (ಅದನ್ನು ತೊಟ್ಟಿಲಿಗೆ ಕಟ್ಟಲಾಗುತ್ತದೆ). ಮುಂದೆ ಹತ್ತು ಹನ್ನೆರಡು ವರ್ಷಗಳ ಬಾಲಕನಾದಾಗ ಅವನಿಗೆ ಶಾಸ್ತ್ರೋಕ್ತ ಲಿಂಗದೀಕ್ಷೆಯಾಗುತ್ತದೆ. ಅದನ್ನು ‘ಅಯ್ಯಾಚಾರ’ವೆನ್ನುತ್ತಾರೆ. ಅಯ್ಯಾಚಾರ ಆದ ವ್ಯಕ್ತಿ ಮಾತ್ರ ಪೌರೋಹಿತ್ಯಕ್ಕೆ ಅರ್ಹನಾಗುತ್ತಾನೆ. ಆಗ ಒಬ್ಬ ಪಟ್ಟದ್ದೇವರಿಂದ ಪಡೆದ ಲಿಂಗವನ್ನು ಅವನು ಸದಾ ಧರಿಸಿರಬೇಕು; ಮತ್ತು ಅದನ್ನು ದಿನವೂ ಬೆಳಿಗ್ಗೆ ಸ್ನಾನ ಮಾಡಿ ಪೂಜಿಸಿದ ಮೇಲೆ ಮಾತ್ರ ಅವನು ಊಟ ಮಾಡತಕ್ಕದ್ದು. ರಾತ್ರಿಯೂ ಅವನು ಅದನ್ನು ಪೂಜಿಸಿಯೇ ಊಟ ಮಾಡತಕ್ಕದ್ದು. ಆಗ ಸ್ನಾ ಮಾಡದಿದ್ದರೂ ನಡೆದೀತು.

ಲಿಂಗಾಯತರ ಮನೆಗಳಲ್ಲಿ ಮಗು ಹುಟ್ಟಿದಾಗ, ಮದುವೆಗಳು ಆದಾಗ, ಸಾವು ಆದಾಗ ಅವನು ಬಂದು ಎಲ್ಲ ಸಂಸ್ಕಾರಗಳನ್ನು ನೆರವೇರಿಸುತ್ತಾನೆ. ಹಬ್ಬಗಳಂದು ಜನ ಅವನನ್ನು ಕರೆದು ಅವನ ಪಾದಗಳನ್ನು ತೊಳೆದು ಮನೆಗೆಲ್ಲ ಸಿಂಪಡಿಸುತ್ತಾರೆ. ಹಿಂದೆ ಆ ಪಾದೋದಕದ ಒಂದೆರಡು ಹನಿಗಳನ್ನು ಬಾಯಲ್ಲಿ ಹಾಕಿಕೊಳ್ಳುತ್ತದ್ದುದೂ ಉಂಟು. ಅವನು ಅಲ್ಲಿ ಪ್ರಸಾದ ಸ್ವೀಕರಿಸಿದ ಮೇಲೆ ಮನೆಯವರಿಗೆಲ್ಲ ಊಟ.

ಜಂಗಮರು ಜಂಗಮರಿಗೆ ಮಾತ್ರ ಹೆಣ್ಣು ಕೊಟ್ಟು ಹೆಣ್ಣು ತರುತ್ತಾರೆ. ಅನ್ಯ ಲಿಂಗಾಯತರಿಂದ ಹೆಣ್ಣು ತರುವುದು ಅನಿವಾರ್ಯವಾದಲ್ಲಿ ಪಂಚಮಸಾಲಿಗಳನ್ನು ಇಷ್ಟಪಡುತ್ತಾರೆ. ಹೆಂಗಸರಿಗೆ ಶಾಸ್ತ್ರೋಕ್ತ ಲಿಂಗದೀಕ್ಷೆಯಿಲ್ಲವಾದರೂ ಅವರು ಸದಾ ಮೈಮೇಲೆ ಲಿಂಗ ಧರಿಸುತ್ತಾರೆ. ಎಲ್ಲ ಜಂಗಮರೂ ಐದು ಗೋತ್ರಗಳಲ್ಲಿ ಒಂದಲ್ಲ ಒಂದು ಪಂಚಪೀಠಕ್ಕೆ ಸೇರಿರುತ್ತಾರೆ (ಬಾಳೆ ಹಳ್ಳಿ, ಉಜ್ಜಯಿನಿ, ಶ್ರೈಶೈಲ, ಕೇದಾರ, ಕಾಶಿ). ಒಂದು ಪೀಠಕ್ಕೆ ಸೇರಿದವರು ಆ ಪೀಠಕ್ಕೆ ಸೇರಿದ ಜಂಗಮರ ಮನೆಯಿಂದ ಹೆಣ್ಣು ತರುವಂತಿಲ್ಲ. ಏಕೆಂದರೆ ಅವರು ಅಣ್ಣ - ತಮ್ಮಂದಿರಿದ್ದಂತೆ. ಪಂಚಪೀಠಗಳಿಗೆ ಪೀಠಾಧ್ಯಕ್ಷರಾಗಲು ಜಂಗಮರಿಗೆ ಮಾತ್ರ ಅರ್ಹತೆ. (ವೀರಕ್ತ ಪೀಠಗಳಿಗೆ ಜಂಗಮೇತರರೂ ಆಗಬಹುದು).

ಕಾಲ ಬದಲಾವಣೆಯಿಂದ ಅವರ ಸಾಮಾಜಿಕ ವ್ಯವಸ್ಥೆಯಲ್ಲಿಯೂ ಸಹಜವಾಗಿಯೇ ಬದಲಾವಣೆಗಳಾಗುತ್ತಿವೆ. ಮೈಸೂರು, ಮಂಡ್ಯ ಜಿಲ್ಲೆಗಳ ಆರಾಧ್ಯರೂ ಗುರುಗಳೇ ಆದರೂ ಅವರನ್ನು ಜಂಗಮರೆಂದು ಕರೆಯುವುದಿಲ್ಲ. ತಮ್ಮನ್ನು ಆರಾಧ್ಯ ಬ್ರಾಹ್ಮಣರೆಂದು ಕರೆದುಕೊಳ್ಳುವ ಅವರು ಇಷ್ಟಲಿಂಗದ ಜೊತೆ ಜನಿವಾರವನ್ನು ಕೂಡ ಧರಿಸುತ್ತಾರೆ.

**ಅನುಬಂಧ – ೬: ಜಂಗಂ ಮಠ : ಕಾಶಿಲಿಂಗ : ಸಂಕಣ್ಣ ನಾಯಕ**

ಭಕ್ತಪುರದ ಜಂಗಂ ಮಠದ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದ ಕ್ರಿ.ಶ. ೧೫೭೨ರ ಶಿಲಾಶಾಸನದ ಪ್ರಕಾರ, ಆ ವರ್ಷ ಅಲ್ಲಿ ಗಂಗಾದೇವಿ ರಾಣಿಯು ವಿಶ್ವೇಶ್ವರ ಲಿಂಗವನ್ನು ಸ್ಥಾಪಿಸಿದಾಗ ಮಠಪತಿಯಾಗಿದ್ದವನು ಮಲ್ಲಿಕಾರ್ಜುನ. ಆ ಲಿಂಗವು ಆ ಮುಂಚೆ ಕೆಳದಿ ರಾಜ ಸಂಕಣ್ಣ ನಾಯಕನು ಕಾಶಿಯಿಂದ ತಂದುದೇ ಆಗಿರಬಹುದು ಎಂಬ ಸಾಧಾರ ಊಹೆಗೆ ಅವಕಾಶವಿದೆ.

ದೊಡ್ಡ ಸಂಕಣ್ಣ ನಾಯಕನ (ಕ್ರಿ.ಶ. ೧೫೪೬ - ೧೫೭೦) ತೀರ್ಥಯಾತ್ರೆಯ ವಿವರಗಳು ಕೆಳದಿನೃಪವಿಜದಲ್ಲಿ (ಕ್ರಿ.ಶ. ೧೭೫೦) ದೊರಕುತ್ತವೆ.[21] ಅವನು ‘ಜಂಗಮ’ ವೇಷ ಧರಿಸಿ, ಎಂದರೆ ರಾಜಪೋಷಾಕನ್ನು ಬಿಟ್ಟು ಶಿವಭಕ್ತನಂತೆ ಸರಳ ಉಡುಪಿನಲ್ಲಿ ದೆಹಲಿಗೆ ಹೋಗಿ ತನ್ನ ಶೌರ್ಯದಿಂದ ಅಲ್ಲಿನ ಸುಲ್ತಾನನ ಮೆಚ್ಚುಗೆ ಗಳಿಸಿ, ಅವನ ರಾಜ್ಯದಲ್ಲಿ ಅಲ್ಲಲ್ಲಿ ಮಠಗಳನ್ನು ಸ್ಥಾಪಿಸಲು ಒಪ್ಪಿಗೆ ಕೇಳಿದಾಗ ಸುಲ್ತಾನನು ರಾಜ್ಯದ ಎಲ್ಲ ಕಡೆಯ ಅಧಿಕಾರಿಗಳಿಗೆ ಆ ಬಗ್ಗೆ ಸೂಚನೆ ನೀಡಿ ಸಂಕಣ್ಣ ನಾಯಕನಿಗೆ ಎಲ್ಲ ರೀತಿಯ ಅನುಕೂಲಗಳನ್ನು

ಒದಗಿಸುವಂತೆ ಆಜ್ಞೆ ನೀಡುತ್ತಾನೆ. ಮತ್ತು ಸುಲ್ತಾನನು ಹನ್ನೆರಡು ಸಾವಿರ ಹೊನ್ನು ನೀಡುತ್ತಾನೆ. ಅವನು ದೆಹಲಿಯಲ್ಲೇ "ಚಾವಲಿಕೆ ಮಂಡೈ" ('ಅಕ್ಕಿ ಮಂಡಿ' ಎಂಬ ಪೇಟೆ?) ಎಂಬಲ್ಲಿ ಜಂಗಮರಿಗೆ ಮಠ ಕಟ್ಟಿಸಿದನು. (ಅದನ್ನು ಗುರುತಿಸುವ ಅಗತ್ಯವಿದೆ.) ನಂತರ ಜಂಗಮರಿಗೆ ಮಠ ಕಟ್ಟಿಸಿದನು. (ಅದನ್ನು ಗುರುತಿಸುವ ಅಗತ್ಯವಿದೆ.) ನಂತರ ಪ್ರಯಾಗಕ್ಕೆ ಹೋಗಿ ಅಲ್ಲಿ ಒಂದು ಮಠ ಕಟ್ಟಿಸಿದ್ದು ಅದು ಈಗಲೂ ಕಾಶಿಯ ಜಂಗಮವಾಡಿ ಮಠದ ಶಾಖಾಮಠವೆನ್ನಿಸಿದೆ. ಬಳಿಕ ಕಾಶಿಗೆ ಹೋಗಿ ಹಲವು ತೀರ್ಥಗಳನ್ನು ಸಂದರ್ಶಿಸಿ ಅಲ್ಲಿ "ವಿಶ್ವೇಶ್ವರ ಪೂಜೆ ರಚಿಸಲು" ಅನುಮತಿ ಕೂಡ ಡಿಲ್ಲೀಶ್ವರನಿಂದ ಪಡೆದುಕೊಂಡಿದ್ದನು. ಕ್ರಿ.ಶ. ೧೪೯೪ರಲ್ಲಿ ಸಿಕಂದರ ಲೋದಿಯ ನಾಶಕೃತ್ಯದಿಂದಾಗಿ ಕಾಶಿಯಲ್ಲಿ ವಿಶ್ವೇಶ್ವರನ ಪೂಜೆಯು ನಿಂತು ಹೋಗಿತ್ತೆಂದು (ಪುಟ ೯೧) ಕಾಣುತ್ತದೆ; ದೊಡ್ಡ ಸಂಕಣ್ಣ ನಾಯಕನು ಸುಮಾರು ೧೫೬೫ರಲ್ಲಿ ಆ ದೈವದ ಪೂಜೆಗೆ ಮತ್ತೆ ವ್ಯವಸ್ಥೆ ಮಾಡಿದನೆಂದು ತೋರುತ್ತದೆ.[22] ಬಹು ಹಿಂದೆ ಶ್ರೀಶೈಲದ ಶೀಲವಂತ ನಾಯಕನೆಂಬ ವ್ಯಕ್ತಿ ದಶಾಶ್ವಮೇಧ ಘಾಟ್‌ಪಶ್ಚಿಮದಲ್ಲಿ ಹರಿಕೇಶವಾನಂದ ಕಾನನದಲ್ಲಿ ಕಟ್ಟಿಸಿದ ಮಠಕ್ಕೆ ಮಲ್ಲಿಕಾರ್ಜುನ ದೇವರು ಎಂಬ 'ಜಂಗಮ'ನಿಗೆ ಪಟ್ಟ ಕಟ್ಟಿದ್ದನು. ('ಹರಿಕೇಶವಾನಂದ ಕಾನನ' ಹೆಸರು ಕಾಶಿಯ ಜಂಗಮವಾಡಿ ಮಠದ ಕ್ರಿ.ಶ. ೧೭೫೦ ರ ಶಾಸನದಲ್ಲೂ ಉಲ್ಲೇಖವಾಗಿದೆ. ವಿ. ಶಿವಾನಂದ ಸಂಪಾದಿತ ಕೃತಿ, ಪು. ೫೨. ಕೆಳಗೆ ನೋಡಿ). ಅದನ್ನು ಮುಂದೆ ಮ್ಲೇಚ್ಛರು ಆಕ್ರಮಿಸಿದರು. ದೊಡ್ಡ ಸಂಕಣ್ಣ ನಾಯಕನು ಅದನ್ನು ಬಿಡಿಸಿ (ಇದಕ್ಕೆ ದೆಹಲಿ ಸುಲ್ತಾನನ ಒಪ್ಪಿಗೆಯಂತೂ ಇತ್ತು ಅದಕ್ಕೆ "ಜಂಗಮವಾಟಿ"ಯೆಂಬ ಹೆಸರಿಟ್ಟು, [23] ಅದರ ಜೊತೆ ಪಂಚಮಠವನ್ನು ಕಟ್ಟಿಸಿ ಅದನ್ನು "ಶಿವಜಂಗಮಕ್ಕೆ ಶಿವಾರ್ಪಣಂಗೈದು" ಬಳಿಕ ಕಾಶಿಕ್ಷೇತ್ರದ ಕಪಿಲಾಧಾರಾ, ಮಾನಸ ಸರೋವರ, ಗಂಧರ್ವ ಸಾಗರ ಎಂಬ ತೀರ್ಥಗಳಿಗೆ ಸೋಪಾನ ಕಟ್ಟಿಸಿ, ಅಯ್ಯಪ್ಪನೆಂಬ 'ಸೇನ ಬೋವ'ನ ಮೂಲಕ (=ಶಾನುಭೋಗ) ಕರ್ದಮೇಶ್ವರ ನರ್ಮದೇಶ್ವರ ಭೀಮಚಂಡಿಕೆ ವೃಷಭ ಧ್ವಜೇಶ್ವರ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿ ತನ್ನ ಮಗ ವೆಂಕಟಪ್ಪ ನಾಯಕನ ಹೆಸರಿನಲ್ಲಿ ಶಿಲಾಶಾಸನವನ್ನೂ ಬರೆಯಿಸಿದನು. ಇದು ಕಾಶಿಯ ಕಪಿಲಧಾರ ತೀರ್ಥದ (ಕ್ರಿ.ಶ. ೧೬೫೫ರ) ಮೆಟ್ಟಿಲು ಶಾಸನದಲ್ಲೂ ಉಲ್ಲೇಖವಾಗಿದೆ. (ಸಂ ವಿ. ಶಿವಾನಂದ : ಉತ್ತರ ಭಾರತದ ಕನ್ನಡದ ಹಸ್ತಪ್ರತಿ - ಇತರ ದಾಖಲೆಗಳ ಸೂಚಿ, ಪು. ೫೬). ಆ ಬಳಿಕ ವಾರಣಾಸಿ ಕ್ಷೇತ್ರದಲ್ಲಿ "ಅತಿ ಮನೋಹರವಾದ ಸ್ಥೂಲಲಿಂಗಮಂ ಸಂಪಾದಿಸಿಕೊಂಡನ್". ("ಸಂಪಾದಿಸಿ ವಶಮಾಡಿಕೊಂಡ ನಂತರ" ಎಂಬ ಪಾಠಾಂತರವನ್ನು ಗಮನಿಸಬೇಕು. ಆ ಲಿಂಗ ವಿಶೇಷವಾದುದ್ದಿರಬೇಕು) ಅವನು ಆ ಲಿಂಗವನ್ನು ಜೊತೆಯಲ್ಲಿ ತೆಗೆದುಕೊಂಡು, ಗಯೆಗೆ ಹೋಗಿ ಅಲ್ಲಿ ಒಂದು ಮಠವನ್ನು ಸ್ಥಾಪಿಸಿದನು. ಮುಂದೆ ಅವನು ನೇಪಾಳಕ್ಕೆ ತೆರಳುತ್ತಾನೆ.

*ಅವಿರಳ ವಿಕ್ರಮ ಜಿತರಿಪು*
*ನಿವಹಂ ಗಯೆಯಿಂದ ತೆರಳ್ದುದಗ್ದಿಕ್ಕಿನೊಳೊ*
*ಪ್ಪುವ ನೀಲಕಂಠ ನೇಪಾ*
*ಳವನೊಲವಿಂ ಸಾರ್ದನಾ ನೃಪಾಲಕ ತಿಲಕಂ ||*
*ಆ ತಾಣದೊಳುರೆ ಮಠಮಂ*
*ವೀತಭಯಂ ಸಂಕಣೋರ್ವಿಪಂ ವಿರಚಿಸಿ ಮ*
*ತ್ತಾತನಲ್ಲಿಂ ತೆರಳ್ದುರು*
*ಕೇತಾರವನಘವಿದೂರಮಂ ಮಿಗೆ ಸಾರ್ದಂ ||*
*ಕರಮೆಸವಾ ಕೇತಾರೇ*
*ಶ್ವರನಡಿದಾವರೆಯನ್ನೆದೆ ಪೂಜಿಸಿ ತದ್ಭೂ*
*ವರನಾ ಸ್ಥಳದೊಳ್ಜಂಗಮ*
*ವರ ಧರ್ಮಾರ್ಥಂ ಸುಮಠವನಿರದಾಗಿಸಿದಂ ||*

ಕಾಶಿಯಿಂದ ಹೊರ ಅವನು ಗಯೆ, ನೇಪಾಳ, ಕೇತಾರಗಳನ್ನು ದರ್ಶಿಸಿ, ಹರಿದ್ವಾರ ಕಾಶ್ಮೀರ ಕುರುಕ್ಷೇತ್ರ (ಭಗ್ನ) ಹಂಪಿ ಇವುಗಳ ಮೂಲಕ ತನ್ನ ರಾಜಧಾನಿ ಕೆಳದಿಗೆ ಬರುತ್ತಾನೆ. ಆ ಮೊದಲು ಕೆಳದಿಯಿಂದ ಹೊರಟು ಶಿವಗಂಗೆ, ಕಂಚಿ, ಚಿದಂಬರಂ ಕುಂಭಕೋಣ,

ರಾಮೇಸ್ವರ, ಬಿಜಾಪುರ, ಭಾಗನಗರ (ಹೈದರಾಬಾದ್) ಇವುಗಳ ಮೂಲಕ ದೆಹಲಿ ಸೇರಿರುತ್ತಾನೆ. ದೆಹಲಿಯಿಂದ ('ಡಿಳ್ಳಿಯಿಂದ') ಅವನು ಹಲವು ಕ್ಷೇತ್ರಗಳನ್ನು ಸಂದರ್ಶಿಸಿ ಹಿಂದಕ್ಕೆ ಬಂದುದನ್ನು ಮೇಲೆ ನೋಡಿದ್ದವೆ: ಹದಿನಾರನೇ ಶತಮಾನದ ಈ ತೀರ್ಥಯಾತ್ರೆ ಅತ್ಯಂತ ಅಪೂರ್ವವಾದುದು, ಸಾಹಸಮಯವಾದುದು. ಉದ್ದಕ್ಕೂ ಅವನು ರಾಜಪೋಷಾಕನ್ನು ತ್ಯಜಿಸಿ ಶಿವಭಕ್ತನಂತೆ ಉಡುಪು ಚಿಹ್ನೆಗಳನ್ನು ಧರಿಸಿದ್ದನು. ಅವನ ತೀರ್ಥಯಾತ್ರೆಗೆ ಕನಿಷ್ಠ ಎರಡು ವರ್ಷ ಬೇಕಾಗಿರಬಹುದು.

ಇಂದಿನ ಕಾಶಿಯ ಜಂಗಮವಾಡಿ ಮಠ, ಹಿಮವತ್‌ಕೇದಾರದ ಕೇದಾರ ಮಠಗಳು ಪ್ರಸಿದ್ಧ ವೀರಶೈವ ಮಠಗಳಾಗಿದ್ದು ಅವುಗಳನ್ನು ಸು. ಕ್ರಿ.ಶ. ೧೫೬೫ರಲ್ಲಿ ದೊಡ್ಡ ಸಂಕಣ್ಣ ನಾಯಕನು ನವೀಕರಿಸಿ ಕಟ್ಟಿಸಿದನೆಂಬುದು ತೀರ ಸ್ಪಷ್ಟವಾಗಿದೆ.

ಈಗ ಅವನ ಪ್ರವಾಸದ ಕಾಶಿ, ನೇಪಾಳಗಳ ಕಡೆ ಗಮನವನ್ನು ಹರಿಸೋಣ. ಅವನು ಕಾಶಿಯಲ್ಲಿ ವಿಶ್ವೇಶ್ವರನ ಪೂಜೆಯನ್ನು 'ರಚಿಸಲು' ಡಿಳ್ಳೀಶ್ವರನ ಅನುಮತಿಯನ್ನು ದೊರಕಿಸಿಕೊಂಡನು. ಅವನ ಕಾಲದಲ್ಲಿ ಆಳುತ್ತಿದ್ದ ದೊರೆ ಅಕ್ಬರ್ (೧೫೫೬ - ೧೬೦೫). ಉದಾರ ಮನೋಧರ್ಮದ ಅವನು ಕಾಶಿ ಇತ್ಯಾದಿ ಕಡೆಗಳಲ್ಲಿ ಜಂಗಮ ಮಠಗಳನ್ನು ಕಟ್ಟಿಸಲು ಹನ್ನೆರಡು ಸಾವಿರ ಚಿನ್ನದ ನಾಣ್ಯಗಳನ್ನು ನೀಡಿದನು. ಇಂತಹ ವರ್ತನೆಯು ಅಕ್ಬರನಿಂದ ಮಾತ್ರ ನಿರೀಕ್ಷಿತ. ಅಕ್ಬರನಿಗಿಂತ ಹಿಮದೆ ಕ್ರಿ.ಶ. ೧೪೯೪ರಲ್ಲಿ ಸಿಕಂದರ್ ಲೋದಿಯು ವಾರಣಾಸಿಯ ಮೇಲೆ ಧಾಳಿ ಮಾಡಿ ವಿಶ್ವೇಶ್ವರ ದೇವಾಲಯವನ್ನು ಭಗ್ನಗೊಳಿಸಿದುದರ ಪರಿಣಾಮವಾಗಿ ಅಲ್ಲಿ ಪೂಜಾದಿಗಳು ನಿಂತು ಹೋಗಿದ್ದು, ಆ ದೇವಾಲಯದಲ್ಲಿ ಪೂಜೆಯನ್ನು ಆರಂಭಿಸಲು ಅಕ್ಬರನಿಂದ ದೊಡ್ಡ ಸಂಕಣ್ಣ ನಾಯಕನು ಒಪ್ಪಿಗೆ ಪಡೆದು, ಮುಮದೆ ಅಲ್ಲಿ ಪೂಜಾದಿಗಳನ್ನು ನೆರವೇರಿಸಿರುವಂತೆ ಕಾಣುತ್ತದೆ. ವಿಶ್ವೇಶ್ವರನ ದೇವಾಲಯವು ಸುಸ್ಥಿತಿಯಲ್ಲಿದ್ದಿದ್ದರೆ ಸಂಕಣ್ಣ ನಾಯಕನು ಅಲ್ಲಿ ಪೂಜೆಯನ್ನು ನೆರವೇರಸಲು ಡಿಳ್ಳೀಶ್ವರನ ಒಪ್ಪಿಗೆ ಪಡೆಯಬೇಕಿರಲಿಲ್ಲ. ಹೊಸದಾಗಿ ಮಠಗಳನ್ನು ಕಟ್ಟಿಸಲಂತೂ ಡಿಳ್ಳಿ ಚಕ್ರವರ್ತಿಯ ಅನುಮತಿ ಬೇಕಾಗಿತ್ತು. ವಿಶ್ವನಾಥ ಮಂದಿರದಲ್ಲಿ ದೊಡ್ಡ ಸಂಕಣ್ಣ ನಾಯಕನು ಹೊಸ ವಿಶ್ವೇಶ್ವರ ಲಿಂಗವನ್ನು ಸ್ಥಾಪಿಸಿದನೋ ಅಥವಾ ಸಾಂಕೇತಿಕವಾಗಿ ಅಲ್ಲೊಂದು ಮೂರ್ತಿಯನ್ನಿಟ್ಟು ಪೂಜೆಯನ್ನು ನೆರವೇರಿಸಿದನೋ ತಿಳಿದು: ಬಹುಶಃ ಎರಡನೆಯ ಊಹೆ ನಿಜ. ೧೫೮೫ರಲ್ಲಿ ಅಕ್ಬರನ ಅತ್ಮೀಯನಾಗಿದ್ದ ಹಿಂದೂ ಧರ್ಮದ ತೋದರ ಮಲ್ಲನು ವಿಶ್ವೇಶ್ವರ ಮಂದಿರವನ್ನು ಕಟ್ಟಿಸಿದ್ದು ಗಮನಾರ್ಹ. ಅವನು ವಿಶ್ವೇಶ್ವರ ಮಂದಿರ ಕಟ್ಟಿಸಲು ದೊಡ್ಡ ಸಂಕಣ್ಣ ನಾಯಕನು ಚಕ್ರವರ್ತಿಯಿಂದ ಅಲ್ಲಿ ನಿಂತುಹೋಗಿದ್ದ ಪೂಜೆಗೆ ಅನುಮತಿ ಪಡೆದುದು ಸ್ಫೂರ್ತಿಯನ್ನು ನೀಡಿರಬೇಕು. ವಿಶ್ವೇಶ್ವರ ಮಂದಿರವು ಹೊಸದಾಗಿ ನಿರ್ಮಾಣವಾದುದು ದೊಡ್ಡ ಸಂಕಣ್ಣ ನಾಯಕನ ಕಾಶಿ ಭೇಟಿಯಾದ ಹದಿನೈದು ಇಪ್ಪತ್ತು ವರ್ಷಗಳಲ್ಲೇ ಎಂಬುದು ಗಮನಾರ್ಹ. ಈ ಊಹೆ ನಿಜವಾದರೆ ಇದೊಂದು ನಿಶ್ಚಿತವಾಗಿಯೂ ಅತ್ಯಂತ ಮಹತ್ವದ ಸಂಗತಿ.

ದೊಡ್ಡ ಸಂಕಣ್ಣ ನಾಯಕನು ಕಾಶಿಯಲ್ಲಿ ಒಂದು ಸುಂದರ "ಸ್ಥೂಲ ಲಿಂಗ"ವನ್ನು "ಸಂಪಾದಿಸಿ"ಕೊಂಡನೆಂದು ಅಚ್ಚಾದ ಪ್ರತಿಯಲ್ಲಿದ್ದರೆ, ಪಾಠಾಂತರದಲ್ಲಿ ಸಂಪಾದಿಸಿ "ವಶ ಮಾಡಿಕೊಂಡ" ಎಂದಿದೆ. ಅ ಲಿಂಗವನ್ನು ಹೊಸದಾಗಿ ಮಾಡಿಸಿ ಹಣ ಕೊಟ್ಟು ಕೊಂಡಿದ್ದರೆ ಅದನ್ನು ತನ್ನದನ್ನಾಗಿ ಮಾಡಿಕೊಂಡ ಎಂಬರ್ಥದ ಮಾತುಗಳು ಬರಬೇಕಿರಲಿಲ್ಲ. ನಡೆದಿರಬಹುದಾದ ಸಂಗತಿ ಹೀಗಿರುವಂತಿದೆ: ವಿಶ್ವನಾಥನ ಮೂಲ ಲಿಂಗದ ಮೇಲ್ಭಾಗದ ಗೋಳಕವನ್ನು ಕಿತ್ತು ಎಲ್ಲೋ ಹಾಕಿದ್ದರೆಂದು ಕಾಣುತ್ತದೆ: ಭಗ್ನಗೊಳ್ಳದ ಲಿಂಗದ ಆ ಗೋಳಕ ಭಾಗದ ಮಹತ್ವವನ್ನು ಗುರುತಿಸಿದ ದೊಡ್ಡ ಸಂಕಣ್ಣ ನಾಯಕನು ಕಾಶಿಯ ದೆಹಲಿ ಚಕ್ರವರ್ತಿಯ ಮುಸ್ಲಿಂ ಅಧಿಕಾರಿಗಳಿಗೆ ತಿಳಿಸಿ ಅದನ್ನು ಪಡೆದು ತನ್ನ 'ವಶ'ಕ್ಕೆ ತೆಗೆದುಕೊಂಡನೆಂದು ಕಾಣುತ್ತದೆ. ಅದನ್ನೇ ಅವನು ನೇಪಾಳದ ಭಕ್ತಪುರಕ್ಕೆ ಒಯ್ದು ಅಲ್ಲಿನ ಜಂಗಂ ಮಠದಲ್ಲಿ ಸ್ಥಾಪಿಸಿರಬಹುದು. ಜಂಗಂ ಜನರು ಕಾಶಿಯ ಮೂಲ ಲಿಂಗವನ್ನು ನೇಪಾಳಕ್ಕೆ ತಂದು "ಜಂಗಂ" ಮಠದಲ್ಲಿ ಸ್ಥಾಪಿಸಿದರು ಎನ್ನುವ ಭಕ್ತಪುರದಲ್ಲಿ ಪ್ರಚಲಿತವಿರುವ ಕತೆಗೆ ಮೂಲ ಮೇಲಿನ ದೊಡ್ಡ ಸಂಕಣ್ಣನ ನೇಪಾಳದ ಭೇಟಿಯೇ ಎಂಬಲ್ಲಿ ಅನುಮಾನವಿಲ್ಲ.

ಅವನು "ನೀಲಕಂಠ ನೇಪಾಳ"ಕ್ಕೆ ಹೋದ ಎಂದರೇನೋ ತಿಳಿಯದು. ನೇಪಾಳದ "ಬುಢಾ ನೀಲಕಂಠ"ನು (ಚಿತ್ರ ೧೨) ವಾಸ್ತವವಾಗಿ ವಿಷ್ಣುಮೂರ್ತಿ. ಜಂಗಂ ಮಠದಲ್ಲಿಯೇ ಒಂದು ನೀಲಕಂಠನ ಚಿಕ್ಕ ದೇವಾಲಯವಿವೆ: ಇಡೀ ಜಂಗಂ ಮಠವನ್ನು ಕಟ್ಟಿಸಿದವನು ದೊಡ್ಡ ಸಂಕಣ್ಣ ನಾಯಕನಾದುದರಿಂದ ಆ ನೀಲಕಂಠ ದೈವಕ್ಕೂ "ನೀಲಕಂಠ ನೇಪಾಳ" ಹೆಸರಿಗೂ ಯಾವುದೇ ಸಂಬಂಧವಿರುವುದು ಕಾಣಿಸದು. ಭಕ್ತಪುರದ ಜಂಗಂ ಮಠದ ನಿರ್ಮಾಣವಾದುದು ಸಂಕಣ್ಣ ನಾಯಕನಿಂದ, ಸುಮಾರು ೧೫೬೫ - ೬೬ರಲ್ಲಿ. ಇಲ್ಲಿ

ನಿರ್ಮಾಣವೆಂದರೆ ಬಹುಶಃ ಪುನರ್ನಿಮಾಣ, ಜೀರ್ಣೋದ್ಧಾರವೆಂದು ಭಾವಿಸುವುದು ಉಚಿತ. ಏಕೆಂದರೆ, ಭಕ್ತಪುರದ ಜಂಗಂ ಮಠವು ಕ್ರಿ.ಶ. ಹದಿನಾಲ್ಕನೇ ಶತಮಾನದಷ್ಟು ಹಲೆಯದೆಂಬುದನ್ನು ನೋಡಿದ್ದೇವೆ. ಮುಂಚೆ ಆ ಮಠಕ್ಕೆ "ಜಂಗಂ" ಎಂಬ ಹೆಸರಿದ್ದುದಕ್ಕೆ ದಾಖಲೆಗಳಿಲ್ಲ; ಬಹುಶಃ ಆ ಹೆಸರಿರಲಿಲ್ಲ. ಆ ಮಠವು ಕಾಶಿಯ ಮೂಲಕ ಹೋದ ಆರಾಧ್ಯ ವೀರಶೈವರು ಸ್ಥಾಪಿಸಿರಬಹುದೆಂಬುದಕ್ಕೆ ಆಧಾರಗಳಿರುವುದನ್ನು ನೋಡಿದ್ದೇವೆ (ಪು. ೭೧). ತೀರ ಸಾಮಾನ್ಯ ಕಟ್ಟಡವಾಗಿದ್ದ ಅಥವಾ ಜೀರ್ಣಾವಸ್ಥೆಯಲ್ಲಿದ್ದ ಆ ಮಠವನ್ನು ದೊಡ್ಡ ಸಂಕಣ್ಣ ನಾಯಕ ಕಟ್ಟಿಸಿ ಅದಕ್ಕೆ "ಜಂಗಂ ಮಠ"ವೆಂಬ ಹೆಸರಿಟ್ಟಿರುವಂತಿದೆ. ಈಗಿನ ಸುಂದರ, ಕಲಾತ್ಮಕ ಜಂಗಂ ಮಠವು ದೊಡ್ಡ ಸಂಕಣ್ಣ ನಾಯಕನ ಕೊಡುಗೆಯೆಂಬಲ್ಲಿ ಅನುನಮಾನವಿಲ್ಲ. ಆ ಮಠದಲ್ಲಿ ಅವನು ಸ್ಥಾಪಿಸಿದ ಕಾಶಿಯ ವಿಶ್ವೇಶ್ವರಲಿಂಗಕ್ಕೆ ಕ್ರಿ.ಶ. ೧೫೭೨೨ರಲ್ಲಿ ದೇವಾಲಯವನ್ನು ನೇಪಾಳದ ಗಂಗಾದೇವಿ ಕಟ್ಟಿಸಿದಳು. ಆಗ ಅಲ್ಲಿ ಜಂಗಂ ಮಠದ ಮುಖ್ಯಸ್ಥ ಮಲ್ಲಿಕಾರ್ಜುನ ಎಂಬಾತ; ಆಗ ದೊಡ್ಡ ಸಂಕಣ್ಣ ನಾಯಕನು ತನ್ನ ರಾಜ್ಯದಿಂದ ಜೊತೆಗೆ ಕರೆತಂದಿದ್ದ ವ್ಯಕ್ತಿಯೆಂಬಲ್ಲಿ ಅನುಮಾನವಿಲ್ಲ. ಮಲ್ಲಿಕಾರ್ಜುನನ ಉತ್ತರಾಧಿಕಾರಿಗಳಾಗಿ ಮುಂದೆ ಕರ್ನಾಟಕದ ಜಂಗಮರೇ ನೇಮಕಗೊಂಡರು; ಅಥವಾ ಅವನ ಸಂತತಿಯವರೇ ಅಲ್ಲಿ ಮಠದ ಮುಖ್ಯರಾಗಿ ಜವಾಬ್ದಾರಿ ವಹಿಸಿಕೊಂಡರು. " – ದೇವರು" ಎಂದು ಕೊನೆಯಾಗುವ ಚನ್ನವೀರ ದೇವರು, ಮಹದ್ದೇವರು, ಧರ್ಮಲಿಂಗ ದೇವರು ಎ◌ಂಬ ವ್ಯಕ್ತಿನಾಮಗಳು ಜಂಗಂ ಮಠದ ಶಾಸನಗಳಲ್ಲಿ ಉಲ್ಲೇಖವಗಿದ್ದು ಆ ಮಠವು ಹದಿನೆಂಟನೇ ಶತಮಾನದವರೆಗೂ ಕರ್ನಾಟಕದ ಜೊತೆ ಸಂಪರ್ಕವನ್ನು ಹೊಂದಿದ್ದುದರ ಕುರುಹುಗಳೂ ಆಗಿವೆ.

[1] K. S. Singh: India's Communities, V (1998), P. 1352.

[2] ಇದು ದಾರ ಸಮೇತದ ಇಷ್ಟಲಿಂಗವಾಗಿರಬಹುದು.

[3] ಅದೇ, ಪು. ೧೩೫೩. ಬೆಂಗಳೂರಲ್ಲಿ "ತಮಿಳು ಜಂಗಂ ಸಂಘ"ವು ಕೆಲವು ವರ್ಷಗಳ ಹಿಂದೆ ಅಲ್ಲಿಯ ಪುರಭವನದಲ್ಲಿ "ಪಿರಬುಲಿಂಗ ಲೀಲೈ" ನಾಟಕವನ್ನು ವ್ಯವಸ್ಥೆ ಮಾಡಿದ್ದಿತು.

[4] ಅದೇ.

[5] ಅದೇ ಪು. ೧೩೫೪.

[6] ಬಸವಣ್ಣನವರು ಕಾಶ್ಮೀರದಿಂದ ಜಂಗಮರನ್ನು ಕರೆಯಿಸಿದರೆಂಬ ಅಥವಾ ಬಸವಣ್ಣನವರನ್ನು ಕಾಣಲು ಕಾಶ್ಮೀರದಿಂದ ಜಂಗಮರು ಬಂದರೆಂಬ ಕತೆಗಳು ಇಂದಿಗೂ ಅಲ್ಲಿ ಜಂಗಮರಿದ್ದಾರೆಂಬ ಸಂಗತಿಯಿಂದ ಹೆಚ್ಚು ಅರ್ಥವಂತಿಕೆಯನ್ನು ಪಡೆಯುತ್ತವೆ.

[7] ಅದೇ, ಪು. ೨೧೨೯. ವೈಷ್ಣವ ಮಾಲಾ ಜನರಿಗೆ "ಮಾಲಾ ದಾಸರಿ"ಗಳು ಪುರೋಹಿತರು.

[8] ಇವನೇ ಬಸವನ ಸಮಕಾಲೀನ ಸಂಬೋಳಿ ನಾಗಿದೇವ ಮತ್ತು ದಲಿತ ವರ್ಗದ ವಚನಕಾರ.

[9] "ಮಾಲಾ" ವರ್ಗದ ಪರಿಶಿಷ್ಟ ಜಾತಿ ಜನರು ಕರ್ನಾಟಕದ ಬಳ್ಳಾರಿ, ಬೀದರ್, ರಾಯಚೂರು ಜಿಲ್ಲೆಗಳಲ್ಲಿದ್ದು ೧೯೮೧ರ ಜನಗಣತಿ ಪ್ರಕಾರ ಅವರ ಸಂಖ್ಯೆ ೧೦, ೧೮೯ ಅವರ ಮನೆ ಮಾತು ತೆಲುಗಾದರೂ ಕನ್ನಡ ಲಿಪಿ ಬಳಸುತ್ತಾರೆ. ಮಾಂಸಾಹಾರಿಗಳು. ಅವರ ಗೋತ್ರಗಳು: ರೆಡ್ಡಿಯವರು, ಭಂಡಾರದವರು, ದೊರಸನವರು, ಸುಂಕದವರು, ಕುಪ್ಪೆಯವರು, ಕೇಸರುಲು, ಓಲೆಯವರು, ಮಿನಗದವರು, ಕುಂಕುಮವಾಳ್ಳು ಮತ್ತು ಬೆಂಡೆಗಮ್ಮಳ್ಳು. ಹಿಂದೆ ಹುಡುಗಿಯರನ್ನು ಹುಡುಗರನ್ನು "ಬಸವಿ" "ಪೋತರಾಜ"ರನ್ನಾಗಿ ಬಿಡುತ್ತಿದ್ದರು. ಕುಳಿತ ಭಂಗಿಯಲ್ಲಿ ಹೆಣ ಹೂಳುತ್ತಾರೆ. ಅವರ ಪಾರಂಪರಿಕ ವೃತ್ತಿ ನೇಕಾರಿಕೆ, ವೆಂಕಟರಮಣ, ರಂಗಸ್ವಾಮಿ, ಸೋಮೇಶ್ವರ, ಎಲ್ಲಮ್ಮ ಇವರ ದೈವಗಳು. ಆಂಧ್ರದ ಉರಕೊಂಡಿ ವೀರಣ್ಣ ಅವರ ಮನೆ ದೇವರು, ಮಾದಿಗ ಜನರಿಂದ ಅವರು ನೀರು ಸ್ವೀಕರಿಸುವುದಿಲ್ಲ. ಮೇಲ್ವರ್ಗದ ಜನರ ಸಮಾಧಿ ಅಗೆಯುವ ಕೆಲಸ ಮಾಡುತ್ತಾರೆ ( – ಅದೇ).

[10] ಅದೇ IV. P. 346.

[11] ಅದೇ, V. P. 1358 – 9.

[12] ಅದೇ, ಪು. ೧೩೬ – ೭. "ಮುಲಕನಾಡು" ಎಂಬ ಸ್ಮಾರ್ತಬ್ರಾಹ್ಮಣರಿದ್ದಾರೆ.

[13] ಅದೇ, ಪು. ೧೩೫೬.

[14] ಎಂ. ಚಿದಾನಂದಮೂರ್ತಿ: ಕನ್ನಡಾಯಣ, ಪು. ೩೦ – ೧.

[15] ಮ. ಸು. ಕೃಷ್ಣಮೂರ್ತಿ: ಬಸವರಾಜ ಮಾರ್ಗ. ನೋಡಿ ಪು. ೭೭, ೭೯ – ೮೦, ೮೦ – ೩, ೧೭೨. ಕೊಲ್ಲಾಪುರದ ಮಹಾಲಕ್ಷ್ಮಿ ವಿಗ್ರಹದ ಶಿರಸ್ಸಿನಲ್ಲಿ ಶಿವಲಿಂಗವಿರುವುದನ್ನು ಹತ್ತು ಹನ್ನೊಂದನೇ ಶತಮಾನದ ಶಾಸನಗಳು ದಾಖಲಿಸಿವೆ ಮತ್ತು ಅದನ್ನು ಈಗಲೂ ನೋಡಬಹುದು. ಹಾವೇರಿಯ ವಿಷ್ಣು ವಿಗ್ರಹದ ಕೈಯಲ್ಲಿ ಶಿವಲಿಂಗವಿದೆ.

[16] ಈ ಎಲ್ಲ ವಿವರಗಳನ್ನು ಒದಗಿಸಿದವರು ತಮಿಳುನಾಡಲ್ಲಿ ಬಹುಕಾಲ ಹಿರಿಯ ಅಧಿಕಾರಿಗಳಾಗಿದ್ದ ಬೆಂಗಳೂರಿನ ಜಿ. ಆರ್. ಗುರುಮೂರ್ತಿಯವರು.

[17] ಜಿ. ಆರ್. ಗುರುಮೂರ್ತಿ: 'ತಮಿಳುನಾಡಲ್ಲಿ ವೀರಶೈವರ ರೂಪರೇಖೆಗಳು'. ರಂಭಾಪುರಿ ಬೆಳಗು. ಆಗಸ್ಟ್೨೦೦೧, ಪು. ೧೪.

[18] ಅದೇ.

[19] ಅದೇ.

[20] ಎಂ. ಚಿದಾನಂದಮೂರ್ತಿ: 'ಗುರು – ಲಿಂಗ – ಜಂಗಮ'. ಸ್ಥಾವರ : ಜಂಗಮ (೨೦೦೩), ಪು.೬೪೪ – ೫೨.

[21] ಕೆಳದಿ ನೃಪ ವಿಜಯ. ಸಂ: ಆರ್. ಶಾಮಶಾಸ್ತ್ರಿ. ಮೂರನ್ನ ಆಶ್ವಾಸ ನೋಡಿ. ತೀರ್ಥಯಾತ್ರಯ ಕೆಲ ವಿವರಗಳು ಕೆಳದಿ ಬಸವರಾಜನ ಸಂಸ್ಕೃತ ಶಿವತತ್ವ ರತ್ನಾಕರದಲ್ಲೂ (೧೭೦೦) ಉಂಟು (Radha Krishnamurthy :Shivatavaratnakara of Keladi Basavaraja – a Cultural Study. P 107). Adre "ಕೆಳದಿ ನೃಪ ವಿಜಯ"ವು ಕೊಡುವ ಎಷ್ಟೋ ಸಂಗತಿಗಳು ಅಲ್ಲಲ್ಲಿ : ಆ ದೃಷ್ಟಿಯಿಂದ "ಕೆಳದಿ ನೃಪ ವಿಜಯ"ವು ಬಹುಮುಖ್ಯ ಆಕರ ಕೃತಿಯಾಗಿದೆ.

[22] ಕೆಳದಿನೃಪವಿಜಯ, ೩.೫೧ – 'ಡಿಳ್ಳೀಶ್ವರ'ನ ಮುಂದೆ, ಎಂದರೆ ದೆಹಲಿ ಸುಲ್ತಾನನ ಮುಂದೆ ದೊಡ್ಡ ಸಂಕಣ್ಣನಾಯಕ ಇಟ್ಟ ಮನವಿ ಇಂತಿದೆ – "…ಆಂ ಮುಂಚೆ ಕಾಶೀ ಕ್ಷೇತ್ರಕೈದಿಯಾ ತಾಣದೊಳ್ಶಿವಜಂಗಮ ಧರ್ಮಾರ್ಥವಾಗಿ ಮಠಮಂ ಕಟ್ಟಿಸಿ ಯದಕ್ಕೆ ತಕ್ಕ ಭೂಸ್ವಾಸ್ಥೆಯಂ ಬಿಡಿಸಿ ದಾನಧರ್ಮಂಗಳನಾಗಿಸಿ ವಿಶ್ವೇಶ್ವರನ ಪೂಜೆಯಂ ರಚಿಸಿ ಮತ್ತಂ ನಿನ್ನ ರಾಷ್ಟ್ರದೊಳ್ಪ್ರಸಿದ್ಧವಾದ ಸ್ಥಳಂಗಳೊಳ್ಶಿವಜಂಗಮ ಧರ್ಮಕ್ಕೋಸುಗಂ ಮಠ ಮಾನ್ಯಂಗಳನಾಗಿಸಿ ಬಳಿಕನ್ನೆ ಸಂಸ್ಥಾನಕೈದುವೆನೆಂದು ಸಂಕಲ್ಪಮಂ ರಚಿಸಿರ್ಪೆನೀ ಸಂಕಲ್ಪ ಸಿದ್ಧಿಯಂ ಪೂರ್ಣವನಾಗಿಸವೇಳ್ಕುಂ…."

[23] ಅಚ್ಚಾಗಿರುವ ಪಾಠ'ಜಂಗಮ ಗಾಟಿ'ಯೆಂದಿದೆ. ಆದರೆ ಅದಕ್ಕಿರುವ ಪಾಠಾಂತರ 'ಜಂಗಮವಾಟಿ'ಯೆಂಬುದೇ ಸರಿಯಾದ ಪಾಠ. ಈಗ ಆ ಮಠವು ಜಂಗಮವಾಡಿ ಮಠವೆಂದೇ ಪ್ರಸಿದ್ಧ. 'ಶಿವತತ್ವರತ್ನಾಕರ'ದ (೧೭೦೦) ಪ್ರಕಾರ, ದೊಡ್ಡ ಸಂಕಣ್ಣ ನಾಯಕನು ಮೊದಲು ಕಾಶಿಗೆ ಹೋಗಿ, ಬಳಿಕ ನೇಪಾಳಕ್ಕೆ ಹೋಗಿ, ವಾಪಸ್‌ಬರುವಾಗ ದೆಹಲಿಗೆ ಬಂದು ಅಲ್ಲಿ ದಿಲ್ಲೀಸ್ವರನಿಂದ ಕಾಶಿಯಲ್ಲಿ ಮುಸ್ಲಿಮರಿಂದ ಆಕ್ರಮಣಗೊಂಡಿದ್ದ ಜಂಗಮವಾಡಿ ಪ್ರದೇಶವನ್ನು ಪಡೆಯಲು ಅನುಮತಿ ಪಡೆದು ಮತ್ತೆ ಕಾಶಿಗೆ ಹೋಗಿ ಅಲ್ಲಿ ಜಂಗಮವಾಡಿ ಮಠ ಕಟ್ಟಿಸಿದನೆಂದಿದೆ. ಇದು ಇತಿಹಾಸಕ್ಕೆ ಹೆಚ್ಚು ಸಮೀಪವಿರುವಂತಿದೆ. ಅವನು ಕಾಶಿಗೆ ಮೊದಲು ಹೋದಾಗ, ಜಂಗಮವಾಡಿ ಮಠದ ಜಾಗವು ಮುಸ್ಲಿಮರಿಂದ ಆಕ್ರಮಣಗೊಂಡಿದ್ದ ವಿಷಯವು ಅವನ ಗಮನಕ್ಕೆ ಬಂದಿರಬೇಕು.

## ಅನುಬಂಧ (೭-೮)

**ಅನುಬಂಧ – ೭ : ನೇಪಾಳದ ಕೆಲವು ಅನುಭವಗಳು**

ನೇಪಾಳದ ಹದಿನೈದು ದಿನಗಳ ನನ್ನ ವಾಸ್ತವ್ಯ ಬೌದ್ಧಿಕ ಹುಡುಕಾಟವಾಗಿ ಭಾವನಾತ್ಮಕ ಅಲೆದಾಟವೂ ಆಯಿತು. ಆಧುನಿಕ ನಗರವಾಗಿ ಬೆಳೆದಿರುವ, ಬೆಳೆಯುತ್ತ ಅತ್ಯಾಧುನಿಕ ತಂತ್ರಜ್ಞಾನದತ್ತ ದಾಪುಗಾಲಿಟ್ಟಿರುವ ಕಾಠಮಾಂಡೊ ಭಾರತದ ಎಲ್ಲ ಹಿಂದಿನ ನಗರಗಳಂತೆ ಹಳತು ಹೊಸತರ ಮಿಶ್ರಣವಾಗಿ ಕಾಣುತ್ತದೆ. ಆಧುನಿಕತೆ ಅದರ ಸಾಂಸ್ಕೃತಿಕ ಮಹತ್ವವನ್ನು ಹಿಂದಕ್ಕೆ ಹಾಕಿಲ್ಲ.

ನಾನು ಉಳಿದುಕೊಂಡಿದ್ದ ಜೈನಭವನವು ನಗರದ ಕೇಂದ್ರ ಭಾಗದಲ್ಲಿದ್ದು ಬೆಂಗಳೂರಿನ ಗಾಂಧಿ ಬಜಾರಿನ ಅಥವಾ ರಾಜಾಜಿನಗರದ ಮುಖ್ಯ ಬೀದಿಯಂತೆ ಸದಾ ಅಂಗಡಿಗಳಿಂದ ಕಿಕ್ಕಿರಿದ ವಾಹನ ಸಂಚಾರವಿರುವ ರಸ್ತೆ. ಅಲ್ಲೇ ಸಮೀಪವಿರುವ ದೇವಾಲಯದಿಂದಾಗಿ ಆ ಬಡಾವಣೆಗೆ ಜ್ಞಾನೇಶ್ವರ್‌ಎಂಬ ಹೆಸರು ಬಂದಿದೆ. ಸಸ್ಯಾಹಾರ ದೊರಕುವ ಆ ಮಂದಿರದ ವಾತಾವರಣ ನನಗೆ ಆಲ್ಹಾದಕರವಾಗಿತ್ತು. ಅಲ್ಲೇ ಜೈನಮಂದಿರದಿಂದ ಬೆಳಿಗ್ಗೆ ಸಂಜೆ ಘಂಟಾನಾದ, ಜಿನಸ್ತೋತ್ರ, ಭಜನೆ, ಹಾಡುಗಳು ಕೇಳಿಬರುತ್ತಿದ್ದವು. ಅಲ್ಲಿಂದ ಯಾವುದೇ ರಸ್ತೆಗೆ ಇಳಿದರೂ ಮರಗಳ ಕೆಳಗೆ, ಸ್ವಲ್ಪ, ತಗ್ಗಿನಲ್ಲಿ, ಕೂಡುರಸ್ತೆಗಳಲ್ಲಿ ಯಾವುದೋ ವಿಗ್ರಹ, ಅದಕ್ಕೆ ದೀಪದ ವ್ಯವಸ್ಥೆ ಕಾಣುತ್ತಿತ್ತು. ಕಾಳಿ, ಭೈರವ, ನಂದಿ, ಶಿವ, ಗಣೇಶ ಹೀಗೆ ಭಿನ್ನ ಭಿನ್ನ ಆಕಾರರಹಿತ, ಆಕಾರಸಹಿತ ಮೂರ್ತಿಗಳು. ಅವುಗಳೆಲ್ಲ ಕುಂಕುಮ, ಭಸ್ಮ, ಹೂಗಳಿಂದ ತುಂಬಿರುತ್ತಿದ್ದವು. ಕೆಲವೆಡೆ ಮರಗಳೇ ದೈವಗಳಾಗಿ ಪೂಜೆಗೊಳ್ಳುತ್ತಿದ್ದುವು. ಜನರ ಶ್ರದ್ಧೆ, ಭಕ್ತಿಭಾವ ಎದ್ದು ಕಾಣುತ್ತಿದ್ದುವು. ಚಿಕ್ಕ ಅಥವಾ ಸ್ವಚ್ಛ ಗಲ್ಲಿಗಳಲ್ಲೆಲ್ಲ ಕಡೆ ದೊಡ್ಡ ಚಿಕ್ಕ ಗುಡಿಗಳು. ಹಲವೆಡೆ ಶಿವದೇವಾಲಯಗಳಾದರೂ ಬುದ್ಧನ ನಾಲ್ಕು ಮುಖಗಳಿರುವ ಪುಟ್ಟ ಸ್ತಂಭ ಶಿಲ್ಪವನ್ನು ವೇದಿಕೆಯ ಮೇಲೆ ಸ್ಥಾಪಿಸಿರುತ್ತಿದ್ದರು. ಬುದ್ಧನೂ ಹಿಂದುಗಳಿಗೆ ಅಲ್ಲಿ ಆರಾಧ್ಯ. ಕಾಠಮಾಂಡೊದ ಮಹಂಕಾಲನು (ಮಹಾಕಾಲ) ಹಿಂದೂಗಳಿಗೆ ಶಿವ, ಬೌದ್ಧರಿಗೆ ಪದ್ಮಪಾಣಿ (ಅವಲೋಕಿತ): ಹಿಂದೂಗಳೂ ಬೌದ್ಧರೂ ಅದಕ್ಕೆ ಬಾಗುತ್ತಾರೆ. ಅಲ್ಲಿನ ಬೀದಿಗಳಲ್ಲಿ ಓಡಾಡುವುದೇ ಒಂದು ವಿಶೇಷ ಅನುಭವವಾಗಿತ್ತು. ವಿದ್ಯಾವಂತರಾದರೂ ಹೆಂಗಸರು ಗಂಡಸರು ಮುಖದ ಮೇಲೆ ಗಂಧ, ಕುಂಕುಮ, ವಿಭೂತಿಗಳನ್ನು ಇಟ್ಟುಕೊಳ್ಳಲು ಸಂಕೋಚಪಡುತ್ತಿರಲಿಲ್ಲ. ಅತ್ಯಾಧುನಿಕ ರೀತಿಯ ವೇಷಭೂಷಣದ ಮಾತಿನ ನಡಾವಳಿಯ ಹುಡುಗ ಹುಡುಗಿಯರಿಗೂ ಕೊರತೆಯಿರಲಿಲ್ಲವೆಂದು ಹೇಳಬೇಕಾಗಿಲ್ಲ. ಆದರೆ ತೀರ ಸ್ವಚ್ಛಂದ ಅಸಭ್ಯ ನಡವಳಿಕೆ ದೊಡ್ಡವರಲ್ಲಾಗಲಿ ಚಿಕ್ಕವರಲ್ಲಾಗಲಿ ನನಗೆ ಕಾಣಲಿಲ್ಲ. ಜನ ಒಟ್ಟಾರೆ ಹೆಚ್ಚು ಸಭ್ಯರು, ಸುಸಂಸ್ಕೃತರು - ಇದು ನನ್ನ ತೀರ ಮಿತ ಅನುಭವಕ್ಕೆ ಬಂದದ್ದು.

ಅಲ್ಲಿನ ರಾಷ್ಟ್ರೀಯ ವಸ್ತುಪ್ರದರ್ಶನಾಲಯವು ಅತ್ಯಮೂಲ್ಯ ಬೌದ್ಧ, ಹಿಂದೂ, ಶಾಕ್ತ ಕಲಾಕೃತಿಗಳ ಅಪೂರ್ವ ಸಂಗ್ರಹ. ಸಿಮ್ರೌನ್‌ಗಡದಿಂದ ತಂದಿಟ್ಟಿರುವ ಸುಮಾರು ನಾಲ್ಕಡಿ ಎತ್ತರದ ಸೂರ್ಯ, ಉಮಾಮಹೇಶ್ವರ, ವಿಷ್ಣು ಶಿಲಾಮೂರ್ತಿಗಳು ಮನಸೆಳೆಯುತ್ತವೆ. "ಸಿಂಹ ಸಿಂಹ ಸಿಂಹ ವಾಹನಿ ಲೋಕೇಶ್ವರ್" ದೈವದ ಎರಕದ ಲೋಹ ಶಿಲ್ಪ ವರ್ಣನಾತೀತ. ಆ ಸಿಂಹ, ಗರುಡ, ನರಸಿಂಹಗಳ ವಾಹಕ ಲೋಕೇಶ್ವರನ ಸೂಕ್ಷ್ಮ ಕುಸುರಿ ಎರಕದ ಬೌದ್ಧ ಶಿಲ್ಪವು ವಿಶೇಷವಾಗಿ ನೋಡಬೇಕಾದ್ದು. ಬುದ್ಧ, ಮಾಯಾದೇವಿಯರ ಎರಕ ಶಿಲ್ಪಗಳೂ ಅಷ್ಟೇ. ವಿಷ್ಣುವಿನ ವಿಶ್ವರೂಪ ದರ್ಶನದ, ಬಲಿ - ಬಾಮನ್ - ತ್ರಿವಿಕ್ರಮ್‌ಶಿಲ್ಪಗಳಾಗಲಿ ಅಷ್ಟೇ. ಇಂತಹ ಎರಕದ ಶಿಲ್ಪಗಳಲ್ಲಿ ನೆವಾರಿಗಳು ಸಿದ್ಧಹಸ್ತರು; ಅಂತೆಯೇ ಮರಗೆತ್ತನೆ ಕೆಲಸದಲ್ಲೂ. ಆ ಮ್ಯೂಜಿಯಂನ ಸಹಾಯಕ ಅಧಿಕಾರಿ ಯುವಕ ನಿರನ್‌ಕುಮಾರ್‌ರಾಜ್‌ವಂಶಿಯು "ಕರ್ನಾಟ" ವರ್ಗದ ನೆವಾರಿ.

"ನ್ಯಾಷನಲ್‌ಆರ್ಕೈವ್ಸ್" ಒಂದು ಅತ್ಯಮೂಲ್ಯ ಹಸ್ತಪ್ರತಿ ಭಂಡಾರ. ಇಸ್ಲಾಂ ಆಕ್ರಮಣದಿಂದ ಸಂತ್ರಸ್ತರಾದ ಹಿಂದೂಗಳು ಪ್ರಾಣ ರಕ್ಷಣೆಗಾಗಿ, ಅಂತೆಯೇ ತಮ್ಮ ಧರ್ಮಗ್ರಂಥಗಳ ಸಂರಕ್ಷಣೆಗಾಗಿ ಓಡಿಬಂದು ನೇಪಾಳವನ್ನು ಆಶ್ರಯಿಸಿದರು. ಅವರು ತಂದ ಹಸ್ತಪ್ರತಿಗಳಲ್ಲಿ ಎಷ್ಟು ಸಾವಿರ ಹಾಳಾದುವೋ! ಅಥವಾ ನೇಪಾಳದ ಮೂಲೆ ಮೂಲೆಗಳಲ್ಲಿ ಸಂಗ್ರಹವಾಗದೇ ಉಳಿದಿರುವ, ನಾಶವಾಗುತ್ತಿರುವ ಹಸ್ತಪ್ರತಿಗಳು ಎಷ್ಟಿವೆಯೋ ತಿಳಿಯದು.* ನ್ಯಾಷನಲ್‌ಆರ್ಕೈವ್ಸ್‌ಇಲಾಖೆಯಲ್ಲಿ ಕೆಲವು ಗಂಟೆ ಕುಳಿತು ಅಲ್ಲಿನ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳನ್ನು ತಿರುವಿ ಹಾಕಿದೆ. ತಾಳೆ, ಭೂರ್ಜ, ಕಾಗದ ಇತ್ಯಾದಿ ವಸ್ತುಗಳ ಮೇಲೆ ಬರೆದಿರುವ ವೇದ, ಗೀತೆ, ಪುರಾಣಗಳು, ಆಗಮಗಳು, ಕಾವ್ಯಗಳು, ಬೌದ್ಧಜೈನ ಧಾರ್ಮಿಕ ಗ್ರಂಥಗಳು ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಹಲವು ಸಾವಿರ ಹಸ್ತಪ್ರತಿಗಳ ಮಾಹಿತಿ ಉಂಟು. ನೋಡದೇ ಕಟ್ಟಿಟ್ಟಿರುವ ಹಸ್ತಪ್ರತಿಗಳು ಸಾವಿರಾರು ಇವೆಯೇನೋ! ಕರ್ನಾಟಕದ ವಿದ್ವಾಂಸರಿಂದ ರಚಿತವಾದ ಸಂಸ್ಕೃತ ಗ್ರಂಥಗಳೂ ಅಲ್ಲಿರಬಹುದು. ಜನರ ಗಮನಕ್ಕೆ ಬಾರದ ಕನ್ನಡ, ತಮಿಳು, ತೆಲುಗು ಹಸ್ತಪ್ರತಿಗಳೂ ಇದ್ದರೂ ಆಶ್ಚರ್ಯವಿಲ್ಲ. "ಧೂರ್ತ ಸಮಾಗಮ" ಎಂಬ ನಾಟಕದ (ಅದರ ಉಲ್ಲೇಖ ಹಿಂದೆ ಬಂದಿದೆ) ವಿಷಯವಿರುವ ಹಸ್ತಪ್ರತಿ ವರ್ಣನಾತ್ಮಕ ಸೂಚಿ ಭಾಗವನ್ನು ನಾನು ನೆರಳಚ್ಚು ಮಾಡಿಸಿಕೊಂಡೆ - ಅದರಲ್ಲಿ ಹರಿಸಿಂಹದೇವನನ್ನು "ಕರ್ನಾಟ ಚೂಡಾಮಣಿ" ಎಂದು ಕರೆದಿದೆ (ಚಿತ್ರ ೩ ನೋಡಿ).

ನಾನಿದ್ದ ಜಾಗದಿಂದ ಸುಮಾರು ಎಂಟು ಕಿಲೋ ಮೀಟರ್‌ನಲ್ಲಿ, ಕಾಠಮಾಂಡೊ ನಗರದ ಅಂಚಿನಲ್ಲಿ ಚಿಕ್ಕ ಗುಡ್ಡದ ಮೇಲಿರುವ ಸ್ವಯಂಭೂ ಬೌದ್ಧ ದೇವಾಲಯವು (ಚಿತ್ರ ೧೧) ಒಂದು ಅದ್ಭುತ ಕಟ್ಟಡ. ಅಲ್ಲಿ ನೂರಾರು ಬುದ್ಧನ ಚಿಕ್ಕ ದೊಡ್ಡ ಮೂರ್ತಿಗಳಿವೆ; ಹಾಗೆಯೇ

ಚಿಕ್ಕಮಂದಿರಗಳಲ್ಲಿ ಬುದ್ಧನ, ಅವಲೋಕಿತೇಶ್ವರ, ತಾರಾ ಭಗವತಿಯರ ಆರಾಧನೆ ನಡೆಯುತ್ತಿದೆ. ಕಲೆಯ ದೃಷ್ಟಿಯಿಂದ ಒಂದೊಂದು ಅಮೂಲ್ಯ ರಚನೆ. ಆ ಗುಡ್ಡದ ಮೇಲಿಂದ ಕಾಣುವ ಕಾಠಮಾಂಡೋ ನಗರದ ಇಡೀ ಕಣಿವೆಯ ದೃಶ್ಯ ಚೇತೋಹಾರಿಯಾದುದು. ನನಗೆ ಬೆಟ್ಟದ ಮೇಲೆ ಆದ ಕಲಾನುಭವಕ್ಕಿಂತ ಬುದ್ಧನ ಬದುಕಿನ ಔನ್ನತ್ಯದ ನೆನಪಿನ ಅನುಭವ ಅಮೂಲ್ಯವಾಯಿತು. ತನ್ನೆಲ್ಲ ಲೌಕಿಕ ಭೋಗಗಳನ್ನು ತ್ಯಜಿಸಿ, ಜನರ ದುಃಖ ನಿವಾರಣೆಗಾಗಿ ತನ್ನ ಬದುಕನ್ನು ಮೀಸಲಾಗಿಟ್ಟು ಆಧ್ಯಾತ್ಮಿಕ ಸಾಧನೆಯಿಂದ ಬುದ್ಧನಾದ ಅವನು ಒಂದು ಘಟ್ಟದಲ್ಲಿ ತನಗೆ ಲಭ್ಯವಾದ 'ನಿರ್ವಾಣ' ಸ್ಥಿತಿಯನ್ನು ನಿರಾಕರಿಸಿ, ಜಗತ್ತಿನಲ್ಲಿ ದುಃಖವಿರುವವರೆಗೆ ಆ ನಿರ್ವಾಣ ಪದವಿ ಬೇಡವೆಂದು ಸಂಕಲ್ಪಿಸಿದ ಆ ಮಹಾಸಂದರ್ಭ ನೆನಪಿಗೆ ಬಂದು (ಇದು ಮಹಾಯಾನ ಪಂಥದಲ್ಲಿ ಬರುವ ಬುದ್ಧನ ಕತೆ) ಮನಸ್ಸು ಉದಾತ್ತಗೊಂಡಿತು. ದಯೆ, ಪ್ರೇಮ, ಚಿತ್ತಸ್ಥಿರತೆ, ಉದಾತ್ತ ಧ್ಯೇಯ, ತ್ಯಾಗ, ಉದಾರ ಮನೋಧರ್ಮ ಇವುಗಳಿಗೆ ಸಂಕೇತವಾದ ಬುದ್ಧ ಹುಟ್ಟಿದ ನಾಡಲ್ಲಿ, ಅದ್ಭುತ ಬುದ್ಧ ಮಂದಿರ, ಅಲ್ಲೇ ಬೌದ್ಧ ವಿಹಾರ ಇರುವ ಆ ತಾಣದಲ್ಲಿ ನಾನು ಕೆಲವು ಹೊತ್ತು ನೀರವವಾಗಿ ಕುಳಿತು ಅಂತರ್ಮುಖಿಯಾದೆ. ಎಲ್ಲವೂ ಸುಂದರ, ಎಲ್ಲವೂ ಪ್ರಶಾಂತ. ಅದರ ಜೊತೆ ಜೊತೆಗೆ ಕಾಠಮಾಂಡೊ ಬೀದಿಗಳಲ್ಲಿ ಕಾಣುವ ಭಿಕ್ಷುಕರು, ದರ್ಬಾರ್‌ಚೌಕ (ಚಿತ್ರ ೧೦) ಹತ್ತಿರ ತೊಟ್ಟಿಯಿಂದ ಎತ್ತಿ ಐಸ್‌ಕ್ರೀಮ್‌ಬಟ್ಟಲನ್ನು ನೆಕ್ಕುತ್ತಿದ್ದ ಚಿಂದಿ ಬಾಲಕ, ಮಾವೋ ವಾದಿಗಳಿಂದ ಕ್ಷುಭಿತಗೊಂಡಿರುವ ನೇಪಾಳ ಎಲ್ಲವೂ ಜ್ಞಾಪಕಕ್ಕೆ ಬಂದುವು. ನಾಲ್ಕು ಮಾರಿ ಬಿಸ್ಕತ್‌ತಿಂದು, ನೀರು ಕುಡಿದು ಕೆಳಗೆ ಇಳಿದೆ. ಸಕ್ಕರೆ ತೊಂದರೆಯಿಂದ ಎಲ್ಲಿ ಹೋದರೂ ಬಿಸ್ಕತ್, ನೀರು ನನ್ನ ಜೊತೆಯಲ್ಲಿಯಿರುತ್ತಿದ್ದವು. ಬಿಸ್ಕತ್‌ತಿಂದೆ; ಹಸಿದಿರುವ ಬಡಜನಕ್ಕೆ ಎಲ್ಲಿ ಬಿಸ್ಕತ್ತು? ಒಣರೊಟ್ಟಿಯೂ ಅಲಭ್ಯ. ಸ್ವಯಂಭೂ ಬೌದ್ಧ ದೇವಾಲಯದ ಮೇಲ್ಭಾಗದ ಶಿಖರದ ನಾಲ್ಕೂ ಕಡೆ ಇರುವ ಬುದ್ಧನ (ಬೋಧಿಸತ್ವನ) ಮುಖಗಳು ದೂರಕ್ಕೆ ಕಾಣಿಸುತ್ತವೆ. ಬುದ್ಧ ಜಗತ್ತಿನತ್ತ ನಾಲ್ಕೂ ದಿಕ್ಕುಗಳ ಕಡೆ ಆಸೆಗಣ್ಣಿಂದ ನೋಡುತ್ತಿದ್ದಾನೆ.

ಅಲ್ಲಿಂದ ಸ್ವಲ್ಪ ದೂರದಲ್ಲಿನ ಮಹಾಬೌದ್ಧ ವಿಹಾರವು ಜಗತ್ತಿನ ಮಹಾಸ್ತೂಪಗಳಲ್ಲಿ ಒಂದು. ಆ ಸ್ತೂಪವನ್ನು ಹತ್ತಿ ಮೇಲೆಲ್ಲಾ ಓಡಾಡಬಹುದು. ಅಲ್ಲಿ ಗಂಟೆಗಳನ್ನು ತಿರುಗಿಸಿ ಪ್ರಾರ್ಥನೆ ಸಲ್ಲಿಸಬಹುದು. 'ಬುದ್ಧಂ ಸರಣಂ ಗಚ್ಛಾಮಿ, ಸಂಘಂ ಸರಣಂ ಗಚ್ಛಾಮಿ, ಧಮ್ಮಂ ಸರಣಂ ಗಚ್ಛಾಮಿ' ಎಂಬ ಶ್ಲೋಕ ಮತ್ತು ಇತರ ಬೌದ್ಧಧರ್ಮದ ಪವಿತ್ರ ಮಂತ್ರಗಳು ಉದ್ದಕ್ಕೂ ಧ್ವನಿವರ್ಧಕದಿಂದ ಕೇಳಿಸುತ್ತಿದ್ದುವು. ಮನಸ್ಸು ಮುದಗೊಂಡಿತು. ನಾನು ಆಂತರಂಗಿಕವಾಗಿ ಒಬ್ಬ ಬೌದ್ಧನೇ ಆಗಿದ್ದೆ; ಆ ಇಡೀ ದಿನವಂತೂ ಬೌದ್ಧನೇ ಆಗಿಬಿಟ್ಟೆ.

ಬೆಟ್ಟದ ಬುಡದಲ್ಲಿ ಕಾಠಮಾಂಡೊ ನಗರದ ಅಂಚಿಗೆ ನಾಲ್ಕಾರು ಕಿಲೋ ಮೀಟರ್‌ದೂರದಲ್ಲಿರುವ ಬುಧಾ ನೀಲಕಂಠನ ಕ್ಷೇತ್ರವು ಪ್ರಸಿದ್ಧ. ಅದು ಕೊಳದಲ್ಲಿ ಮಲಗಿರುವ ಬೃಹತ್‌ಶೇಷಶಾಯಿ ವಿಷ್ಣುವಿನ ವಿಗ್ರಹವಾಗಿದ್ದು (ಚಿತ್ರ ೧೨). ಹೂತುಹೋಗಿದ್ದ ಅದನ್ನು ಯಾವನೋ ಒಬ್ಬ ವಯಸ್ಕ (ವೃದ್ಧ, 'ಬುಧ') ನೀಲಕಂಠ ಎಂಬಾತ ಗುರುತಿಸಿದ್ದರಿಂದ ಆ ಹೆಸರು ಬಂತೆಂದು ಕತೆಗಳಿವೆ. ಸಮೀಪದ ಬೆಟ್ಟಗಳ ಮೇಲೆಲ್ಲ ಮನೆಗಳಿವೆ.

ಭಕ್ತಪುರವು ಇಕ್ಕಟ್ಟು ರಸ್ತೆಗಳಿರುವ, ಎಲ್ಲಿ ನೋಡಿದರೂ ಗುಡಿಗಳೇ ಕಾಣಿಸುವ, ಒಂದು ರೀತಿಯಲ್ಲಿ ನೇಪಾಳದ ಸಾಂಸ್ಕೃತಿಕ ರಾಜಧಾನಿ. ಪನೌತಿ, ಧೂಲಿಖೇಲ್‌ಗಳ ಬಗ್ಗೆ ಹಿಂದೆಯೇ ಬರೆದಿದ್ದೇನೆ. ಎಲ್ಲಿ ನೋಡಿದರೂ ಗುಡ್ಡ, ಬೆಟ್ಟ, ದಟ್ಟ ಕಾಡು, ಗುಡ್ಡದ ಓರೆಗಳಲ್ಲಿ ಮನೆಗಳು, ಬಯಲಲ್ಲಿ ಹಸಿರು ಬತ್ತದ ಗದ್ದೆಗಳು. ಮಳೆಗಾಲದ ಕೊನೆಯ ದಿನಗಳಲ್ಲಿ ಹೋದ ನನ್ನ ಕಣ್ಣಿಗೆ ಕಾಣಿಸಿದ್ದು ಮೂರನೇ ಒಂದು ಭಾಗದಷ್ಟು ಮಾವೋ - ವಾದಿಗಳ ಹಿಡಿತದಲ್ಲಿರುವ ಹಸಿರು ನೇಪಾಳ (ಹಸಿದ ನೇಪಾಳವೂ ಅದು).

ಕಾಠಮಾಂಡೊ ಬೀದಿಗಳಲ್ಲಿ ಅಲ್ಲಿ ಇಲ್ಲಿ ಕಾಣಿಸುತ್ತಿದ್ದ ಮಾಂಸದ ಅಂಗಡಿಗಳಲ್ಲಿ ಪ್ರಾಣಿಗಳನ್ನು ಕಡಿದು ಅವುಗಳ ಮಾಂಸವನ್ನು, ಕೆಲವೆಡೆ ಅವುಗಳ ತಲೆಗಳನ್ನು ಮಾರಾಟಕ್ಕಿಟ್ಟುದನ್ನೂ ಮರೆಯಲಾರೆ. ಆ ದೃಶ್ಯ ನನ್ನ ಕಣ್ಮನಗಳನ್ನು ನೋಯಿಸುತ್ತಿತ್ತು.

ಪಶುಪತಿ ಮಹಾದೇವ ದೇವಾಲಯಕ್ಕೆ ನಾನು ಮೂರು ಬಾರಿ ಹೋದೆ. ಮೊದಲು ಹೋದಾಗ ಪ್ರವೇಶ ದ್ವಾರವನ್ನು ಪ್ರವೇಶಿಸುತ್ತಿದ್ದಂತೆ ಎಡೆಗಡೆ ಕಾಣಿಸಿದ್ದು ಭಗ್ನ ದೇವಾಲಯದ ಕಂಬಗಳ, ಚಪ್ಪಡಿಗಳ, ಇತರ ಅವಶೇಷಗಳ ರಾಶಿ. ಅದು ಹದಿಮೂರನೇ ಶತಮಾನದಲ್ಲಿ ನಡೆದ ಮುಸ್ಲಿಮರ ದಾಳಿಯಿಂದ ಹಾಳಾದ ಪಶುಪತಿ ದೇವಾಲಯದ ಅವಶೇಷಗಳೆಂಬುದು ಮುಂದೆ ಖಚಿತವಾಯ್ತು.

ಪಶುಪತಿ ದೇಗುಲಕ್ಕೆ ಹೋಗಿ ಅಲ್ಲಿನ ಕೆಲವು ಚಿಕ್ಕ ದೊಡ್ಡ ಆಲಯಗಳನ್ನು ನೋಡುತ್ತ, ವೇದಮಂತ್ರ ಪಠಣವನ್ನು ಆಲಿಸುತ್ತ ಭಾಗಮತಿ ನದಿ ಆಚೆಯ ಕಡೆ ಹೋಗಿ ಅಲ್ಲಿ ಗುಡ್ಡ ಹತ್ತಿ ಅಲ್ಲೆಲ್ಲ ಓಡಾಡಿದೆ. ಎದುರಿಗೇ ಭಾಗಮತಿ ತೀರದಲ್ಲಿ ಉದ್ದಕ್ಕೂ ಚಿತೆಗಳು ಉರಿಯುತ್ತಿವೆ. ನೂರಾರು ವರ್ಷಗಳಲ್ಲಿ ಸಾವಿರಾರು ಜನ ಭಕ್ತರು ಬಂದು ಹೋದ ಪವಿತ್ರ ಪುಣ್ಯಕ್ಷೇತ್ರ. "ಅಸತೋ ಮಾ ಸದ್ಗಮಯ….", "ಓಂ ಭೂರ್ಭುವಸ್ಸುವಃ…", "ಪೂರ್ಣಮದಂ ಪೂರ್ಣಮಿದಂ ಪೂರ್ಣಾತ್‌ಪೂರ್ಣಮುದಚ್ಯತೆ…" ಇತ್ಯಾದಿ ಪುಣ್ಯ ಶ್ಲೋಕಗಳು ಬಾಯಿಂದ ಹೊರಟು ಬಾಯಲ್ಲೇ ಗುಣುಗಿದುವು. "ದುಃಖೇಷ್ವನುದ್ವಿಗ್ನ ಮನಾಃ…." ಇತ್ಯಾದಿ ಗೀತವಾಕ್ಯಗಳು, "ಗುರುಬ್ರಹ್ಮಾ ಗುರುರ್ವಿಷ್ಣುಃ…" ಇವೇ ಮೊದಲಾದ ಪ್ರಾರ್ಥನಾ ಶ್ಲೋಕಗಳು, "ಪರಮ ಜಿನೇಂದ್ರ ವಾಣಿಯೆ ಸರಸ್ವತಿ…", "ಉಳ್ಳವರು ಶಿವಾಲಯದ ಮಾಡುವರು…", "ತುಳೀ ಹತ್ತಿ ತುಳೀ ಒತ್ತಿ ಅಹಂಕಾರವಳಿಯಲಿ…" ಎಂಬಿವೇ ಮೊದಲಾದ ಹಿಂದಿನ, ಇಂದಿನ ಕನ್ನಡ ವಾಙ್ಮಯದ ಸೂಕ್ತಿಗಳು ಬಾಯಿಂದ ತಾನಾಗಿ ಬಂದುವು. ಭಾರತ, ಭಾರತೀಯ ಸಂಸ್ಕೃತಿ, ಪರಂಪರೆ, ಇತಿಹಾಸ ಎಲ್ಲವೂ ನೆನಪಿಗೆ ಬಂದುವು. ಮನಸ್ಸು ಬಹು ಪ್ರಫುಲ್ಲಿತವಾಯಿತು, ಸ್ವಲ್ಪ ಎತ್ತರಕ್ಕೆ ಏರಿತು, ಶುಭ್ರವಾಯಿತು, ಹಗುರವಾಯಿತು, ಮಿಂಚಿನ ಸಂಚಾರವಾಯಿತು. ಅದನ್ನೆಲ್ಲ ವಿಸ್ತರಿಸಲಾರೆ. ಆಧುನಿಕ ಪೂರ್ವ ಭಾರತವನ್ನು ಕಾಣುವವರು ನೇಪಾಳಕ್ಕೆ ಬರಬೇಕು. ಇಲ್ಲಿ ಬರೀ ಅನುಪಮ ಸುಂದರ ದೃಶ್ಯಗಳಲ್ಲ; ಜೊತೆಗೆ ತನ್ನೆಲ್ಲ ದೌರ್ಬಲ್ಯಗಳೊಡನೆ ಯಾವುದೋ ಒಂದು ಉದಾತ್ತ ಸಂಸ್ಕೃತಿಯೊಂದರ ಮಿಡಿತ ಜೀವಂತವಾಗಿರುವುದರ ಅನುಭವವಾಗುತ್ತದೆ. ನೇಪಾಳದಲ್ಲಿ ಆಧುನಿಕಪೂರ್ವ ಭಾರತವನ್ನು ಕಂಡದ್ದೂ ಕೂಡ ನನ್ನ ಮಟ್ಟಿಗೆ ಒಂದು ಬಗೆಯ ಸಂಶೋಧನೆಯೇ.

ನೇಪಾಳವನ್ನು ತೆರೆದ ಕಣ್ಣುಗಳಿಂದ ನೋಡಿದೆ. ಹಾಗೆಯೇ ನೇಪಾಳವನ್ನು ತೆರೆದ ಮನಸ್ಸಿನಿಂದ "ಕಂಡೆ." "ನೋಡು", "ಕಾಣು" – ಒಂದು ವಸ್ತುವನ್ನು ನೋಡುವುದು ಬೇರೆ; ಆ ವಸ್ತು ತನ್ನ ಸಮಸ್ತ ಚೈತನ್ಯದೊಢನೆ ನಮ್ಮ ಪ್ರಜ್ಞೆಯ ಭಾಗವಾಗುವುದು, ಎಂದರೆ ಅದನ್ನು "ಕಾಣು"ವುದು ಬೇರೆ. ಗೊಮ್ಮಟನನ್ನು ಬರಿಗಣ್ಣಿಂದ ನೋಡುವುದು ಬೇರೆ; ಅದು ಅಸೀಮ ತ್ಯಾಗದ ಸಂಕೇತವೆಂಬ ಅನುಭವದಿಂದ ಉದಾತ್ತಗೊಳ್ಳುತ್ತ ಅದನ್ನು "ಕಾಣು"ವುದು ಬೇರೆ. ನೇಪಾಳವನ್ನು ನೋಡಿದೆ; ಇಂದ್ರಿಯಗಳು ಸಂತೋಷಗೊಂಡವು. ನೇಪಾಳವನ್ನು ಕಂಡೆ, ಆತ್ಮ ತೃಪ್ತಿಯನ್ನು ಪಡೆದೆ. ಅದನ್ನು ಆಧ್ಯಾತ್ಮಿಕ ಅನುಭವವೆಂದರೂ ಸರಿಯೇ.

ತೀವ್ರ ಮಾನಸಿಕ ಯಾತನೆಯನ್ನು ಬಹು ದಿನಗಳಿಂದ ಅನುಭವಿಸುತ್ತಿದ್ದ ನಾನು ಭಾರತಕ್ಕೆ ವಾಪಸ್‌ಹೊರಡುವ ಹಿಂದಿನ ದಿನ ಪ್ರಧಾನ ಅರ್ಚಕರಾದ ಮಹಾಬಲೇಶ್ವರ ಭಟ್ಟರ ಸೂಚನೆಯಂತೆ ದೇವಾಲಯಕ್ಕೆ ಬೆಳಿಗ್ಗೆ ಏಳು ಮೂವತ್ತಕ್ಕೇ ಹೋದೆ. ಪಶುಪತಿ ಮಹಾದೇವನ ಗರ್ಭಗುಡಿ ಒಳಗೆ, ಲಿಂಗಕ್ಕೆ ತೀರ ಸಮೀಪದಲ್ಲಿ ನಿಂತು ಅದಕ್ಕೆ ನಡೆಯುವ ಶಾಸ್ತ್ರೋಕ್ತ ಪೂಜೆಯನ್ನು ಬಹು ಹತ್ತಿರದಿಂದ ನೋಡಿದೆ. ಮುಚ್ಚಿದ ಬಾಗಿಲುಗಳ ಹೊರಗೆ ಜನ ಆಗಲೇ ಬರಲು ಬಹುಸಂಖ್ಯೆಯಲ್ಲಿ ಜಮಾಯಿಸಿದ್ದರು. ಶುಭ್ರ ಮನಸ್ಸನ್ನು ಶುಭ್ರ. ಆಲೋಚನೆಯನ್ನು ದಯಪಾಲಿಸಲು ಭಗವಂತನನ್ನು ಬೇಡಿಕೊಂಡೆ. ಒಳಗಿನ ನನ್ನ ನೋವುಗಳನ್ನು ಮೌನವಾಗಿ ಬಿನ್ನವಿಸಿಕೊಂಡೆ. ಕತ್ತಲಲ್ಲಿ ದಾರಿ ತೋರಲು ಮನಸಾರೆ ಪ್ರಾರ್ಥಿಸಿದೆ. ಪೂಜೆ ಮುಗಿದು, ನನ್ನ ಕೈಗೆ ಭಗವತ್‌ಪ್ರಸಾದವನ್ನು ಅರ್ಚಕರು ನೀಡುತ್ತಿದ್ದಂತೆ ಜನಸಮೂಹ ಒಳನುಗ್ಗಿತು. ನನ್ನ ಭಗವದ್‌ಭಕ್ತಿ ಅಕೃತಕವಾದುದು; ಯಾವುದೇ ಫಲಾಪೇಕ್ಷೆಯ ಗುರಿಯುಳ್ಳಳುದಲ್ಲ. ನಾಡಿಗಾಗಿ ರಾಷ್ಟ್ರಕ್ಕಾಗಿ ಬದುಕನ್ನು ವ್ಯಯಿಸಲು ಅನುಗ್ರಹ ಮಾಡುವುದನ್ನು ಭಗವಂತನಲ್ಲಿ ಬೇಡಿಕೊಳ್ಳುವುದಾಗಿತ್ತು. ಪ್ರಫುಲ್ಲ ಮನಸ್ಸಿನಿಂದ ಹೊರಬಂದೆ.**

ಮಾರನೆಯ ಬೆಳಿಗ್ಗೆ ೭.೩೦ಕ್ಕೆ ನೇಪಾಳದಿಂದ ವಿಮಾನದಲ್ಲಿ ಹೊರಟು ಬೆಂಗಳೂರನ್ನು ಹತ್ತು ಗಂಟೆಗೆ ಸೇರಿದೆ. ನಾನು ಉಳಿದುಕೊಂಡಿದ್ದ ಜೈನ ಭವನದ ಕಸಗುಡಿಸುವ ಇಬ್ಬರು ಹೆಣ್ಣು ಮಕ್ಕಳಿಗೆ ಸ್ವಲ್ಪ ಹಣ ಕೊಡಬೇಕೆಂದಿದ್ದೆ. ಆದರೆ ಹಿಂದಿನ ದಿನದ ಮಧ್ಯಾಹ್ನದಿಂದ ಅವರು ಗೈರು ಹಾಜರಾಗಿ ಬಿಟ್ಟಿದ್ದರು. ನನ್ನ ಜೇಬಲ್ಲಿ ಉಳಿದಿದ್ದ ಎಂಬತ್ತು ನೇಪಾಳಿ ರೂಪಾಯಿಗಳನ್ನು ನೇಪಾಳಿ ಏರ್‌ಲೈನ್ಸ್‌ನ ಸೌಜನ್ಯಯುತ ಗಗನಸಖಿಯರ ಕೈಯಲ್ಲಿ ಕೊಟ್ಟು, "ಇದನ್ನು ಕಷ್ಟದಲ್ಲಿರುವ ಯಾರಾದರೂ ಹೆಣ್ಣು ಮಕ್ಕಳಿಗೆ ನೀಡಿ" ಎಂದು ಹೇಳಿ, "ನೇಪಾಳದಲ್ಲಿ ನನ್ನ ಬದುಕಿನ ಅತ್ಯಂತ ಸಂತಸದ ಫಲಪ್ರದ ದಿನಗಳನ್ನು ಕಳೆದೆ. ನೇಪಾಳಕ್ಕೆ ನನ್ನ ನಮಸ್ಕಾರ ತಿಳಿಸಿ" ಎಂದು ಹೇಳಿ ವಿಮಾನದಿಂದ ಹೊರಬಂದೆ.

ನೇಪಾಳಕ್ಕೆ ಹೋದೆ, ಬಂದೆ. ಅಲ್ಲಿಂದ ಬಂದ ಮೇಲೆ ಅಲ್ಲಿಗೆ ಹೋಗಿ ಬರದ ದಿನವೇ ಇಲ್ಲವೆಂಬುದರಲ್ಲಿ ಸ್ವಲ್ಪವೂ ಉತ್ಪ್ರೇಕ್ಷೆಯಿಲ್ಲ.

**ಅನುಬಂಧ – ೮: ನೇಪಾಳವನ್ನು 'ನೋಡಿದೆ' ಹಾಗೂ 'ಕಂಡೆ'**

ಭಾರತದ ಬಿಹಾರ್, ಉತ್ತರ ಪ್ರದೇಶಗಳಿಗೆ ಅಂಟಿಕೊಂಡಿರುವ ನೇಪಾಳವು ಇಂದು ಸ್ವತಂತ್ರ ರಾಷ್ಟ್ರವಾಗಿದ್ದರೂ ಅದೂ ಭಾರತವೂ ಒಂದೇ ಸಂಸ್ಕೃತಿಯನ್ನು ಹಂಚಿಕೊಂಡಿರುವುದು, ಒಂದು ಸಂಸ್ಕೃತಿಯ ಭಾಗವಾಗಿರುವುದು ಎಲ್ಲರಿಗೆ ತಿಳಿದ ವಿಷಯವೇ ಆಗಿದೆ. ನಾನು ಚಿಕ್ಕವನಾಗಿದ್ದಾಗ ನನ್ನ ಹಳ್ಳಿಯ ವೀರಭದ್ರದೇವರ ಮೆರವಣಿಗೆಯ ಮುಂದೆ ಕತ್ತಿ ಹಿಡಿದು, 'ಖಡ್ಗ' ಎಂದೇ ಕರೆಯುತ್ತಿದ್ದ ವೀರಭದ್ರನ ಪರಾಕ್ರಮವನ್ನು ವರ್ಣಿಸುವ ಕತೆಯನ್ನೂ ಅವನ ಪರಾಕುಗಳನ್ನೂ ಹೇಳುತ್ತಿದ್ದವರು ಸಮಾಳದ ವಾದ್ಯಕ್ಕನುಗುಣವಾಗಿ ಆವಶೇಷಪರವಾಗಿ ಕುಣಿಯುತ್ತಿದ್ದರು. ಆ ಅನಕ್ಷರಸ್ಥ ಭಕ್ತರ ಬಾಯಲ್ಲಿ ಬರುತ್ತಿದ್ದ 'ಖಡ್ಗ' ಘೋಷಣೆಗಳಲ್ಲಿ ಅಂಗ, ವಂಗ, ಕಳಿಂಗ ಇವೇ ಮೊದಲಾದ 'ಚಪ್ಪನ್ನೈವತ್ತಾರು ದೇಶ'ಗಳಲ್ಲಿ ನೇಪಾಲವೂ ಒಂದಾಗಿರುತ್ತಿತ್ತು. ಅವರಿಗೆ 'ನೇಪಾಳ' ಎಲ್ಲಿದೆಯೆಂಬುದು ತಿಳಿಯದಿದ್ದರೂ ಆ ದೇಶದ ಹೆಸರು ತಮ್ಮ ಸಂಸ್ಕೃತಿಯ ಭಾಗವಾಗಿದ್ದುದರ ಅರಿವಿತ್ತು. ಅಂತಹ ನೇಪಾಳದ ಹೆಸರು ಕನ್ನಡ ಕಾವ್ಯ, ಶಾಸನಗಳಲ್ಲಿ, ಗಾದೆಗಳಲ್ಲಿ ('ನೇಪಾಳದ ಭೂಪಾಳನಾದರೆ ಗೋಪಾಳನಿಗೇನು ಬಂತು?') ನೂರಾರು ಕಡೆ ಉಕ್ತವಾಗಿದೆ. ಅಲ್ಲಿನ ಹಿಮಾಲಯ ಶಿಖರಗಳು ಹಿಂದೂಗಳಿಗೆ ಅತ್ಯಂತ ಪವಿತ್ರ ಸ್ಥಾನಗಳು: ಅವು ಶಿವನ ಆವಾಸ ಸ್ಥಾನ. ಅಲ್ಲಿನ ಪಶುಪತಿನಾಥ ದೇವಾಲಯವು ಹಿಂದೂಗಳಿಗೆ ವಾರಣಾಸಿಯ ವಿಶ್ವೇಶ್ವರ ದೇವಾಲಯದಷ್ಟೇ ಪೂಜ್ಯವಾದುದು. ಅಂತಹ ನೇಪಾಳವನ್ನು ನೋಡಬೇಕೆಂಬ ನನ್ನ ಕುತೂಹಲವು ಕೆಲವು ತಿಂಗಳ ಹಿಂದೆ ಕಾರ್ಯಗತವಾಗಿ ನನ್ನ ಬದುಕಿನ ವಿಶೇಷ ಅನುಭವವನ್ನು ಪಡೆದೆ. ನೇಪಾಳಕ್ಕೆ ಹೋಗಿ ಬಂದೆ; ಬಂದಮೇಲೂ ಆಗಾಗ್ಗೆ ನೇಪಾಳಕ್ಕೆ ಮಾನಸಿಕವಾಗಿ ಹೋಗಿ ಇರುತ್ತೇನೆ; ವಾಪಸ್‌ಬರಲು ಒಮ್ಮೊಮ್ಮೆ ಮನಸ್ಸಾಗುವುದಿಲ್ಲ.

ಕೃಷ್ಣಾ, ಗೋದಾವರಿ, ಗಂಗಾನದಿಗಳಂತಹ ನದಿಗಳು ಬರಿಯ ವಕ್ರ ಬೆಳ್ಳಿಗೆರೆಗಳಂತೆ ವಿಮಾನದಿಂದ ಕಾಣುತ್ತಿದ್ದವು. ಇದ್ದಕ್ಕಿದ್ದಂತೆ ಉನ್ನತ ಬೆಟ್ಟಗಳು, ಚಿಕ್ಕ ಬೆಟ್ಟಗಳ ಮೇಲೆ ಬಿಳಿಯ ಬಿಡಿ ಮನೆಗಳು, ಕಣಿವೆಗಳಲ್ಲಿ ಪುಟ್ಟ ಊರುಗಳು ಕಾಣುತ್ತಿದ್ದಂತೆ ಕಾಠಮಾಂಡೊ ಸಮೀಪಿಸುತ್ತಿದ್ದುದನ್ನು ಘೋಷಿಸಲಾಯ್ತು. ಆ ಅತ್ಯಂತ ಮನೋಹರ ದೃಶ್ಯಗಳನ್ನು ಸವಿಯುತ್ತಿದ್ದಂತೆ ಸುತ್ತ ಬೆಟ್ಟಗಳಿಂದಾವೃತವಾದ ವಿಶಾಲ ಕಣಿವೆಯ ಕಾಠಮಾಂಡೊ ವಿಮಾನ ನಿಲ್ದಾಣದಲ್ಲಿ ಇಳಿದಾಗ ನನ್ನನ್ನು ಸ್ವಾಗತಿಸಿ ಕರೆದೊಯ್ಯಲು ಬಂದಿದ್ದ ಮಾಲಾ ಮಲ್ಲ ಎಂಬ ಇತಿಹಾಸಜ್ಞೆ (ಗೆಳೆಯ ಡಾ. ಕೆ. ಎಸ್. ಅರುಣಿ ಮೂಲಕ ಪರಿಚಯ) ನೇಪಾಳವನ್ನಾಳಿದ ಮಲ್ಲ ದೊರೆಗಳ ವಂಶದವರು. ಮಲ್ಲ ವಂಶದವರು ಕರ್ನಾಟಕ ಮೂಲದವರಲ್ಲ; ನೇಪಾಳದ ಸ್ಥಳೀಯ ನೆವಾರಿ ವರ್ಗಕ್ಕೆ ಸೇರಿದವರು. ಅವರು ತಮಗಿಂತ ಹಿಂದೆ ಕಾಠಮಾಂಡೊ ಸಮೀಪದ ಭಕ್ತಪುರದಿಂದ ಆಳಿದ ಕರ್ನಾಟ ಮೂಲದ, 'ಕರ್ನಾಟ'ರೆಂದೇ ಕರೆದುಕೊಂಡಿದ್ದ ಕರ್ನಾಟ ವಂಶದ ದೊರೆಯ ರಾಜಕುಮಾರಿಯನ್ನು ಮದುವೆಯಾಗಿದ್ದುದರಿಂದ ತಮ್ಮನ್ನು 'ಕರ್ನಾಟ'ರೆಂದೇ ಕರೆದುಕೊಂಡಿದ್ದರು. ನೆವಾರಿಗಳ ಒಂದು ವರ್ಗವು ಇಂದಿಗೂ ತಮ್ಮನ್ನು 'ಕರ್ನಾಟ' ಎಂದು ಕರೆದುಕೊಳ್ಳುತ್ತದೆ. ಅಂತಹ ಮಾಲಾ ಅವರ ಮನೆಗೆ ಮುಂದೆ ಹೋಗಿ ಅವರ ಆತಿಥ್ಯ ಸ್ವೀಕರಿಸಿದೆ. ಕ್ರಿ. ಶ. ೧೧೦೦ - ೧೩೨೧ಳರವರೆಗೆ ದಕ್ಷಿಣ, ಮಧ್ಯ ನೇಪಾಳವನ್ನು ಆಳಿದವರು ಕರ್ನಾಟಕದ ನಾನ್ಯದೇವನ ವಂಶಸ್ಥರು. ನಾನ್ಯದೇವನು (ಮೂಲ ಹೆಸರು ಅಚ್ಚಗನ್ನಡದ 'ನನ್ನಿದೇವ') ಕಲ್ಯಾಣ ಚಾಲುಕ್ಯರ ವಿಕ್ರಮಾದಿತ್ಯನ ಜೊತೆ ಹೋಗಿ, ವಿಕ್ರಮಾದಿತ್ಯನು ಗೆದ್ದ ಬಿಹಾರ ನೇಪಾಳಗಳಲ್ಲಿ ಆ ಚಕ್ರವರ್ತಿಯ ಪ್ರತಿನಿಧಿಯಾಗಿ, ಸಾಮಂತನಾಗಿ ಆಳಿದ ದೊರೆ. ನಾನ್ಯದೇವನ ರಾಜಧಾನಿ ಸಿಮ್ರೌನ್‌ಗಡ್‌ಎಂಬ ನಗರವು ಈಗ ದಕ್ಷಿಣ ನೇಪಾಳದ ಒಂದು ಹಳ್ಳಿ: ಭಗ್ನ ದೇವಾಲಯ ಶಿಲ್ಪಗಳಿರುವ, ಹಂಪಿಯಂತಹ ಒಂದು ಐತಿಹಾಸಿಕ ಸ್ಥಳ. ನೇಪಾಳಕ್ಕೆ ಹೋಗುವ ಮುಖ್ಯ ಪ್ರಚೋದನೆಗಳಲ್ಲಿ ಕನ್ನಡದ ದೊರೆಗಳು ಅದನ್ನು ಆಳಿದ್ದುದೂ ಒಂದಾಗಿತ್ತು. ಬಿಹಾರದ, ನೇಪಾಳದ ಚರಿತ್ರೆಯ ಕೃತಿಗಳು ಆ ಭಾಗದ ಜನಜೀವನವನ್ನು (ರಾಜಕೀಯ, ಸಾಂಸ್ಕೃತಿಕ) ವ್ಯವಸ್ಥೆಗೊಳಿಸುವಲ್ಲಿ 'ಕರ್ನಾಟ' ವಂಶದ ದೊರೆಗಳು ವಹಿಸಿದ ಪಾತ್ರವನ್ನು ಮುಕ್ತಕಂಠದಿಂದ ಪ್ರಶಂಸಿಸಿವೆ.

**'ತಲ್ಲಣ'ದ ಅನುಭವ**

ನಾನು ಕಾಠಮಾಂಡೊ ತಲುಪಿದ ಸಂಜೆಯೇ ತಿಳಿದ ವಿಷಯ: ಮಾರನೆಯ ದಿನ ಮಾವೊವಾದಿಗಳು 'ನೇಪಾಳ್‌ಬಂದ್'ಗೆ ಕರೆ ನೀಡಿದ್ದರು. ಎಲ್ಲ ಶಾಲಾ ಕಾಲೇಜುಗಳು, ಕಚೇರಿಗಳಿಗೆಲ್ಲ ಅಂದು ರಜೆ. ನೇಪಾಳದ ಮೂರನೆಯ ಒಂದು ಭಾಗ ಮಾವೋವಾದಿಗಳ ಹಿಡಿತದಲ್ಲಿದೆ. ಬಡವರ ಪರ, ರಾಜಸತ್ತೆಯ ವಿರೋಧ ಎಂದು ಕರೆದುಕೊಳ್ಳುವ ಅವರ ಖಚಿತ ಹಕ್ಕೊತ್ತಾಯಗಳು ಯಾರಿಗೂ ತಿಳಿಯವು; ಆದರೆ ಶಸ್ತ್ರಾಸ್ತ್ರಗಳನ್ನವಲಂಬಿಸಿರುವ ಅವರಿಗೆ ಜನ ಹೆದರಿದ್ದರು. ನೇಪಾಳದ ಗೆಳೆಯರು ನನಗೆ ನಾನು ಉಳಿದಿದ್ದ ನಗರ ಮಧ್ಯದ ಜೈನ ಮಂದಿರದಿಂದ ಮೂರು ಕಿಲೋ ಮೀಟರ್‌ದೂರದ ಪಶುಪತಿ ಮಹಾದೇವನ ದೇವಾಲಯಕ್ಕೆ ನಡೆದುಕೊಂಡು ಹೋಗಿ ಬರಲು ತೊಂದರೆಯಿಲ್ಲವೆಂದು ಸೂಚಿಸಿದ್ದರು. ಮಾರನೆಯ ದಿನ ಬೆಳಿಗ್ಗೆ ಎಂಟಕ್ಕೆ ಉಪಹಾರ ಮುಗಿಸಿ ರಸ್ತೆಗೆ ಇಳಿದರೆ ವಾಹನ ಸಂಚಾರವಿಲ್ಲ. ವಿರಳವಾಗಿ ಸೈಕಲ್ಲುಗಳು, ಮೋಟಾರ್‌ಬೈಕುಗಳು, ಇನ್ನೂ ವಿರಳವಾಗಿ ಕಾರುಗಳು. ಜನಸಂಚಾರವೂ ವಿರಳವಾಗಿತ್ತು. ರಸ್ತೆಯ ಉದ್ದಕ್ಕೂ ಅಲ್ಲಿ ಇಲ್ಲಿ ರೈಫಲ್‌ಹಿಡಿದ ಕಾವಲುಗಾರರು ಗಸ್ತು ತಿರುಗುತ್ತಿದ್ದರು. ಕೆಲವೆಡೆ ಜನರನ್ನು ವಾಹನಗಳನ್ನು ನಿಲ್ಲಿಸಿ ತನಿಖೆ ಮಾಡುತ್ತಿದ್ದರು. ನಾನು ನಡೆದು ಹೋಗುತ್ತಿರುವಾಗ ನನ್ನ ಹಿಂದೆ ಫಟ್‌ಎಂಬ ಶಬ್ದವಾಗಿ ಅದು ನಾನೂ ಸೇರಿದಂತೆ ಅಲ್ಲಿನ ಜನರಿಗೆ 'ಭಢ್' ಎಂಬ ಆಸ್ಫೋಟವಾಗಿ ಕೇಳಿಸಿತು. ಜನ ನಿಂತಲ್ಲೇ ತಿರುಗಿ ನೋಡಿದರು; ಮನೆಗಳ ಹೊರಕ್ಕೆ ಕೆಲವರು ಭೀತರಾಗಿ ಇಣುಕಿ ನೋಡಿದರು. ಅದು ಬಾಂಬ್‌ಸ್ಫೋಟವೆಂದೇ ಎಲ್ಲರೂ ನಂಬುವ ವಾತಾವರಣ ನೇಪಾಳದ್ದು, ವಿಶೇಷವಾಗಿ ಅಂದಿನ ದಿನದ್ದು. ಇಬ್ಬರು ಏರಿದ್ದ ಸೈಕಲ್ಲಿನ ಚಕ್ರವು ಒಡೆದು ಸಿಡಿದಿತ್ತು. ಆ ಸೈಕಲ್‌ಸವಾರರಿಗೇ ಎಷ್ಟು ಭಯವಾಗಿತ್ತೆಂದರೆ ಐದು ನಿಮಿಷ ಅವರಿಗೆ ಏನೂ ತೋಚದೆ ಹಾಗೇ ಗರಬಡಿದವರಂತೆ ನಿಂತು ಬಿಟ್ಟಿದ್ದರು.

ನಾನು ಜೈನ ಮಂದಿರಕ್ಕೆ ಹಿಂದಿರುಗಿದೆ. ಮುಂದಿನ ಹದಿನೈದು ದಿನಗಳ ನೇಪಾಳಿ ಪತ್ರಿಕೆಗಳಲ್ಲಿ ಪ್ರತಿದಿನವು ನಡೆಯುತ್ತಿದ್ದ ಬಾಂಬ್‌ಸ್ಫೋಟ, ಹಲ್ಲೆ, ಜನರ ಅಪಹರಣ, ಮಂತ್ರಿಗಳ ಅಧಿಕಾರಿಗಳ ಅಪಹರಣ ಯತ್ನ ಇವೇ ತುಂಬಿರುತ್ತಿದ್ದವು. ಸುಂದರ ನೇಪಾಳ ಇಂದು ತತ್ತರಿಸಿ ಹೋಗಿದೆ.

**'ಪ್ರಜಾ', 'ರಂಭಾ'**

ಕಾಠಮಾಂಡೊದ ಐತಿಹಾಸಿಕ ಪ್ರಸಿದ್ಧ ಹನುಮಾನ್. ಧೋಕಾದ ಅದ್ಭುತ ಕಾಷ್ಠಮಂದಿರಗಳ ರಚನೆಗೆ ಬೆರಗಾಗಿ ಓಡಾಡುತ್ತಿದ್ದಾಗ ಅಲ್ಲೇ ರಸ್ತೆ ಬದಿಯಲ್ಲಿ ಐಸ್‌ಕ್ರೀಮ್‌ಎಂಜಲು ಬಟ್ಟಲುಗಳನ್ನು ನೆಕ್ಕುತ್ತಿದ್ದ ಎಲುಬು ಮಕ್ಕಳ ದೃಶ್ಯ ನನ್ನ ಕರುಳನ್ನು ಹಿಂಡಿತು. ನೇಪಾಳ ಒಂದು ಬಡ ರಾಷ್ಟ್ರ. ಬೆಟ್ಟಗುಡ್ಡಗಳಲ್ಲಿ ವಾಸಿಸುವ ಅನಕ್ಷರಸ್ಥ ಕಾಡು ಜನರ ಬದುಕು ಅಸಹನೀಯ. ಮಾವೋವಾದಿಗಳು ಅಂತಹ ಕಡೆ ತಮ್ಮ ಪ್ರಬಲ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ. ಬಡಜನರ ಸಹಾನುಭೂತಿಯೂ ಅವರ ಕಡೆ ಇರುವಂತಿದೆ. ಮಳೆ ಬಂದು ಪ್ರವಾಹದಿಂದಾಗಿ ನಿರ್ವಸಿತರಾದ 'ಪ್ರಜಾ' ಎಂಬ ವರ್ಗದ ಜನರು ತಮ್ಮ ಗುಹೆಗಳಿಗೇ ಹಿಂದಿರುಗಬೇಕಾಗಿರುವ ಒಂದು ತೀವ್ರ ನೋವಿನ ಸಂಗತಿಯನ್ನು, ಆ ಜನರಲ್ಲಿ ರಂಭಾ ಎಂಬ ಹುಡುಗಿ ಶಾಲೆಯಲ್ಲಿ ಅಕ್ಷರ ಕಲಿಯುತ್ತಿದ್ದವಳು ಮತ್ತೆ ಹಕ್ಕಿ ಜೇನು ಬೇಟೆಗೆ ಹಿಂದಿರುಗಬೇಕಾಗಿರುವ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದೆ. 'ರಂಭಾ' – ನಮ್ಮಲ್ಲಿ ಸಂಸ್ಕೃತಪ್ರಿಯರು ಬಳಸುವ ವಿರಳ ಹೆಸರಾದರೆ ಅಲ್ಲಿ ಗಿರಿಜನರಲ್ಲೂ ಅಂತಹ ಹೆಸರುಗಳಿವೆ. (ರಂಭಾ – ಬಿಜ್ಜಳ ಚಕ್ರವರ್ತಿಯ ಒಬ್ಬ ರಾಣಿಯ ಹೆಸರು). ಆ 'ಅಪ್ಸರೆ' ಹೆಸರಿಗೂ ಅಲ್ಲಿನ ಕಡುಬಡತನಕ್ಕೂ ಎಲ್ಲಿಯ ಸಂಬಂಧ! ನೇಪಾಳದ ಬೀದಿಗಳ, ಅಂಗಡಿಗಳ ಹೆಸರುಗಳು, ವ್ಯಕ್ತಿನಾಮಗಳು ಸಂಸ್ಕೃತಮಯ. ಭಾರತವು ತನ್ನ ಬಡತನದ ಸ್ಥಿತಿಯಲ್ಲೂ ನೇಪಾಳಕ್ಕೆ ಎಲ್ಲ ಬಗೆಯ ಸಹಾಯವನ್ನು ಮಾಡಿದೆ. ಇನ್ನೂ ಹೆಚ್ಚು ಮಾಡುವ ಅಗತ್ಯವಿದೆ. ನೇಪಾಳಕ್ಕೆ ಮಾಡುವ ಸಹಾಯ ತನ್ನ ಸಂಸ್ಕೃತಿ ಸಂವರ್ಧನೆಗೇ ಮಾಡಿದ ಪ್ರಯತ್ನವೂ ಆಗುತ್ತದೆ.

**ಪಶುಪತಿ ದೇವಾಲಯ**

ನೇಪಾಳದ ದೊರೆಗಳ ಮಾತ್ರವಲ್ಲ, ಎಲ್ಲ ನೇಪಾಳಿಗಳ ಆರಾಧ್ಯದೈವ ಪಶುಪತಿನಾಥ ಮಹಾದೇವನ ದೇವಾಲಯವು ಕಾಠಮಾಂಡೊದ ಅತಿ ಮುಖ್ಯ ಸ್ಥಳ. ನಗರದ ಅಂಚಿನಲ್ಲಿರುವ ಆ ದೈವವು ನಗರದ ರಕ್ಷಣಾ ದೇವತೆಯೂ ಹೌದು.

ಆದರೆ ಹಿಂದೆ ದೇವಾಲಯದ ಆಚೆ ಭಾಗಕ್ಕೆ ಹೋಗಿ ಜನರು ಮನೆಗಳನ್ನು ಕಟ್ಟುತ್ತಿರಲಿಲ್ಲವಂತೆ: ತಾವು ಮಹಾದೇವನ ರಕ್ಷಣೆಯಿಂದ ವಂಚಿತರಾಗಬಹುದಾದ ಭಯ ಅವರದು. ಎರಡು ಗುಡ್ಡಗಳ ಮಧ್ಯೆ ಹರಿಯುವ ಬಾಗಮತಿ ನದಿಯ ಬಲದಂಡೆಯ ಮೇಲೆ ಇರುವ ಆ ಭವ್ಯ ದೇವಾಲಯವನ್ನು ಪ್ರವೇಶಿಸುತ್ತಿದ್ದಂತೆ ನಾನು ರೋಮಾಂಚಿತನಾದೆ. ಬೃಹತ್‌ಲೋಹದ ನಂದಿ ವಿಗ್ರಹದ ಮುಂಭಾಗದಲ್ಲಿ ಎತ್ತರದ, ಸುಂದರ ಕಾಷ್ಠ ಶಿಲ್ಪಗಳ ದೇವಾಲಯದಲ್ಲಿನ ಪಶುಪತಿನಾಥ ಸ್ವಾಮಿಯ ದರ್ಶನಕ್ಕಾಗಿ ಜನ ಸಾಲುಗಟ್ಟಿ ನಿಂತಿದ್ದರು. ಬೃಹತ್‌ಶಿವಲಿಂಗದ ನಾಲ್ಕು ಕಡೆ ಶಿವನ ಈಶಾನವನ್ನು ಹೊರತುಪಡಿಸಿ ಉಳಿದ ನಾಲ್ಕು ಮುಖಗಳನ್ನು ಕೆತ್ತಿದ್ದಾರೆ. ಅಂತಹ ಶಿವಲಿಗಗಳನ್ನು ಮುಖಲಿಂಗಗಳೆಂದು ಕರೆಯುತ್ತಾರೆ. ಆ ಕೇಂದ್ರ ದೇವಾಲಯದ ಸುತ್ತ ಅಕ್ಷರಶಃ ನೂರಾರು ಚಿಕ್ಕ ದೊಡ್ಡ ದೇವಾಲಯಗಳು ಬಯಲು ಲಿಂಗಗಳು; ಅಲ್ಲೇ ಸಂತರು ಕುಳಿತು ಭಜನೆ ಮಾಡುತ್ತಿರುತ್ತಾರೆ. ವೇದ ಮಂತ್ರಗಳನ್ನು ಪಠನ ಮಾಡುತ್ತಾರೆ. ನದಿಯ ಅಂಚಿನಲ್ಲಿ ಉದ್ದಕ್ಕೂ ಇರುವ ಕಟ್ಟೆಯ ಮೇಲೆ ಚಿತೆಯ ವೇದಿಕೆಯಲ್ಲಿ ಶವಗಳ ದಹನ ನಡೆಯುತ್ತದೆಯಾದರೂ ಎಲ್ಲವನ್ನೂ ಶುಭ್ರವಾಗಿಟ್ಟಿದ್ದಾರೆ. ರಾಜ, ರಾಣಿಯರ ಸುಂದರ ಭಕ್ತಿ ಭಾವಪೂರಿತ ಶಿಲಾಮೂರ್ತಿಗಳು ಹಲವಿವೆ. ಬಾಗಮತಿ ನದಿಯನ್ನು ಸೇತುವೆ ಮೂಲಕ ದಾಟಿ ಆಚೆ ಹೋದರೆ ಆ ಗುಡ್ಡದ ಮೆಟ್ಟಿಲುಗಳು, ಶಾಸನಗಳು, ಬಯಲು ಲಿಂಗಗಳು. ಪಶುಪತಿ ದೈವ, ಭಾಗ್ಯಮತಿ ನದಿ, ಅದರ ನೀರ ಹರಿವಿನ ಪಕ್ಕದಲ್ಲೇ ಚಿತೆಗಳು ಎಲ್ಲವೂ ನನಗೆ ಜಗತ್ತಿನ, ಬದುಕಿನ ಸಂಕೇತವಾಗಿ ಕಾಣಿಸಿದುವು. 'ಜೀವನ' ಎಂದರೆ ಬದುಕು ಎಂದೂ ಅರ್ಥ, ನೀರು ಎಂದೂ ಅರ್ಥ.

ಆ ಗುಡ್ಡವನ್ನು ಹತ್ತಿ ಆಚೆ ಇಳಿದರೆ ಅಲ್ಲೇ ಗುಹೇಶ್ವರಿ ಎಂದು ಜನ ಕರೆಯುವ ದೇವಾಲಯವಿದೆ. ಅದನ್ನು ನೋಡುತ್ತಿದ್ದಂತೆ ಬಹುಶಃ 'ಗುಹ್ಯೇಶ್ವರಿ' ಇರಬಹುದೇ ಎಂಬ ನನ್ನ ಊಹೆ ನಿಜವಾಯ್ತು. ರಹಸ್ಯ ವಾಮಾಚಾರದ ಪಂಥದ ಕೇಂದ್ರವಾಗಿದ್ದಿರಬಹುದಾದ ಆ ದೇವಾಲಯದ ಒಳಗೆ ನೆಲದ ಕಲ್ಲಿನ ಮೇಲೆ ವಿಚಿತ್ರವಾಗಿದ್ದ ಮೂರ್ತಿಯಿತ್ತು. ಪೂಜಾ ಸಾಮಗ್ರಿಗಳಿಂದ ತುಂಬಿ ಹೋಗಿದ್ದ ಅದರ ಮೂಲ ಸ್ವರೂಪವನ್ನು ನೋಡಲಾಗಲಿಲ್ಲ. ಅಲ್ಲೇ ವಿಚಿತ್ರ ವೇಷದ ದಂಡಗಳ ಸನ್ಯಾಸಿಗಳನ್ನು ಕಂಡೆ. ಅಲ್ಲಿ ಕಳೆದ ಒಂದು ಸಂಜೆ ನನ್ನ ಬದುಕಿನ ಸಾರ್ಥಕ ದಿನಗಳಲ್ಲೊಂದು. ಪಶುಪತಿ ದೇವಾಲಯದ ಅರ್ಚಕರು ದಕ್ಷಿಣ ಕನ್ನಡ ಜಿಲ್ಲೆಯವರು. ಅವರು ಶೃಂಗೇರಿ ಸ್ಮಾರ್ತ್‌ಸಂಪ್ರದಾಯದವರೇ ಆಗಿರಬೇಕು. (ಅಲ್ಲಿನ ಹಿಂದಿನ 'ಮೂಲ ಭಟ್' ಶ್ರೀರಾವಲ್‌ಅನಂತಪದ್ಮನಾಭ ಸೋಮಯಾಜಿ ಅವರು ನಿವೃತ್ತರಾಗಿ ಕುಂದಾಪುರ ತಾಲೂಕಿನಲ್ಲಿ ನೆಲೆಸಿದ್ದಾರೆ. ಈಗಿನ 'ಮೂಲ ಭಟ್' ಶ್ರೀ ಮಹಾಬಲೇಶ್ವರ ಭಟ್ಟರು).

ಕಾಠಮಾಂಡೊದ ಯಾವುದೇ ರಸ್ತೆಯಲ್ಲಿ ಓಡಾಡಿದರೂ ಚಿಕ್ಕ ದೊಡ್ಡ ದೇವಾಲಯಗಳು, ಮಂಟಪಗಳು ಕಾಣುತ್ತವೆ. ಅಲ್ಲಿನ ಜನ ದೈವಭಕ್ತರು; ಸಂಪ್ರದಾಯ ಪ್ರಿಯರು. (ಈಗಿನ ಆಧುನಿಕತೆಯೂ ಸಾಕಷ್ಟು ಕಾಣಿಸುತ್ತದೆ).

**'ಕುಮಾರಿ' ಪಂಥ**

ಋತುಮತಿಯಾಗದ ಚಿಕ್ಕ ಹುಡುಗಿಯನ್ನು ದೇವತೆಯಂತೆ ಆರಾಧಿಸುವ ಒಂದು ವಿಶೇಷ ಪಂಥ (Cult) ನೇಪಾಳದಲ್ಲಿದೆ. ಮೂರು ನಾಲ್ಕು ವರ್ಷದ ಧೈರ್ಯದ ಹುಡುಗಿಯೊಬ್ಬಳನ್ನು ಆರಿಸಿ ಬೇಲದ ಜೊತೆ ಮದುವೆ ಮಾಡಿ ಅವಳನ್ನು 'ಕುಮಾರಿ'ಯನ್ನಾಗಿಸುತ್ತಾರೆ. ಅಂದಿನಿಂದ ಅವಳು ಜನರ ಬಣ್ಣಿಸಲಾಗುತ್ತದೆ. ಅವಳ ಆಶೀರ್ವಾದವನ್ನು ಎಲ್ಲರೂ ಬಯಸುತ್ತಾರೆ. ನಾನು ಹೋದಾಗ (ಸೆಪ್ಟೆಂಬರ್) ಇಂದ್ರಜಾತ್ರಾ ವೈಭವದಿಂದ ನಡೆದಿತ್ತು; ಆ ಸಂದರ್ಭದಲ್ಲಿ ನೇಪಾಳದ ರಾಜ ದಂಪತಿಗಳು ಅವಳ ದರ್ಶನ ಮಾಡಿ ನೇಪಾಳವನ್ನು ಆಳಲು ಅವಳಿಂದ 'ಅನುಮತಿ' ಪಡೆಯುತ್ತಾರೆ. ಆ ಮುಗ್ಧ ಹುಡುಗಿಯ ಮೆರವಣಿಗೆ ನೋಡಲು ಜನ ಜಾತ್ರೆಯೋ ಜಾತ್ರೆ: ಆ ಜಾತ್ರೆಯನ್ನು ಕಂಡು, ಮಾರನೆಯ ದಿನ 'ಕುಮಾರಿಘರ್' ಪ್ರವೇಶಿಸಿ, ಮಹಡಿ ಮೇಲೆ ನಾಲ್ಕು ವರ್ಷದ ಮುಗ್ಧ ಸುಂದರ ಹುಡುಗಿಯನ್ನು ನೋಡಿದೆ ಅವಳನ್ನು ಯಾರೋ ಹೆಂಗಸರು ಪ್ರೀತಿಯಿಂದ ಎತ್ತಿಕೊಂಡೇ ಬಂದರು. ಅವಳು ಋತುಮತಿಯಾಗುತ್ತಿದ್ದಂತೆ ಅವಳ 'ಕುಮಾರಿ' ಪಟ್ಟ ಅಂತ್ಯಕ್ಕೆ ಬಂದು ಬೇರೆ ಹುಡುಗಿಯನ್ನು ಅವಳ ಸ್ಥಾನಕ್ಕೆ ತರುತ್ತಾರೆ. ಬಳಿಕ ಅವಳು ಮದುವೆಯಾಗಬಹುದು. ದೇವತೆಯಾಗಿದ್ದ ಹುಡುಗಿಯನ್ನು ಮದುವೆಯಾಗಲು ಯುವಕರು ಹೆದರಿ ಅವಳು ಆಜನ್ಮ ಅವಿವಾಹಿತೆಯಾಗಿಯೇ ಉಳಿಯುವುದೂ ಉಂಟು. ಆ ಪದ್ಧತಿಯನ್ನು ರದ್ದು ಮಾಡಲು ಕೆಲವರು ಕೊಟ್ಟ ಸಲಹೆಗೆ ನೇಪಾಳದ ಎಲ್ಲ ಪಕ್ಷಗಳೂ ವಿರೋಧ ವ್ಯಕ್ತಪಡಿಸಿದುವು. ಆ ಹುಡುಗಿ

ನೇಪಾಳದ ಶಾಕ್ಯ ಕುಲದ ಬೌದ್ಧಸಂಪ್ರದಾಯದವಳಾಗಿರಬೇಕು. ನೇಪಾಳದಲ್ಲಿ ಹಿಂದೂ - ಬೌದ್ಧ ದೇವಾಲಯದಲ್ಲಿ ಆಳೆತ್ತರದ ಸುಂದರ ಬುದ್ಧ ವಿಗ್ರಹವು ನನ್ನಲ್ಲಿನ ಉದಾತ್ತ ಮನೋಭಾವವನ್ನು ವರ್ಧಿಸಿತು.

**ನಾಲ್ಕಡಿ ಹಿಮಾಲಯ ದರ್ಶನ**

ಅಲ್ಲಿ ನನಗೆ ಸ್ನೇಹಿತರಾದ 'ಜಂಗಂ' ಕುಲನಾಮದ ಶ್ರೀ ಭರತ್‌ಮಣಿ ಜಂಗಂ ಎಂಬುವರು ನಾಲ್ಕು ಜಂಗಂ ಮಠಗಳನ್ನು ತೋರಿಸಲು ನೇಪಾಳದ ಬೇರೆ ಬೇರೆ ಎಡೆಗಳಿಗೆ ಕರೆದೊಯ್ದರು. ಕರ್ನಾಟಕದಿಂದ ಹೋದ ವೀರಶೈವರು ಸ್ಥಾಪಿಸಿದ ಮಠಗಳು ಅವು. ಭಕ್ತಪುರ ಜಂಗಂ ಮಠದಲ್ಲಿ ಎರಡು ಕನ್ನಡ ಶಾಸನಗಳಿವೆ. (ಕಾಲ ಕ್ರಿ.ಶ. ೧೯೬೯). ಪನೌತಿ ಎಂಬಲ್ಲಿನ ಇಂದ್ರೇಶ್ವರ ದೇವಾಲಯದ ಅರ್ಚಕರು 'ಜಂಗಂ' ಜನರೇ. ಅದೊಂದು ಯಾರನ್ನೂ ಮಂತ್ರ ಮುಗ್ಧವಾಗಿಸುವ ಪ್ರಾಕೃತಿಕ ಸೌಂದರ್ಯದ ಸ್ಥಳ. ಅಲ್ಲಿನ ಪುಟ್ಟ ನದಿ, ಸುತ್ತ ಇರುವ ಹಸಿರು ಬೆಟ್ಟಗಳ ಮೇಲೆ ಮನೆಗಳು, ಅವುಗಳ ಸುತ್ತ ಕಾಡು, ಬಯಲು ಬತ್ತದ ಗದ್ದೆಗಳು ಇವುಗಳ ಚೆಲುವು ಅವರ್ಣನೀಯ ಧೂಲಿಖೇಲ್‌ಎಂಬುದು ಒಂದು ಕಣಿವೆಯ ಪಕ್ಕದ ಊರು. ಅಲ್ಲಿನ ಇಳಿಜಾರು ಕಣಿವೆಯಲ್ಲಿ ನೀರಿನ ಝರಿ. ಅಲ್ಲೇ ಗೋಖುರೇಶ್ವರ ದೇವಾಲಯ. ಆ ದೇವಾಲಯದ ಅಂಗಳದಲ್ಲಿ ಹರಿದು ನಿಂತಿದ್ದ ನೀರನ್ನು ಒಬ್ಬ ಜಟಾಧಾರಿ ಕಾವಿವಸ್ತ್ರದ ಸನ್ಯಾಸಿ ಎತ್ತಿ ಆ ಕಡೆ ಹಾಕುತ್ತಿದ್ದಾರೆ. ನನಗೆ ಆ ಕ್ಷಣ ವೇದದ ಋಷಿಗಳು ವಾಸಿಸುತ್ತಿದ್ದ ಪ್ರಶಾಂತ ಅರಣ್ಯದ ನೆನಪು ಬಂದಿತು. ಅಲ್ಲೇ ಸ್ವಲ್ಪ ಎತ್ತರದ ದಿಣ್ಣೆಯ ಮೇಲೆ ಅತ್ಯಾಧುನಿಕ ಹೋಟಲ್. ಆ ದೇವಾಲಯದ ಅರ್ಚಕರು ವಾರಣಾಸಿಯ ಜಂಗಮವಾಡಿ ಮಠದಲ್ಲಿ ಕನ್ನಡಿಗರೊಡನೆ ಸಂಸ್ಕೃತ ಕಲಿತು ನಾಲ್ಕಾರು ಕನ್ನಡ ಪದಗಳನ್ನು ನೆನಪಿಟ್ಟುಕೊಂಡಿದ್ದ 'ಜಂಗಂ' ವ್ಯಕ್ತಿ. ಆ ಆಧುನಿಕ ಹೋಟೆಲ್‌ಮಾಲಿಕರೂ ಕೂಡ ಜಂಗಂ ಜನರ ಬಂಧುಗಳು. ಹಿಮಾಲಯ ಪ್ರವಾಸಕ್ಕೆ ಹೋಗುವವರು ಬಂದು ಉಳಿಯುವ ಜಾಗವೇ ಧೂಲಿಕೇಲ್; ಅಲ್ಲಿಂದ ಚೀನಾದ ಗಡಿ ಕೇವಲ ಅರವತ್ತು ಕಿಲೋ ಮೀಟರ್. ಮುಂದಿನ ಐದಾರು ದಿನಗಳಲ್ಲಿ ಪುಟ್ಟ ವಿಮಾನವೊಂದರಲ್ಲಿ ಹಿಮಾಲಯ ದರ್ಶನಕ್ಕೆ ಹೋದೆ. ನಿರಭ್ರ ವಾತಾವರಣವಿದ್ದರೆ ಕಾಣುವ ದೃಶ್ಯಗಳು ಅವರ್ಣನೀಯವಂತೆ. ನಮಗೆ ಆ ಒಂದು ಗಂಟೆಯ ವಿಮಾನದ ಹಾರಾಟದಲ್ಲಿ ಕಾಣಿಸಿದ್ದು ಕೆಳಗೆ ಬರೀ ಮೋಡಗಳು, ಮೇಲೆ ಆಕಾಶ. ಎಲ್ಲೋ ದಿಗಂತದ ಒಂದು ಮೂಲೆಯಲ್ಲಿ ಇಪ್ಪತ್ತೊಂಬತ್ತು ಸಾವಿರದ ಇಪ್ಪತ್ತೆಂಟು ಅಟಿ ಎತ್ತರದ ಸಾಗರಮಾತಾ (ಎವರೆಸ್ಟ್) ಶಿಖರದ ನಾಲ್ಕು ಅಡಿಗಳಷ್ಟು ತುದಿ ಕಾಣಿಸುತ್ತಿತ್ತು. ಆ ನಾಲ್ಕಡಿ ಶಿಖರದ ದರ್ಶನಕ್ಕೆ ನಾನು ಕೊಟ್ಟಿದ್ದು ನಾಲ್ಕು ಸಾವಿರ ರೂಪಾಯಿ. ನಾನಂದುಕೊಂಡೆ: ಶಿವ ಇರುವುದು ಉತ್ತುಂಗ ಪರ್ವತದ ತುದಿಯಲ್ಲಾದ್ದರಿಂದ ಶಿವನ ವಾಸಸ್ಥಾನದ ದರ್ಶನ ಆಯಿತು; ಶಿವನ ದರ್ಶನವೇ ಆದಂತಾಯಿತು.

**ಭಾರತೀಯ ಸಂಸ್ಕೃತಿ**

ಆಧುನಿಕ ಪೂರ್ವ ಭಾರತದ ಸಂಸ್ಕೃತಿ ಇಂದಿಗೂ ಜೀವಂತವಾಗಿ ಕಾಣಸಿಗುವುದು ನೇಪಾಳದಲ್ಲಿ. ಭಾರತೀಯನಾಗಿರುವ ನನಗೆ ಅಲ್ಲಿ ಎಲ್ಲೆಲ್ಲೊ ಕಾಣಿಸಿದ್ದು ಭಾರತೀಯತೆ ಅಥವಾ ನೇಪಾಳೀಯತೆ. ನೇಪಾಳವನ್ನು 'ನೋಡು'ವುದು ಒಂದು; ಅದರ ಹೊರಚೆಲುವನ್ನು ನೋಡಬೇಕು. ಅದನ್ನು 'ಕಾಣು'ವುದು ಬೇರೆ; ನೇಪಾಳದ ಹಿಂದೆ ಮಿಡಿಯುತ್ತಿರುವ ಆಧ್ಯಾತ್ಮಿಕತೆಯನ್ನು 'ಕಾಣ'ಬೇಕು. ನಾನು ನೇಪಾಳವನ್ನು ನೋಡಿದೆ, ಹಾಗೆಯೇ 'ಕಂಡೆ'.

* ಈ ಮಾತು ಕರ್ನಾಟಕಕ್ಕೂ ನಿಜ, ಭಾರತದ ವಿಷಯದಲ್ಲೂ ನಿಜ. ನೇಪಾಳದ ವಿಷಯದಲ್ಲಂತೂ ಹೆಚ್ಚು ನಿಜ.

** ನನಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದುದು ಪಂಪಾ ವಿರೂಪಾಕ್ಷನ ಕೃಪೆಯಿಂದ ಎಂಬುದನ್ನು ಈಗಾಗಲೇ ದಾಖಲಿಸಿದ್ದೇನೆ. ಪಂಪ ಪ್ರಶಸ್ತಿ ನನಗೆ ಬಂದುದು ಪಶುಪತಿಯ ಕೃಪೆಯಿಂದ ಎಂಬ ದೃಢ ನಂಬಿಕೆ ನನ್ನದಾಗಿದೆ. ನನ್ನ ನೇಪಾಳದ ಸಂಶೋಧನ ಪ್ರವಾಸದ ಫಲಿತಾಂಶಗಳನ್ನು ಪತ್ರಿಕಾಗೋಷ್ಠಿ ಮೂಲಕ (೮.೧೦.೨೦೦೨) ಸಾರ್ವಜನಿಕರಿಗೆ ತಿಳಿಸಿದ್ದು ನನಗೆ ಪಂಪ ಪ್ರಶಸ್ತಿ ನೀಡುವ ನಿರ್ಧಾರವನ್ನು ತೀವ್ರಗೊಳಿಸಿರಬಹುದು. (ಅಥವಾ ಪಂಪ ಪ್ರಶಸ್ತಿ ಬರದೇ ಹೋಗಿದ್ದರೂ ಆಶ್ಚರ್ಯವಿಲ್ಲ.)

ಸೆಪ್ಟೆಂಬರ್‌ತಿಂಗಳ ಕೊನೆಯ ವಾರ ನೇಪಾಳದಿಂದ ವಾಪಸಾದೆ; ಪಂಪ ಪ್ರಶಸ್ತಿ ನನಗೆ ದೊರೆತದ್ದು ಡಿಸೆಂಬರ್೨೩ ರಂದು ಪತ್ರಿಕೆಗಳಲ್ಲಿ ಅಧಿಕೃತವಾಗಿ ಪ್ರಕಟವಾಯಿತು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಷಯ ತಿಳಿದುದೂ ೨೩ನೇ ತಾರೀಖು. ೨೩ನೇ ತಾರೀಖು ನನ್ನ ಬದುಕಿನ ಇನ್ನೂ ಕೆಲವು ಮುಖ್ಯ ಘಟನೆಗಳ ದಿನ.

ಇದು ಭಾವನಾತ್ಮಕ ವಿಷಯ; ಸಂಶೋಧನ ಕೃತಿಯಲ್ಲಿ ಇಂತಹುದಕ್ಕೆ ಅವಕಾಶವಿಲ್ಲವೆಂದು ಯಾರಿಗಾದರೂ ಅನ್ನಿಸಿದರೆ ಆಶ್ಚರ್ಯವಿಲ್ಲ. ಸಂಶೋಧನೆ ಬಗ್ಗೆ ನಾನು ಸಂಪೂರ್ಣ ವಸ್ತುನಿಷ್ಠ ದೃಷ್ಟಿಯವನೆಂದು ಮತ್ತೆ ಹೇಳಬೇಕಿಲ್ಲ.

# ಅನುಬಂಧ (೬)

**ಅನುಬಂಧ – ೬ : ಕೆಲವು ಹೊಸ ಶೋಧಗಳು**

೧. ನೇಪಾಳದ ಕನ್ನಡ ಶಾಸನಗಳನ್ನು ಪ್ರಥಮವಾಗಿ ಓದಿ ಅವುಗಳ ಮೌಲ್ಯವನ್ನು ಗುರುತಿಸಿದ್ದು; ಅವು ಕರ್ನಾಟಕದಿಂದ ಅತ್ಯಂತ ದೂರದಲ್ಲಿ ದೊರಕಿರುವ ಕನ್ನಡ ಶಾಸನಗಳು.

೨. ನೇಪಾಳದ "ಜಂಗಂ" ಮಠದ ಕಟ್ಟಡವು ದೊಡ್ಡ ಸಂಕಣ್ಣ ನಾಯಕನಿಂದ (ಕ್ರಿ.ಶ. ೧೫೬೫) ನಿರ್ಮಾಣಗೊಂಡ ವಿಷಯ. ಹನುಮಾನ್‌ಘಾಟ್‌ಪ್ರದೇಶದ ಶಿಲಾಮೂರ್ತಿಗಳು ವೀರಶೈವ ಗುರುಗಳವು ಎಂದು ಗುರುತಿಸಿದ್ದು.

೩. ಭಕ್ತಪುರದ ಜಂಗಂ ಮಠದ ಕಾಶಿ ವಿಶ್ವೇಶ್ವರ ಲಿಂಗವನ್ನು ದೊಡ್ಡ ಸಂಕಣ್ಣ ನಾಯಕನು ಕಾಶಿಯಿಂದ ನೇಪಾಳಕ್ಕೆ ಕೊಂಡೊಯ್ದು ಸ್ಥಾಪಿಸಿದ ವಿಷಯ.

೪. ನೇಪಾಳದ "ಕರ್ನಾಟ" ರಾಜರ ವಂಶಸ್ಥರು ಇಂದಿಗೂ ಇರುವ ಸಂಗತಿ; ಅವರ ವಂಶಾವಳಿಯನ್ನು ಪ್ರಕಟಿಸಿದ್ದು.

೫. "ಕರ್ನಾಟ" ರಾಜವಂಶದ ಪದ್ಮಲ್ಲದೇವಿ, ಬಿಜ್ಜಲದೇವಿ, ದೇಗುಲ ದೇವಿ, ವೀರಮ್ಮದೇವಿ ಇಂತಹ ಹೆಸರುಗಳ ಮಧ್ಯದ '– ಲ –', '-ಮ್ಮ –' ಕಾರಣವಾಗಿ ಅವು ಕರ್ನಾಟಕದ ಹೆಸರುಗಳೆಂಬ ಸಂಗತಿ.

೬. ನೆವಾರಿಗಳಲ್ಲಿ "ಕರ್ನಾಟ" ಎಂಬ ವರ್ಗದವರಿರುವುದು; ಅಂತೆಯೇ ಕುಡುಖ್‌ಜನರು ತಾವು ಕರ್ನಾಟಕದಿಂದ ಬಂದವರೆಂದು ಹೇಳಿಕೊಳ್ಳುವುದು. 'ಕುಡುಖ್' ಮತ್ತು ದಕ್ಷಿಣ ಕನ್ನಡದ ಕೊರಗ ಜನರಿಗೆ ಇರುವ ಭಾಷಿಕ ಹಾಗೂ ಸಾಮಾಜಿಕ ದಟ್ಟ ಸಾಮ್ಯ.

೭. "ತಲೇಜು" ದೇವತೆ ಮೂಲತಃ ತುಳಜಾ ಭವಾನಿಯೇ ಎಂಬುದು ಪ್ರಸಿದ್ಧ ವಿಷಯವಾದರೂ ಆ ಎರಡೂ ದೇವತೆಗಳನ್ನು ತೌಲನಿಕವಾಗಿ ಸಮೀಕ್ಷಿಸಿರುವುದು. ತುಳಜಾಭವಾನಿಯು ಮೂಲತಃ ಕರ್ನಾಟಕದ ದೇವತೆ ಮಾತ್ರವಲ್ಲ, ತುಳಜಾ ಭವಾನಿ ಸೇರಿದಂತೆ ಇಂದಿನ ಮಹಾರಾಷ್ಟ್ರದ ನಾಲ್ಕೂ 'ರಾಷ್ಟ್ರೀಯ' ದೈವಗಳು (ತುಳಜಾ, ಕೊಲ್ಲಾಪುರದ ಮಹಾಲಕ್ಷ್ಮಿ, ಖಂಡೋಬ, ವಿಠೋಬ) ಇವು ಮೂಲತಃ ಕರ್ನಾಟಕದ ದೈವಗಳೆಂಬುದನ್ನು ಗುರುತಿಸಿದ್ದು.

೮. ಇಂದಿಗೂ ನೇಪಾಳದ ದೊರೆಗಳು ತಮ್ಮ ರಾಜ್ಯವನ್ನಾಳಲು 'ಕುಮಾರಿ' ಮೂಲಕ ವರ್ಷಕ್ಕೊಮ್ಮೆ ಪರೋಕ್ಷವಾಗಿ ಪ್ರಾಚೀನ ಕರ್ನಾಟಕದ ತುಳಜಾ ಭವಾನಿಯ ಅನುಮತಿ ಪಡೆಯಬೇಕು ಎಂಬ ಸಂಗತಿ.

೯. ಭಾರತದ ಹೊರಗೆ ಆಳಿದ ಕರ್ನಾಟಕ ದೊರೆಗಳ ಪ್ರದೇಶಕ್ಕೇ ಹೋಗಿ ಅವರ ಆಡಳಿತದ ಪ್ರಭಾವ ಕುರಿತಂತೆ ನಡೆದಿರುವ ಅಧ್ಯಯನಗಳಲ್ಲಿ ಇದು ಮೊದಲನೆಯದು; ಮತ್ತು ಇದು ಅಂತಹ ಅಧ್ಯಯನಗಳ ಆರಂಭವಾಗಲಿ ಎಂದೂ ಹಾರೈಸುತ್ತೇನೆ. ಭಾರತದ ಬೇರೆ ಬೇರೆ ಕಡೆ ಆಳಿದ ದೊರೆಗಳ ಪ್ರದೇಶಗಳಿಗೂ ಹೋಗಿ ಪ್ರತ್ಯಕ್ಷ ಅಧ್ಯಯನಗಳನ್ನು ನಡೆಸುವ ಅಗತ್ಯವಿದೆ.

೧೦. "ಮಿತಾಕ್ಷರಾ" ಕೃತಿಯು ಬಂಗಾಳ ಹೊರತುಪಡಿಸಿ ಆಧುನಿಕ ಭಾರತದ ಕಾನೂನು ಗ್ರಂಥವಾಗುವಲ್ಲಿ ಕರ್ನಾಟಕ ದೊರೆಗಳ ಮುಖ್ಯಪಾತ್ರ ಇರುವುದನ್ನು ಗುರುತಿಸಿದ್ದು.

೧೧. ಭಕ್ತಪುರದ ತಲೇಜು ದೇವಾಲಯದ ಹಿಂಬದಿಯ "ಕರ್ನಾಟ" ರಾಜರ ಶಾಸನಯುಕ್ತ ಕಾಷ್ಠಶಿಲ್ಪಗಳ ಅಭಿಜ್ಞೆ (ಡಾ. ಶ್ರೇಷ್ಠ ಅವರ ಮೂಲಕ).

೧೨. ಇನ್ನು ಮಾಹಿತಿ ಜೋಡಣೆ, ವ್ಯಾಖ್ಯಾನ, ಚಿತ್ರಗಳು ಇವುಗಳ ಒಟ್ಟು ಸಮುದಾಯವೂ ನೂತನವೇ.

ಇವು ಕೆಲವು ಹೊಸ ಸಂಗತಿಗಳು: ಹೊರಬರಲು ನನ್ನನ್ನು ಆರಿಸಿಕೊಂಡು ನನ್ನನ್ನು ಸಾರ್ಥಕಗೊಳಿಸಿರತಕ್ಕವು. ಈ ರೀತಿ ಒಬ್ಬ ಸಂಶೋಧಕ ತನ್ನ ಕೃತಿಯಲ್ಲಿನ ಹೊಸ ಅಂಶಗಳನ್ನು ತಾನೇ ಎತ್ತಿಹಿಡಿಯುವ ಪದ್ಧತಿಯಿರದಿದ್ದರೂ ಅಂತಹ ಕೆಲಸ ಮಾಡಿರುವುದಕ್ಕೆ ಓದುಗೆ ಕ್ಷಮೆ ಇರಲಿ.

ಗ್ರಂಥ ಸೂಚಿ


| | |
|---|---|
| ಅನಂತಕೃಷ್ಣ ಸೋಮಯಾಜಿ | ಶ್ರೀ ಪಶುಪತಿ ದರ್ಶನ್(ಹಿಂದಿ) |
| ಇಮ್ಮಡಿ ಶಿವಬಸವ ಸ್ವಾಮಿಗಳು | ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ |
| ಕೃಷ್ಣಮೂರ್ತಿ ಮ.ಸು. | ಬಸವ ರಾಜ ಮಾರ್ಗ |
| ಗುರುಮೂರ್ತಿ ಜಿ. ಆರ್. | `ತಮಿಳುನಾಡಲ್ಲಿ ವೀರಶೈವರ ರೂಪರೇಖೆಗಳು.' (ರಂಭಾಪುರಿ ಬೆಳಗು, ಆಗಸ್ಟ್೨೦೦೦) |
| ಗೋವಿಂದ ತಂಡನ್ | ಪಶುಪತಿ ಕ್ಷೇತ್ರಕ್ಕೋ ಸಾಂಸ್ಕೃತಿಕ್ಅಧ್ಯಯನ್ (ನೇಪಾಳಿ) |
| ಚಿದಾನಂದಮೂರ್ತಿ ಎಂ. | ವಚನ ಶೋಧ I, II |
| ಚಿದಾನಂದಮೂರ್ತಿ ಎಂ. | ಕನ್ನಡಾಯಣ |
| ಚಿದಾನಂದಮೂರ್ತಿ ಎಂ. | ಹೊಸತು ಹೊಸತು |
| ದಾಸನೂರು ಕೂಸಣ್ಣ | ಶೋಷಿತ ಜಂಗಮರ ಮೀಸಲಾತಿ |
| ನಟರಾಜ್ಆಗುಂಬೆ, ಎಸ್. | ಹೊರನಾಡಿನ ಮೂರು ಕನ್ನಡ ರಾಜ್ಯಗಳು |
| (ಅನು.) ನಾರಾಯಣ ಪಿ.ವಿ. | ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ |
| ಪುರುಷೋತ್ತಮ ಬಿಳಿಮಲೆ | ಕೊರಗರ ಸಂಸ್ಕೃತಿ |

| | |
|---|---|
| ಪುರುಷೋತ್ತಮ ಲೋಚನ ಶ್ರೇಷ್ಠ | `ಐತಿಹಾಸಿಕ್ಏವಂ ಸಾಂಸ್ಕೃತಿಕ್ ಸಂದರ್ಭಮಾ ಭಕ್ತಪುರ ತಲೇಜುಮಾ ಗರಿನೇದರ್ಶ ಪೂಜಾ ವಿಧಾನ್ - ಏಕ್ಚ ಚರ್ಚಾ' (Rolamba. II No.3, 1991. ನೇಪಾಲಿ) |
| ಪುರುಷೋತ್ತಮ ಲೋಚನ ಶ್ರೇಷ್ಠ | 'ಭಕ್ತಪುಮಾ ವೀರಶೈವ ಮತಕೋ ವಿಕಾಸ್ ರ್ ಪ್ರಭಾವ್' (ಖೋಪೃಥ್. ೧೯೯೯ - ೨೦೦೦. ನೇಪಾಲಿ) |
| ಪುರುಷೋತ್ತಮ ಲೋಚನ ಶ್ರೇಷ್ಠ | 'ಜಂಗಮ್ಮಠಕಾ ಅಭಿಲೇಖ್' (Voice of History June 2000. ನೇಪಾಲಿ) |
| (ಸಂ.) ಬಸಪ್ಪ ಎಸ್. | ಶಿವತತ್ವ ಚಿಂತಾಮಣಿ |
| (ಸಂ.) ಬಸಪ್ಎಸ್. | ಸಾನಂದ ಚರಿತೆ |
| ಭರತ್ಮಣಿ ಜಂಗಮ್ | 'ಭಕ್ತಪುರಕಾ ಧಾರ್ಮಿಕ್ರ ಸಾಂಸ್ಕೃತಿಕ್ವಿಕಾಸ ಮಾ ಜಂಗಮ್ಜಾತಿಕೋ ಭೂಮಿಕಾ' (ನೇಪಾಲಿ) |
| ಮಹಾದೇವ ಶಾಸ್ತ್ರೀ ಜೋಶಿ | ಭಾರತೀಯ ಸಂಸ್ಕೃತಿ ಕೋಶ (ಮರಾಠಿ) |
| ಮೋಹನ ಪ್ರಸಾದ್ಖನಾಲ್ | ಸಿಮರೌನ್ಗಡ ಕೀ ಇತಿಹಾಸ್(ನೇಪಾಲಿ) |
| ರಾಘವೇಂದ್ರರಾವ್ಪಗಡೀ | ಮೈಥಿಲೀ ಕವಿ ವಿದ್ಯಾಪತಿ (ಮರಾಠಿ) |
| (ಸಂ.) ರಾಮದಯಾಲ್ರಾಕೇಶ್ | ಸಿಮರೌನ್ಗಡ ವಿಷಯಕ್ಸಂಗೋಷ್ಠಿ (ನೇಪಾಲಿ) |
| (ಸಂ.) ಶಾಮಾಶಾಸ್ತ್ರಿ ಆರ್. | ಕೆಳದಿನೃಪವಿಜಯ |
| (ಸಂ.) ಶಿವಾನಂದ ವಿ. | ಉತ್ತರ ಭಾರತದ ಕನ್ನಡದ ಹಸ್ತಪ್ರತಿ - ಇತರ ದಾಖಲೆಗಳ ಸೂಚಿ. |
| (ಅನು.) ಸದಾನಂದ ಕನವಳ್ಳಿ | ಮಿಥಿಲೆಯನ್ನಾಳಿದ ಕರ್ನಾಟರು (ಸಿಪಿಎನ್. ಸಿನ್ಹಾರವರ ಇಂಗ್ಲಿಷ್ಕೃತಿಯ ಕನ್ನಡಾನುವಾದ) |
| ಸೂರ್ಯನಾಥ ಕಾಮತ್ | ಕರ್ನಾಟಕದ ವೀರರಾಣಿಯರು |
| ಹರಿಶಂಕರ್ | ಕಾಶಿ ಕೆ ಘಾಟ್ - ಕಲಾತ್ಮಕ್ಏವಂ ಸಾಂಸ್ಕೃತಿಕ್ಅಧ್ಯಯನ್(ಹಿಂದಿ) |
| (ಸಂ.) ಹಿರೇಮಠ ಬಿ. ಕೆ. | ಸಮಗ್ರ ವಚನ ಸಂಪುಟ. ೯. |
| (ಸಂ.) ಹಿರೇಮಠ ಆರ್. ಸಿ. | ಪದ್ಮರಾಜ ಪುರಾಣ |
| (ಸಂ.) ಹಿರೇಮಠ ಆರ್. ಸಿ., ಸುಂಕಾಪುರ ಎಂ. ಎಸ್. | ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ |
| (ಸಂ.) ಹಿರೇಮಠ ಎ. ಎಸ್. | ವೀರಶೈವ ದರ್ಶನ |
| Amladi D. R. | Tulajapur Bhavani |
| Baidyanath Saraswathi | Kashi (Myth and Reality of a Classical Cultural Tradition) |
| (Ed.) Bajracharya, Sarma S. R. & Bakshi S. R. | Cultural History of Nepal |
| Bikram Jit Hasra | History of Nepal |

| | |
|---|---|
| Burrow T & Emeneau M. B. | A. Dravidian Etymological Dictionary |
| Chakravarti B. | Sens of Himachala Pradesh : their pan – Indian Heritage |
| Daniel Wright | History of Nepal |
| David N. Gedllner | Monk, Household& Tantrik Priest – Newar Buddhism & its hierarachy of ritual. |
| Dietmar Frank | Dreamland Nepal |
| (Ed.) Diwakar R. R. | Bihar through the Ages. |
| Dor Bahadur Bista | People of Nepal |
| Gopal B. R. | The Chalukyas of Kalyan |
| Grierson G. A. | Linguistic Survey of India, IV. |
| Gurujachar S. | `Vijnaneshwara & Contemporary Society' (Ed) M. S. Nagaraja Rao The Chalukyas of Kalyan. |
| Haraprasada Sastri Mahamahopadhyaya | A Catalogue of Palm – leaf Manuscripts and Selected Paper Manuscripts and Selected Paper Manuscripts. |
| Jagadish Chandra Sharma Regmi | Nepal – India Cultural Relations (ಅಪ್ರಕಟಿತ). |
| (Ed.) Majumdar R. C. | The Struggle for Empire |
| Mary M. Anderson | The Festivals of Nepal |
| Munni S. D. | Foreign Policy of Nepal |
| Netra B. Thapa | A short History of Nepal |
| Om Prakash Gupta | "The Iconoclasts and Varnasi in Mediieval Times''. (Varanasi through the Ages) |
| Radha Krishnamurthy | Shivatatavaratnakara of Keladi Basavaraja – A Cultural Study |
| Ramanatha Jha | Vidyapathi |
| Ray H. C. | Dynastic History of Northern India. II |
| (Ed.) Regmi D. R. | Inscriptions of Ancient Nepal. III |
| Rishikesh Raj Regmi | Khatmandu, Patan and Bhaktapur |
| Shankara Bhat D. N. | The Koraga Language |
| Singh K. S. | India's Communities, IV & V. |
| Singh P. B. | Shiva's Universe in Varanasi |
| Sinha C.P.N. | Mithila under the Karnatas |
| Sircar D. C. | `Kannadigas outside Karnataka down the Ages' (Ed) G. S. Halappa: Studies in Education and Culture (D.C. Pavate Felicitation Volume) |
| Sushil Tyagi | Indo – Nepalese Relations |

| | |
|---|---|
| Thurston Edgar | South Indian Castes and Tribes, III. |
| Turner R. L. | A Comparative Dictionary of Indo – Aryan Languages |
| Vinayaka Misra | Cultural Heritage of Mithila ನೇಪಾಳಿ ಬೃಹತ್‌ಶಬ್ದಕೋಶ (ನೇಪಾಳಿ) ಕನ್ನಡ ನಿಘಂಟು, III & IV Encyclopaedia Britannica (Macropaedia) Imperial Gazetteer of India, XXIV Maharashtra State Gazeteer (Osmanabad District) South Indian Inscriptions, I. The Europa World Year Book (2000), II The Khatamandu Post (26. 9. 02) Uttar Pradesh Gazetteer (Varanasi) ಶಿವಾಜಿ - ಮಲ್ಲಮ್ಮಾಜಿ ಸಮರೋತ್ಸವ (ಮರಾಠಿ) |